WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೮, ೨೦೧೧, (ಭಾದ್ರಪದ ೧೭, ಶಕ ವರ್ಷ ೧೯೩೩)	ಸಂಚಿಕೆ ೩೬

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ENERGY SECRETARIAT

Sub : Transfer of 0.85 MW Wind Power Capacity in favour of Ms/ Murugarajendra Oil Mills Pvt. Ltd. for captive purpose –reg.

Read :
1. Government Order No. EN 337 NCE 2006 dated : 16-10-2006.
2. Government Order No. EN 09 NCE 2007 dated : 12.01.2007.
3. Government Order No. EN 432 NCE 2010 dated : 16-12-2010.
4. Letter No. KRED/08/MOMPL-0.85 MW (GNS-05) RSR (30.6) 2011/1384 dated : 07/16-05-2011 received from the Managing Director, Karantaka Renewable Energy Development Limited, Bangalore.

Preamble:

In the Government order read at (1) above sanction has been accorded for Allottment of 63.00 MW. capacity wind power project at Davagere Bellary and Belgaum District to M/s Sree Ramulu Reddy & Co.

In the Government order read at (2) above, sanction has been accorded for change of company's name from M/s Sree Ramulu Reddy & Co to M/s RSR Power Pvt. Ltd.

In the Government order read at (3) above, sanction has been accorded from enhancement from 7.00 MW (part capacity of 63.00 MW) capacity Wind Power Project to 30.60 MW at Shirgaon, Naghral and Girgaon of Belgaum Distirct in favor of M/s RSR Power Pvt. Ltd.

The Managing Director, Karnataka Renewable Energy Development Limited, Bangalore in his letter read at (4) above has recommended for transfer of 0.85 MW Wind Power capacity in favour of M/s Murugarajendra Oils Mills Pvt. Ltd. at Naghral village, Chikkodi Taluk, Belgaum District from M/s RSR Power Pvt. Ltd.

The proposal has been examined in detail and hence the following order:-

Government Order No. : EN 230 NCE 2011, Bangalore, dated 06-06-2011

Government accords approval for transfer of 0.85 MW wind power capacity for captive purpose in favour of M/s Murugarajendra Oils Mills Pvt. Ltd. from out of the sanctioned capacity at Naghral village, Chikkodi Taluk, Belgaum District from 30.60 MW sanctioned to M/s RSR Power Pvt. Ltd. as detailed below:-

Village Name	Taluk & District	Land Survey Number	Extent in land	WTG location No.
Nagaral	Chikkodi/Belgaum	114/1	2 Acres per WTG of capacity 0.85 MW	GNS-05

By Order and in the name of the Governor of Karnataka

Suresh. B. Krishnappanavar

Under Secretary to Government

Energy Department

P.R. 1510

ENERGY SECRETARIAT

Sub : Permission to change the name of the company from M/s KMMI Steel Private Limited to M/s Minera Steel and Power Private Limited-reg.

Read : 1. Government Order No. EN 76 NCE 2008, dated : 20-2-2008.
2. Government Order No. EN 211 NCE 2009, dated : 31-3-2009.
3. Government Order No. EN 214 NCE 2009, dated : 31-3-2009.
4. Letter No. KRED/08/MS & PPL-KMMI/2011/1385 dated : 7/16-5-2011 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, approval had been accorded for transfer of 1.5 MW wind power capacity in favour of M/s KMMI Steel Pvt. Ltd. from out of sanctioned 55 MW wind power capacity at Bagewadi village, Mundaragi Taluk, Gadag District from M/s Suzlon Energy Limited.

In the Government Order read at (2) above, approval had been accorded for transfer of 1.25 MW wind power capacity in favour of M/s KMMI Steel Pvt. Ltd (Phase-2) from out of sanctioned 21 MW wind power capacity at Haltimmalapur village, Iyyanahalli site, Gujnur wind zone, Huvinahadagali Taluk, Bellary District from M/s Sarjan Realities (P) Limited.

In the Government Order read at (3) above, approval had been accorded for transfer of 1.25 MW wind power capacity in favour of M/s KMMI Steel Pvt. Ltd. (Phase-1) from out of sanctioned 21 MW wind power capacity at Haltimmalapur village, Iyyanahalli site, Gujnur wind zone, Huvinahadagali Taluk, Bellary District from M/s Sarjan Realities (P) limited.

As per the request of the developer the Managing Director, Karnataka Renewable Energy Development Limited, Bangalore in his letter read at (4) above has recommended for change of name of the company from M/s KMMI Steel Private Limited to M/s Minera Steel and Power Private Limited.

The Registrar Companies, Karnataka vide CIN No. U27101KA2006PTC038481 dated : 11-2-2011 had changed the name of the company from M/s KMMI Steel Private Limited to M/s Minera Steel and Power Private Limited. The proposal has been examined in detail. Hence, the following Order :-

GOVERNMENT ORDER NO. EN 233 NCE 2011, BANGALORE, DATED 6-6-2011

Government accords approval for change of name of the company from M/s KMMI Steel Private Limited to M/s Minera Steel and Power Private Limited.

The Government has reserved power to cancel/modify this Order.

The other terms and conditions of the Government Order read at 1,2 & 3 above shall IPSO FACTO applicable

By Order and in the name of the Governor of Karnataka,
SURESH. B. KRISHNAPPANAVAR
Under Secretary to Government,
Energy Department.

P.R. No. 1511

ಇಂಧನ ಸಚಿವಾಲಯ

ವಿಷಯ : ಪಿಂಚಣಿ ಹಣ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ : 1. ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಇ 14 ಪಿಎಸ್‌ಆರ್ 2002, ದಿನಾಂಕ : 31–5–02.
2. ಸರ್ಕಾರಿ ಆದೇಶ ಸಂಖ್ಯೆ : ಡಿಇ 15 ಪಿಎಸ್‌ಆರ್ 2002, ದಿನಾಂಕ : 19–12–02.
3. ಸರ್ಕಾರಿ ಅಧಿಸೂಚನೆ ಸಂಖ್ಯೆ : ಇಎನ್ 19 ಪಿಎಸ್‌ಆರ್ 2011, ದಿನಾಂಕ : 29–4–2011.
4. ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳ ಪತ್ರ ಸಂಖ್ಯೆ : ನಿ(ಪಿಮತ್ತು ಉಟ್ರಸ್ಟ್)/ಕ–21/ಸ–53–56, ದಿನಾಂಕ : 26–5–2011.

ಪ್ರಸ್ತಾವನೆ :

1. ಮೇಲೆ (1) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕವಿಪ್ರನಿನಿ) ಉದ್ಯಮಗಳು ಮತ್ತು ಅದರ ಸಿಬ್ಬಂದಿಯು ವಿದ್ಯುಚ್ಛಕ್ತಿ ವಿತರಣಾ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) ನಿಯಮಗಳು, 2002, ನಿಯಮ 4(13)(1) ಪ್ರಕಾರ ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಸೇವೆಗಳನ್ನು ಎರಡನೇ ವರ್ಗಾವಣೆ ದಿನಾಂಕ ಜಾರಿಗೆ ಮೊದಲು ಮತ್ತು ಕರ್ನಾಟಕ ವಿದ್ಯುತ್ ಮಂಡಳಿ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ (ಕನಿಪ್ರನಿನಿ) ನಿರ್ದಿಷ್ಟಪಡಿಸಲಾದ ಸಿಬ್ಬಂದಿಯು ಸಲ್ಲಿಸಿದ ಸೇವೆಗಳಿಗಾಗಿ ನಿವೃತ್ತಿ ವೇತನ ನಿಧಿಗಳು ಮತ್ತು ಶಾಸನ ಪ್ರದತ್ತ ಹಾಗೂ ಇತರೇ ಸಿಬ್ಬಂದಿ ಸಂಬಂಧಿತ ನಿಧಿಗಳ ಸಂಗ್ರಹಣೆಗೆ ರಾಜ್ಯ ಸರ್ಕಾರವು ಜವಾಬ್ದಾರಿಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲ ಮತ್ತು ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಎರಡನೇ ವರ್ಗಾವಣೆ ಜಾರಿಯಾದ ಆಯಾಯ ದಿನಾಂಕದಲ್ಲಿದ್ದಂತೆ ನಿಧಿ ಸಂಗ್ರಹಣೆ ಮಾಡದ ಮಟ್ಟಿಗೆ ರಾಜ್ಯ ಸರ್ಕಾರವು ಹೊಣೆಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲವೆಂದು ತಿಳಿಸಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದ ಪ್ರಕಾರ, ಕನಿಪ್ರನಿನಿ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟನ್ನು, "ಕನಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳೆಂದು" ಮರುನಾಮಕರಣ ಮಾಡಿ, Pay As You Go ಪದ್ಧತಿಯನ್ನು ಅನುಸರಿಸಿ ಕವಿಪ್ರನಿನಿ ಮತ್ತು ಎಸ್ಕಾಂಗಳ ನೌಕರರ ನಿವೃತ್ತಿ ಸೌಲಭ್ಯಗಳನ್ನು (Terminal Benefits) ಪಾವತಿಸಲು ಒಪ್ಪಿಗೆ ನೀಡಿದೆ.

3. 2011–12ನೇ ಸಾಲಿನ ಆಯವ್ಯಯದಲ್ಲಿ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳಿಗೆ ಪಿಂಚಣಿ ವಂತಿಗೆಗಾಗಿ "2801–80–101–1–13–106 (ಯೋಜನೇತರ)" ಲೆಕ್ಕಶೀರ್ಷಿಕೆಯಡಿ ರೂ. 400.00 ಕೋಟಿ ನಿಗದಿಪಡಿಸಲಾಗಿರುತ್ತದೆ.

4. ಮೇಲೆ ಕ್ರಮಾಂಕ–3ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, 2011–12ನೇ ಸಾಲಿಗೆ ಮೊದಲನೇ ಕಂತು 100 ಕೋಟಿ ಬಿಡುಗಡೆ ಮಾಡಲಾಗಿರುತ್ತದೆ.

5. ಮೇಲೆ ಕ್ರಮಾಂಕ–4ರಲ್ಲಿ ಓದಲಾದ ಪತ್ರದಲ್ಲಿ, ಪಿಂಚಣಿ ಹಣ 300 ಕೋಟಿ ರೂ.ಗಳಲ್ಲಿ 100 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಲು ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳ ಅಧ್ಯಕ್ಷರು ಮತ್ತು ನಿರ್ದೇಶಕರು (ಹಣಕಾಸು), ಕವಿಪ್ರನಿನಿ ಸರ್ಕಾರವನ್ನು ಕೋರಿರುತ್ತಾರೆ.

6. ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳ ಕೋರಿಕೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 2011–12ನೇ ಸಾಲಿನಲ್ಲಿ ಎರಡನೇ ಕಂತು 50 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 19 ಪಿಎಸ್‌ಆರ್ 2011, ಬೆಂಗಳೂರು, ದಿನಾಂಕ : 10–6–2011.

ಸರ್ಕಾರವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳಿಗೆ 2011–12 ನೇ ಸಾಲಿನಲ್ಲಿ ಪಿಂಚಣಿ ವಂತಿಗೆ 50 ಕೋಟಿ ರೂ.ಗಳನ್ನು (ಐವತ್ತು ಕೋಟಿ ರೂ.ಗಳು ಮಾತ್ರ), ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಿದೆ.

ಈ ವೆಚ್ಚವನ್ನು "2801–80–101–1–13–106 ಸಹಾಯಧನ (ಯೋಜನೇತರ)" ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆಯವರ ಮೇಲು ರುಜುವನ್ನು ಸ್ವೀಕೃತ ರಸೀದಿಯಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು "ಕವಿಪ್ರನಿನಿ ಮತ್ತು ಎಸ್ಕಾಂಗಳ ಪಿಂಚಣಿ ಮತ್ತು ಗ್ರಾಚ್ಯುಟಿ ಟ್ರಸ್ಟ್‌ಗಳಿಗೆ ಹಣ ಪಡೆದ 2 ದಿನದೊಳಗೆ ಪೂರ್ಣವಾಗಿ ಪಾವತಿಸಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 949 ವೆಚ್ಚ–1/2011, ದಿನಾಂಕ : 8–6–2011ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್.ನಂ. 1512

EDUCATION SECRETARIAT

Sub : Constitution of 'Monitoring Committee' to ensure implementation of regulations as entered into in the Consensual Agreement between Government of Karnataka and Karnataka Private Medical, Dental & Engineering Colleges' Association for the academic year 2011-12.

Read : 1. Act No. 23 of 2011
2. Consensual Agreement dated 9-6-2011.

Preamble:

In order to provide adequate and better access to the students belonging to educationally and socially backward classes of the State for admissions to the private professional colleges and as provided in the judgement of the Hon'ble Supreme Court in the matters relating to admissions to professional colleges, Government, like in the previous years, has enacted the Karnataka Professional Educational Institutions (Regulation of Admission and Fixation of Fee) (Special Provisions) Act, 2011 (Act No. 23 of 2011) with a provision to enter into a consensual agreement with the Private educational Institutions for the academic year 2011-12. Accordingly, a consensual agreement has been entered into on 9-6-2011 between Government of Karnataka and the Karnataka Private Medical, Dental & Engineering Colleges' Association in the matter of regulating admissions and fee structure for UG courses in professional colleges for the academic year 2011-12.

As per Clause E (vii) of the said agreement, there shall be a 'Single Monitoring Committee' constituted by the Government to ensure implementation of fee structure and implementation of the regulations as entered into 'consensual agreement' for the year 2011-12. Accordingly, Government in the Education Department has to constitute a 'Monitoring Committee' to ensure implementation of the regulations of the consensual agreement relating to admissions, fee structure etc., in the aided, unaided and minority engineering colleges for 2011-12. Hence the order.

GOVERNMENT ORDER NO. ED 119 TEC 2011, BANGALORE, DATED 18th JUNE 2011.

In the circumstances, Government are pleased to constitute a 'Monitoring Committee' to ensure implementation of the regulations of the 'Consensual Agreement' entered into between Govenrment of Karnataka and Karnataka Unaided Private Engineering Colleges Association (KUPECA) and also with Karnataka Religious & Linguistic Minority Professional Colleges Association (KRLMPA), for the academic year 2011-12, as under :

a) Principal Secretary to Government - Chairperson
Education Department
(Higher Education)

b) Vice President Karnataka Unaided Private Engineering Colleges Association (KUPECA), Bangalore	-	Member
c) Executive Director, Karnataka Examination Authority, Bangalore	-	Member
d) Director of Technical Education, Bangalore	-	Member
e) Under Secretary to Government Education Department (Technical Education)	-	Convener

The Committee shall meet as often as required to look into the following aspects relating to aided, unaided and minority engineering colleges for the year 2011-12 :

a) To ensure implementation of fee structure consensually arrived at in the 'Consensual Agreement'.

b) To ensure proper implementation of the regulations as entered into in the 'Consensual Agreement'

c) To receive the complaints with reference to the consensual agreement and resolve the disputes/differences, if any, among all the stake holders after affording opportunity of being heard.

By Order and in the name of the Governor of Karnataka,

B.N. JAGADEESH

Under Secretary to Government,

Education Department. (Technical Education)

P.R. No. 1513

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ತಮ್ಮರಾಯ ಆರ್ ಪಾಟೀಲ್, ಪಿ.ಎಸ್.ಐ, ಯಾದಗಿರಿ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ : ಪಿಆರ್/37/ಈವ/2009/1188 (ಓ.ಬಿ. 368/ಈವ/2009) ದಿನಾಂಕ : 9–6–09.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಬೆಂಗಳೂರು ಇವರ ಆದೇಶ ಸಂಖ್ಯೆ : ಅಪೀಲು(4)54/2009–10 (ಓ.ಬಿ. 03/2010–11) ದಿನಾಂಕ : 21–4–2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 21–7–2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) 41/2010–11, ದಿನಾಂಕ : 23–11–2010.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 28 ಸಿಎನ್‌ಎನ್ 11 ದಿನಾಂಕ : 1–6–2011.

ಪ್ರಸ್ತಾವನೆ :

ಶ್ರೀ ತಮ್ಮರಾಯ ಆರ್. ಪಾಟೀಲ್, ಇವರು ಯಾದಗಿರಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ., ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜಬಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಯಾದಗಿರಿ ನಗರ ಪೊಲೀಸ್ ಠಾಣೆ, ಗುನ್ನೆ ನಂ. 172/08, ಕಲಂ 326, 506,307,104 ನಂ. 34 ಐಪಿಸಿ ಪ್ರಕರಣದಲ್ಲಿ ನೀವು ತನಿಖಾಧಿಕಾರಿಗಳಾಗಿದ್ದು, ನಿಯಮಾನುಸಾರ ಆರೋಪಿತರ ವಿರುದ್ಧ ನಿಗದಿತ ಅವಧಿಯೊಳಗಾಗಿ ನ್ಯಾಯಾಲಯದಲ್ಲಿ ದೋಷಾರೋಪಣೆ ಪತ್ರ ಸಲ್ಲಿಸದೇ ಇರುವುದರಿಂದ ನ್ಯಾಯಾಲಯವು ಕಲಂ. 167(2) ಸಿಆರ್‌ಪಿಸಿ ಅಡಿಯಲ್ಲಿ ಆರೋಪಿತರ ಜಾಮೀನಿನ ಅರ್ಜಿಯನ್ನು ಪುರಸ್ಕರಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತದೆ. ಈ ರೀತಿ ನಿಯಮಾನುಸಾರ ನಿಗದಿತ ಅವಧಿಯೊಳಗಾಗಿ ಆರೋಪಿತರು ನ್ಯಾಯಾಂಗ ವಶದಲ್ಲಿದ್ದಾಗ ಅವರ ವಿರುದ್ಧ ನ್ಯಾಯಾಲಯದಲ್ಲಿ ದೋಷಾರೋಪಣೆ ಪತ್ರ ಸಲ್ಲಿಸದೆ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ : 9–6–09ರ ಆದೇಶದಲ್ಲಿ ಅರ್ಜಿದಾರರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಎರಡು ವರ್ಷಗಳ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ : 21–4–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಿ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 127 ಪೊಸಿಅ 2010, ಬೆಂಗಳೂರು, ದಿನಾಂಕ : 13–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ತಮ್ಮರಾಯ ಆರ್. ಪಾಟೀಲ್, ಪಿ.ಎಸ್.ಐ., ಯಾದಗಿರಿ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ : 9–6–2009ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಭಾಗಶಃ ಮಾರ್ಪಡಿಸಿ ಇವರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವರ್ಷ ಮುಂದೂಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.ನಂ. 1514 ಒಳಾಡಳಿತ ಇಲಾಖೆ. (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಜಡ್ ಫ್ರಾನ್ಸೀಸ್, ಎ.ಆರ್.ಎಸ್.ಐ., ಡಿ.ಎ.ಆರ್. ಕೆ.ಜಿ.ಎಫ್., ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್. ಇವರ ಆದೇಶ ಸಂಖ್ಯೆ : ಸಿಬ್ಬಂದಿ(2)/ಶಿಕ್ಷೆ/65/2008 (ಓ.ಬಿ. 291/2008) ದಿನಾಂಕ : 22–12–08.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರ ಆದೇಶ ಸಂಖ್ಯೆ : ಅಪೀಲು (10)/ಪನ್ನಿ/2009–10 (ಓ.ಬಿ. 79/2009–10) ದಿನಾಂಕ : 8–9–09.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 12–1–2010.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) 82/2009–10, ದಿನಾಂಕ : 1–9–2010.
5. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 34 ಸಿಎನ್‌ಎನ್ 11 ದಿನಾಂಕ : 1–6–2011.

ಪ್ರಸ್ತಾವನೆ :

ಶ್ರೀ ಜಡ್ ಫ್ರಾನ್ಸೀಸ್, ಎ.ಆರ್.ಎಸ್.ಐ., ಡಿ.ಎ.ಆರ್. ಕೆ.ಜಿ.ಎಫ್., ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯ ನಿರ್ಲಕ್ಷತೆ ಮತ್ತು ಬೇಜಬಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ದಿನಾಂಕ : 15–10–2008 ರಿಂದ 20–10–2008ರ ವರೆಗೆ 06 ದಿನಗಳ ರಜೆಯನ್ನು ಮಂಜೂರು ಮಾಡಿಸಿಕೊಳ್ಳದೆ ಕರ್ತವ್ಯಕ್ಕೆ ಗೈರುಹಾಜರಿಯಾಗಿ ಸದರಿ ಅವಧಿಗೆ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಕೋರಿರುವುದು ಅಸಮಂಜಸವಾಗಿರುತ್ತದೆ. ಕರ್ತವ್ಯದಲ್ಲಿ ಈ ಬಗ್ಗೆ ತೀವ್ರ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ, ಅಶಿಸ್ತು ದುರ್ನಡತೆ ತೋರ್ಪಡಿಸಿ ಕರ್ತವ್ಯ ಲೋಪವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ : 22–12–08ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷ ಕಾಲ ತದನಂತರ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಮುಂದೂಡಲಾಗಿದೆ. ದಿನಾಂಕ : 15–10–08 ರಿಂದ 20–10–08ರ ವರೆಗಿನ ಅನಧಿಕೃತವಾಗಿ ಗೈರುಹಾಜರಿಯಾದ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 106(ಎ) ರಂತೆ ವೇತನ ರಹಿತ ರಜೆ ಎಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ : 8–9–09ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಿ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 19 ಪೊಸಿಅ 2010, ಬೆಂಗಳೂರು, ದಿನಾಂಕ : 13–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಡ್ ಫ್ರಾನ್ಸೀಸ್, ಎ.ಆರ್.ಎಸ್.ಐ., ಡಿ.ಎ.ಆರ್. ಕೆ.ಜಿ.ಎಫ್., ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಭಾಗಶಃ ಮಾರ್ಪಡಿಸಿ, "ವಾಗ್ದಂಡನೆ" ಯನ್ನು ವಿಧಿಸಿ ದಿನಾಂಕ : 15–10–2008 ರಿಂದ 20–10–2008ರ ವರೆಗಿನ ಗೈರುಹಾಜರಾದ ಅವಧಿಯನ್ನು ಅವರ ಹಕ್ಕಿನಲ್ಲಿರುವ ರಜೆಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.ನಂ. 1515 ಒಳಾಡಳಿತ ಇಲಾಖೆ. (ಪೊಲೀಸ್ ಸೇವೆಗಳು).

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಜಗದೀಶ ಹಂಚಿನಾಳ ಪಿ.ಎಸ್.ಐ., ಚಿತ್ತಾಪುರ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು ಇವರ ಆದೇಶ ಸಂಖ್ಯೆ : ಸಿಬಿ(8)21/2006-07, ದಿನಾಂಕ : 4-7-2010.
2. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 16-12-2010.
3. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಿಬಿ(5)21/06-07, ದಿನಾಂಕ : 28-1-2011.
4. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 25 ಸಿಎನ್‌ಎನ್ 11, ದಿನಾಂಕ : 1-6-2011.

ಪ್ರಸ್ತಾವನೆ :

ಶ್ರೀ ಜಗದೀಶ ಹಂಚಿನಾಳ, ಪಿ.ಎಸ್.ಐ., ಇವರು ಲಿಂಗಸಗೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಬೇಜಬಾಬ್ದಾರಿತನ ಮತ್ತು ಉದಾಸೀನತೆ ಪ್ರದರ್ಶಿಸಿದ ಕಾರಣದ ಮೇಲೆ ಇನ್ನಿಬ್ಬರು ಅಧಿಕಾರಿಗಳೊಂದಿಗೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ಮತ್ತು 8ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಶ್ರೀ ಜಗದೀಶ್ ಹಂಚಿನಾಳ ಪಿ.ಎಸ್.ಐ., ಇವರು ಲಿಂಗಸಗೂರು ಪೊಲೀಸ್ ಠಾಣೆ ಆದ ನೀವು ಈ ಪ್ರಕರಣದ ತನಿಖೆಯನ್ನು ದಿನಾಂಕ : 20-2-2006 ರಿಂದ 2-3-2006 ರವರೆಗೆ ನಡೆಸಿದ್ದು, ದಿನಾಂಕ 21-2-2006 ರಂದು ಕೃತ್ಯ ನಡೆದ ಸ್ಥಳದ ಪಂಚನಾಮೆ ಮಾಡಿದಾಗ, ಕೃತ್ಯ ನಡೆದ ಸ್ಥಳದ ಬಾಗಿಲಿನ ಸ್ಥಿತಿ-ಗತಿ, ಬಾಗಿಲು ಹೊಡೆದ ಬಗ್ಗೆ, ಒಳ ಚಿಲಕದ ಸ್ಥಿತಿ ಗತಿ ಬಗ್ಗೆ, ವಿವರಗಳನ್ನು ಬರೆದಿಲ್ಲ. ಮೃತಳು ನೇಣು ಹಾಕಿಕೊಂಡಳೆಂದು ಬಿಂಬಿಸಲಾಗಿದ್ದ ಸ್ಥಳದಲ್ಲಿ, ನೇಣಿನ ಸೀರೆ ಕಟ್ಟಿಗೆಯ ತೊಲೆಗೆ ಸರಿಗಂಟು ಹಾಕಿದ್ದು ಎಂದು ಬರೆದಿದ್ದು, ಸದರಿ ಕಟ್ಟಿಗೆ ತೊಲೆ ನೆಲದಿಂದ ಎಷ್ಟು ಅಡಿ ಎತ್ತರದಲ್ಲಿ ನೇತಾಡುತ್ತಿತ್ತು, ಸದರಿ ಅಂತರದಿಂದ ಮೃತಳ ಹೆಣ ನೆಲಕ್ಕೆ ತಾಕಲಾಗುವ ಸಾಧ್ಯತೆ ಇತ್ತೆ ? ಇಲ್ಲವೆ ? ಎಂಬ ಮಾಹಿತಿಗಳನ್ನು ಬರೆದಿರುವುದಿಲ್ಲ. ಇದರಿಂದ ಮೃತಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಯೇ ಅಥವಾ ಮಾಡಿಕೊಂಡಂತೆ ಸೃಷ್ಟಿಸಲಾಗಿದೆ ಎಂಬುದನ್ನು ಖಚಿತಪಡಿಸಲು ಅಸ್ಪಷ್ಟತೆಯನ್ನು ಸೃಷ್ಟಿಸಿರುತ್ತಾರೆ. ಮೃತಳ ತಾಯಿ ಲಕ್ಷ್ಮಮ್ಮ ಹಾಗೂ ಮೃತಳ ಅಣ್ಣರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಮದುವೆ ಕಾಲದಲ್ಲಿ ವರದಕ್ಷಿಣೆ ಕೊಟ್ಟ ಬಗ್ಗೆ, ಮದುವೆ ನಂತರ ವರದಕ್ಷಿಣೆಗಾಗಿ ಕಿರುಕುಳ ನೀಡಿದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿರುವುದಿಲ್ಲ. ಇದರಿಂದ ಕಲಂ 304(ಬಿ), ಐಪಿಸಿ ಕಲಂ 3,4 ಡಿಪಿ ಆಕ್ಟ್‌ಗಳನ್ನು ಪ್ರಕರಣದಲ್ಲಿ ಸೇರಿಸಿ, ಮುಂದಿನ ಕ್ರಮ ಕೈಗೊಳ್ಳುವಲ್ಲಿ ವಿನಾಕಾರಣ ವಿಳಂಬ ಮಾಡಿರುತ್ತಾರೆ. ಶವ ಪರೀಕ್ಷಾ ವರದಿಯನ್ನು ಸಕಾಲಕ್ಕೆ ಪಡೆದುಕೊಳ್ಳದೆ, ಶವ ಪರೀಕ್ಷೆ ಮುಗಿದ 10 ದಿನಗಳ ವಿಳಂಬ ಮಾಡಿ, ವರದಿಯನ್ನು ಪಡೆದುಕೊಂಡು, ವರದಿಯ ಆಧಾರದ ಮೇರೆಗೆ, ಕಲಂ 302, 201 ಐಪಿಸಿ ಅಳವಡಿಸಿಕೊಂಡು, ವಿಳಂಬ ನೀತಿ ಅನುಸರಿಸಿರುತ್ತಾರೆ ಹಾಗೂ ಉಳಿದ ಆರೋಪಿಗಳನ್ನು ದಸ್ತಗಿರಿ ಮಾಡದೆ ಇರುವ ಮೂಲಕ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯ, ಬೇಜವಾಬ್ದಾರಿತನ ಮತ್ತು ಉದಾಸೀನತೆ ಪ್ರದರ್ಶಿಸಿ ಕರ್ತವ್ಯ ಲೋಪವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲವೆಂದು ವರದಿ ನೀಡಿದ್ದು ಸದರಿ ವರದಿಯನ್ನೊಪ್ಪದೆ ಶಿಸ್ತುಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ : 4-7-2010ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತರಹಿತವಾಗಿ ಒಂದು ವರ್ಷದ ಅವಧಿಗೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಿ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (4)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 192 ಪೊಸಿಅ 2010, ಬೆಂಗಳೂರು, ದಿನಾಂಕ : 13-06-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಗದೀಶ ಹಂಚಿನಾಳ, ಪಿ.ಎಸ್.ಐ., ಚಿತ್ತಾಪುರ ಪೊಲೀಸ್ ಠಾಣೆ, ಗುಲ್ಬರ್ಗಾ ಜಿಲ್ಲೆ, ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ : 4-7-2010ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಮಾರ್ಪಡಿಸಿ "ವಾಗ್ದಂಡನೆ" ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.ನಂ. 1516 ಒಳಾಡಳಿತ ಇಲಾಖೆ. (ಪೊಲೀಸ್ ಸೇವೆಗಳು).

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಸಿ. ಕೆ. ಗಾಳಿಗೌಡರ, ಮಾಜಿ ಸಿ.ಹೆಚ್.ಸಿ., ವಿದ್ಯಾನಗರ ಪೊಲೀಸ್ ಠಾಣೆ, ಹುಬ್ಬಳ್ಳಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಅದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ–ಧಾರವಾಡ ಇವರ ಆದೇಶ ಸಂಖ್ಯೆ: ಸಿಪಿ/ಸಿಬ್ಬಂದಿ/(3)ನಿಯಮ(6)/19/2007, (ಓ.ಬಿ. 392/2009) ದಿನಾಂಕ 14–5–09.
2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು ಇವರ ಆದೇಶ ಸಂಖ್ಯೆ: ಅಪೀಲು (4)/29/2009–10 (ಓ.ಬಿ. 54/2009–10) ದಿನಾಂಕ 01–02–2010.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 21–5–2010
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)/18/2010–11, ದಿನಾಂಕ 26–10–2010.
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 35 ಸಿಎನ್‌ಎಸ್ 11, ದಿನಾಂಕ 01–6–2011.

ಪ್ರಸ್ತಾವನೆ :

ಶ್ರೀ ಸಿ. ಕೆ. ಗಾಳಿಗೌಡರ, ಇವರು ಹುಬ್ಬಳ್ಳಿಯ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ, ಹೆಡ್–ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ಕರ್ತವ್ಯದಲ್ಲಿ ತೀವ್ರ ತರಹದ ನಿರ್ಲಕ್ಷ್ಯತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

> "ಶ್ರೀ ಸಿ. ಕೆ. ಗಾಳಿಗೌಡರ, ಹೆಚ್.ಸಿ. 1866 ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರು ಮೇಲಧಿಕಾರಿಗಳಿಂದ ಪೂರ್ವಾನುಮತಿ ಪಡೆಯದೇ ಹಾಗೂ ಎಮ್.ಎಚ್.ಎಸ್. ಪಡೆಯದೇ ಕರ್ತವ್ಯಕ್ಕೆ ಪದೇ ಪದೇ ಗೈರುಹಾಜರ ಆಗುವ ಪ್ರವೃತ್ತಿ ಬಳಸಿಕೊಂಡು ತಮ್ಮ ಕರ್ತವ್ಯದಲ್ಲಿ ತೀವ್ರತರನಾದ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಬಗ್ಗೆ ದೋಷಾರೋಪಣೆಯನ್ನು ನಿಮ್ಮ ಮೇಲೆ ಹೊರಡಿಸಿದ್ದು ಅದೆ"

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ–ಧಾರವಾಡ ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ 14–5–09ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಅನಧಿಕೃತವಾಗಿ ಗೈರುಹಾಜರಾದ ದಿನಾಂಕ 21–10–07 ರಿಂದ 06–12–08ರ ವರೆಗಿನ ಅವಧಿಯನ್ನು ಕೆ.ಸಿ.ಎಸ್. ನಿಯಮ 106(ಎ)ರಡಿ ವೇತನ ರಹಿತ ರಜೆ ಎಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ 01–02–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಿ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 79 ಪೊಸಿಅ 2010, ಬೆಂಗಳೂರು, ದಿನಾಂಕ : 13–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸಿ. ಕೆ. ಗಾಳಿಗೌಡರ, ಮಾಜಿ ಸಿ.ಹೆಚ್.ಸಿ., ವಿದ್ಯಾನಗರ ಪೊಲೀಸ್ ಠಾಣೆ, ಹುಬ್ಬಳ್ಳಿ, ಇವರಿಗೆ ಶಿಸ್ತು ಪ್ರಾಧಿಕಾರವು ದಿನಾಂಕ 14–5–2009ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಭಾಗಶಃ ಮಾರ್ಪಡಿಸಿ ಈ ಕೆಳಕಂಡ ದಂಡನೆಯನ್ನು ವಿಧಿಸಲು ಆದೇಶಿಸಿದೆ.

(i) ಅರ್ಜಿದಾರರನ್ನು ಸೇವೆಗೆ ಪುನರ್ ನೇಮಿಸಿ ಇವರ ವೇತನವನ್ನು ಹೆಡ್–ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ವೇತನಕ್ಕೆ ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂದು ವರ್ಷದ ಅವಧಿಗೆ ಇಳಿಸಲಾಗಿದೆ.

(ii) ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿದ ದಿನಾಂಕದಿಂದ ಅವರನ್ನು ಸೇವೆಗೆ ಪುನರ್ ಸ್ಥಾಪಿಸಿ ಕರ್ತವ್ಯಕ್ಕೆ ಹಾಜರಾಗುವ ದಿನಾಂಕದವರೆಗಿನ ಸೇವೆಯಿಂದ ಹೊರಗುಳಿದ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (Dies-non) ಎಂದು ಪರಿಗಣಿಸಲಾಗಿದೆ.

(iii) ದಿನಾಂಕ 21–10–2007 ರಿಂದ 06–12–2008ರ ವರೆಗಿನ ಗೈರು ಹಾಜರಾದ ಅವಧಿಯನ್ನು ಅವರ ಹಕ್ಕಿನಲ್ಲಿರುವ ರಜೆಯನ್ನು ಮಂಜೂರು ಮಾಡಲು ಮತ್ತು ಬಾಕಿ ಉಳಿದ ಅವಧಿಯನ್ನು ಅಸಾಧಾರಣ ರಜೆಯೆಂದು ಪರಿಗಣಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ. ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1517

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಮುನೇಗೌಡ, ಸಿ.ಪಿ.ಸಿ. ಬೆಮಲ್ ನಗರ ಪೊಲೀಸ್ ಠಾಣೆ, ಕೆ.ಜಿ.ಎಫ್., ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್. ಇವರ ಆದೇಶ ಸಂಖ್ಯೆ: ಸಿಬ್ಬಂದಿ (2)/ಶಿಕ್ಷೆ/18–2008 (ಓ.ಬಿ. 19/2009) ದಿನಾಂಕ 19–01–2009.
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಆದೇಶ ಸಂಖ್ಯೆ: ಅಪೀಲು/(24)/ಪನ್ನಿ/2009–10 (ಓ.ಬಿ. 24/2010) ದಿನಾಂಕ 24–5–2010.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 18–11–2010
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)/73/2010–11, ದಿನಾಂಕ 25–02–2011.
5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 27 ಸಿಎನ್‌ಎಸ್ 11, ದಿನಾಂಕ 01–6–2011.

ಪ್ರಸ್ತಾವನೆ :

ಶ್ರೀ ಮುನೇಗೌಡ, ಸಿ.ಪಿ.ಸಿ. ಇವರು ರಾಬರ್ಟ್‌ಸನ್ ಪೇಟೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

> "ದಿನಾಂಕ 16–8–2008 ರಂದು ರಾತ್ರಿ 7ನೇ ಬೀಟ್ ಗಸ್ತಿಗೆ ನೇಮಿಸಿದ್ದು, ಸದರಿ ಬೀಟ್‌ನಲ್ಲಿ ಇರುದಿಯಪುರಂನಲ್ಲಿ ಕಳ್ಳತನವಾಗಿದ್ದು, ಈ ಸಂಬಂಧ ರಾಬರ್ಟ್‌ಸನ್‌ಪೇಟೆ ಪೊಲೀಸ್ ಠಾಣೆಯ ಮೊ.ಸಂ. 105/2008 ಕಲಂ 457, 380 ಐ.ಪಿ.ಸಿ. ರೀತ್ಯಾ ಘೋರ ಅಪರಾಧ ದಾವೆ ದಾಖಲಾಗಲು ಕಾರಣಕರ್ತರಾಗಿ ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಮತ್ತು ಬೇಜವಾಬ್ದಾರಿತನವನ್ನು ತೋರ್ಪಡಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೆ.ಜಿ.ಎಫ್., ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ 19–01–09ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಎರಡು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮುಂದೂಡಲಾಗಿದೆ. ದಿನಾಂಕ 25–9–08 ರಿಂದ 31–10–08ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು ಇವರು ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಆರೋಪಗಳಿಗೆ ಅನುಗುಣವಾಗಿಲ್ಲವೆಂದು ಪರಿಗಣಿಸಿ, ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ 24–5–2010ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ದಕ್ಕೆಯಾಗದಂತೆ ಒಂದು ವರ್ಷಕ್ಕೆ ಇಳಿಸಿದೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಿ ಪರಿಷ್ಕರಣ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 183 ಪೊಸಿಅ 2010, ಬೆಂಗಳೂರು, ದಿನಾಂಕ : 13–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಮುನೇಗೌಡ, ಸಿ.ಪಿ.ಸಿ. ಬೆಮಲ್ ನಗರ ಪೊಲೀಸ್ ಠಾಣೆ, ಕೆ.ಜಿ.ಎಫ್., ಇವರಿಗೆ ವಾಗ್ದಂಡನೆಯನ್ನು ವಿಧಿಸಿ ದಿನಾಂಕ 25–9–08 ರಿಂದ 31–10–08ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ. ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1518

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಹೆಚ್. ಎಸ್. ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ) ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ ಬೆಂಗಳೂರು ಇವರ ವಿರುದ್ಧ ಲಂಚ ನಿರೋಧ ಕಾಯ್ದೆ, 1988 ಮತ್ತು ಭಾರತೀಯ ದಂಡ ಸಂಹಿತೆ, 1860 ರಡಿ ದಾಖಲಾದ ಪ್ರಕರಣದ ಅಭಿಯೋಜನಾ ಮಂಜೂರಾತಿ ಆದೇಶ.

ಓದಲಾಗಿದೆ : 1) ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ತನಿಖಾಧಿಕಾರಿಗಳು, ಪೊಲೀಸ್ ವಿಂಗ್, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ವರದಿ ದಿನಾಂಕ 15–03–11.

2) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ 12–04–11ರ ಪತ್ರ ಸಂಖ್ಯೆ: Lok/INV(G)/City/Crime-46/2010.

ಪ್ರಸ್ತಾವನೆ :

ಶ್ರೀ ಹೆಚ್. ಎಸ್. ರಾಮಕೃಷ್ಣ, ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರ ವಿರುದ್ಧ ಮೊಕದ್ದಮೆ ಸಂಖ್ಯೆ: 46/2010ರಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಕರ್ನಾಟಕ ಲೋಕಾಯುಕ್ತ ಪೊಲೀಸು ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: 2ರ ಪತ್ರದೊಂದಿಗೆ ಕಳುಹಿಸುತ್ತಾ, ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ 19(1)(ಬಿ) ಕಲಂನಡಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

2. ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರ ಸಂಖ್ಯೆ: Lok/INV(G)/City/Crime-46/2010. ದಿನಾಂಕ 12–04–11 ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ ಕೆ. ಸಿ. ಲಕ್ಷ್ಮೀನಾರಾಯಣ, ಪೊಲೀಸ್ ಇನ್‌ಸ್ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಇವರ ಫಿರ್ಯಾದಿ ದಿನಾಂಕ 21–09–10
2. ಪ್ರಥಮ ವರ್ತಮಾನ ವರದಿ ಬೆಂಗಳೂರು ನಗರ ವಿಭಾಗ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 46/2010, ದಿನಾಂಕ 21–09–10.
3. Proceedings of the Superintendent of Police, Karnataka Lokayukta, Bangalore No. LOK/ING/(G)/City/Cr. 46/2010, dated 21-09-2010.
4. Warrant to search after information of a particular offence issued by Addl. City Civil and Sessions Judge, Bangalore dated. 21-09-2010 (Form No. 10)
5. ಮನೆ ಶೋಧನಾ ಪಂಚನಾಮೆ ದಿನಾಂಕ 22–09–2010
6. ಕಛೇರಿ ಶೋಧನಾ ಪಂಚನಾಮೆ ದಿನಾಂಕ 22–09–2010
7. ಕಡತ ಅಮಾನತ್ತು ಪಂಚನಾಮೆ ದಿನಾಂಕ 22–11–2010
8. ಕಡತಗಳನ್ನು ಅಮಾನತ್ತು ಪಡಿಸಿದ ಮಹಜರು ದಿನಾಂಕ 28–09–2010
9. ಶ್ರೀ ಅಬ್ದುಲ್ ಖಯ್ಯೂಂ, ವಿಶೇಷ ಜಿಲ್ಲಾಧಿಕಾರಿಗಳು (ಪ್ರಭಾರ), ಕೆಐಎಡಿಬಿ, ಬೆಂಗಳೂರು ಇವರು ತನಿಖಾಧಿಕಾರಿಗಳಿಗೆ ಮಾಹಿತಿಯನ್ನು ಒದಗಿಸುವ ಬಗ್ಗೆ ಬರೆದ ಪತ್ರ ದಿನಾಂಕ 29–10–2010.
10. ಹಿರಿಯ ಉಪ ನೋಂದಣಾಧಿಕಾರಿ, ದೇವನಹಳ್ಳಿ ಇವರು ತನಿಖಾಧಿಕಾರಿಗಳಿಗೆ ಮಾಹಿತಿಯನ್ನು ಒದಗಿಸುವ ಬಗ್ಗೆ ಬರೆದ ಪತ್ರ ದಿನಾಂಕ 15–11–2010.
11. ಶ್ರೀ ಟಿ. ಶ್ಯಾಮಭಟ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರು ತನಿಖಾಧಿಕಾರಿಗಳಿಗೆ ಮಾಹಿತಿ ಹಾಗೂ ದಾಖಲಾತಿಗಳನ್ನು ಒದಗಿಸುವ ಬಗ್ಗೆ ಬರೆದ ಪತ್ರ ದಿನಾಂಕ 09–09–2010
12. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬಂಡಿಕೊಡಿಗೇಹಳ್ಳಿ ಪಾಳ್ಯ (ಬಿ ಕೆ. ಪಾಳ್ಯ) ಸರ್ವೆ ನಂ. 7 ಮತ್ತು ಬಂಡಿಕೊಡಿಗೇಹಳ್ಳಿ ಸರ್ವೆ ನಂ. 40/358 ರ ವಾಸ್ತವಾಂಶಗಳ ಬಗ್ಗೆ ತಹಶೀಲ್ದಾರ್ ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರು ತನಿಖಾಧಿಕಾರಿಗಳಿಗೆ ಬರೆದ ವರದಿ ದಿನಾಂಕ 02–12–2010
13. ಮ್ಯೂಟೇಷನ್, ಆರ್‌ಆರ್. ವಹಿ, ಆರ್‌ಟಿಸಿ ಪ್ರತಿಗಳು
14. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬಂಡಿಕೊಡಿಗೇಹಳ್ಳಿ ಪಾಳ್ಯ (ಬಿ ಕೆ ಪಾಳ್ಯ) ಸರ್ವೆ ನಂ 7ರ ಪೈಕಿ 04–00 ಎಕರೆ ಜಮೀನು ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ಇವರಿಗೆ ಉಪ ವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಇವರ ದಿನಾಂಕ 27–01–1961ರ ಆದೇಶದಂತೆ ಮಂಜೂರಾಗಿದ್ದು, ಮಾಲೀಕತ್ವದ ದಸ್ತಾವೇಜು ಪ್ರತಿ (ಟೈಟಲ್ ಡೀಡ್)
15. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಡತ ಸಂಖ್ಯೆ: 1/2006–07ರ ಪ್ರತಿ
16. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(4)ರಡಿ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಐ 397 ಎಸ್‌ಪಿಕ್ಯೂ 2007, ದಿನಾಂಕ 25–09–2008ರ ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರಿಕೆ ದಿನಾಂಕ 26–09–2008ರ ಪ್ರತಿ.

17. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬಂಡಿಕೊಡಿಗೇಹಳ್ಳಿ ಪಾಳ್ಯ (ಬಿ ಕೆ ಪಾಳ್ಯ) ಸರ್ವೆ ನಂ. 7/ಪಿ20 ರ ವಿಸ್ತೀರ್ಣ 02–00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ, ಬಿ ಕೆ ಪಾಳ್ಯ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಇವರು ರೂ. 12400000–00 ಗಳ ಪರಿಹಾರ ಹಣವನ್ನು ಪಡೆದಿರುವ ರಸೀದಿ ಪ್ರತಿ.
18. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬಂಡಿಕೊಡಿಗೇಹಳ್ಳಿ ಪಾಳ್ಯ (ಬಿ ಕೆ ಪಾಳ್ಯ) ಸರ್ವೆ ನಂ. 7/20ರ ವಿಸ್ತೀರ್ಣ 02–00 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುವ ಪತ್ರ ದಿನಾಂಕ 15–12–2009.
19. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬಂಡಿಕೊಡಿಗೇಹಳ್ಳಿ ಪಾಳ್ಯ (ಬಿ ಕೆ ಪಾಳ್ಯ) ಸರ್ವೆ ನಂ. 7/ಪಿ20ರ ವಿಸ್ತೀರ್ಣ 02–00 ಎಕರೆ ಜಮೀನಿಗೆ ಸಂಬಂಧಿಸಿದಂತೆ ರೂ. 12400000–00ಗಳ ಪರಿಹಾರವನ್ನು ನಿಗಧಿಪಡಿಸಿರುವ ಬಗ್ಗೆ ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ ಇವರ ದಿನಾಂಕ 15–12–2009ರ ನಡವಳಿಯ ಪ್ರತಿ.
20. ಭೂ ಪರಿಹಾರದ ಹಣವನ್ನು ನೀಡುವ ಬಗ್ಗೆ ಶ್ರೀ ಕೃಷ್ಣಪ್ಪ ನವರ ಪರವಾಗಿ ಇವರ ಮಗ ಶ್ರೀ ಬಿ. ಕೆ. ನಾಗರಾಜು ರವರು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಕೆಐಎಡಿಬಿ, ಬೆಂಗಳೂರು ಇವರಿಗೆ ಸಲ್ಲಿಸಿದ ಮನವಿ ದಿನಾಂಕ 21–06–2009.
21. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಡತ ಸಂಖ್ಯೆ: 4/2004–05ರ ಪ್ರತಿ
22. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬಂಡಿಕೊಡಿಗೇಹಳ್ಳಿ ಸರ್ವೆ ನಂ. 40/358ರ ವಿಸ್ತೀರ್ಣ 01–20 ಎಕರೆ ಜಮೀನಿನ ಬಾಬ್ತು ಶ್ರೀ ರಾಮ ಮತ್ತು ಶ್ರೀ ಸುಬ್ಬಣ್ಣ, ಬಂಡಿಕೊಡಿಗೇಹಳ್ಳಿ ಇವರುಗಳೂ ರೂ. 4650000–00ಗಳ ಪರಿಹಾರ ಧನ ಪಡೆದ ಬಗ್ಗೆ ರಸೀದಿ ಪ್ರತಿ.
23. ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್, ಮೈಲನಹಳ್ಳಿ ಬ್ರಾಂಚ್ ಇದರ ಮ್ಯಾನೇಜರ್‌ರವರು ತನಿಖಾಧಿಕಾರಿಗಳಿಗೆ ಬರೆದ ದಿನಾಂಕ 07–12–2010ರ ಪತ್ರ ಹಾಗೂ ಅಡಕಗಳ ಪ್ರತಿ.
24. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬಿ ಕೆ ಪಾಳ್ಯ ಗ್ರಾಮಕ್ಕೆ ಸಂಬಂಧಪಟ್ಟ ಕೆಐಎಡಿಬಿ ಯಿಂದ ಪರಿಹಾರ ಪಡೆದ ಕಡತಗಳಲ್ಲಿನ ಸ್ಥಳ ಪರಿಶೀಲನೆ ಮಾಡಿರುವ ಬಗ್ಗೆ ಭೂಮಾಪಕರು ಸಲ್ಲಿಸಿದ ವರದಿ ದಿನಾಂಕ 17–02–2011.
25 (1) Sri H. S. Ramakrishna, SLAO-1, KIADB (2) ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ (3) ಶ್ರೀ ನಾರಾಯಣಪ್ಪ ಬಿನ್ ಗಂಗಪ್ಪ (4) ಶ್ರೀ ಮುನಿರಾಜು ಬಿನ್ ಜಂಗಮಪ್ಪ (5) ಶ್ರೀಮತಿ ಕದರಮ್ಮ ಕೋಂ ಜಂಗಮಪ್ಪ (6) ಶ್ರೀ ಮುನಿಯಪ್ಪ ಬಿನ್ ದೊಡ್ಡಹನುಮಪ್ಪ (7) ಶ್ರೀ ರವಿಕುಮಾರ್ ಬಿನ್ ಲೇಟ್ ಶಿವಣ್ಣ, ರಾಜಸ್ವ ನಿರೀಕ್ಷಕರು (8) ಶ್ರೀ ರಾಮ @ ರಾಮಮೂರ್ತಿ ಬಿನ್ ಬಿ. ಬಿ. ಮುನಿಯಪ್ಪ (9) ಶ್ರೀ ಬಿ ಎಂ ಸುಬ್ಬಣ್ಣ ಬಿನ್ ಬಿ ಬಿ ಮುನಿಯಪ್ಪ (10) ಶ್ರೀಮತಿ ಎನ್ ಲಕ್ಷ್ಮೀ ಬಿನ್ ಲೇಟ್ ನಿಂಗಯ್ಯ, ವ್ಯವಸ್ಥಾಪಕರು ಕೆಐಎಡಿಬಿ (11) ಶ್ರೀ ಮುನೇಗೌಡ ಬಿನ್ ಹನುಮಂತರಾಯಪ್ಪ (12) ಶ್ರೀ ಶ್ರೀನಿವಾಸ ಬಿನ್ ಹನುಮಂತರಾಯಪ್ಪ (13) ಶ್ರೀ ನಾರಾಯಣಪ್ಪ ಬಿನ್ ಲೇಟ್ ತಿಮ್ಮರಾಯಪ್ಪ ಇವರ ಹೇಳಿಕೆಗಳು.

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಏರೋಸ್ಪೇಸ್, ಐಟಿ ಪಾರ್ಕ್, ಹಾರ್ಡ್‌ವೇರ್ ಪಾರ್ಕ್ ಯೋಜನೆಗಳಿಗಾಗಿ ದುಮ್ಮನಹಳ್ಳಿ, ಸಿಂಗಹಳ್ಳೀ ಉಣಸೂರು, ಜೊನ್ನಹಳ್ಳಿ, ಬಾಲದಿಮ್ಮನಹಳ್ಳಿ, ಕವಡದಾಸನಹಳ್ಳಿ, ಭಟ್ರಮಾರನಹಳ್ಳಿ, ಬಂಡಿಕೊಡಿಗೇಹಳ್ಳಿಪಾಳ್ಯ, ಅರೆಬಿನ್ನಮಂಗಲ, ಗೊಲ್ಲಹಳ್ಳಿ, ಬಂಡಿಕೊಡಿಗೇಹಳ್ಳಿ, ಬಾಗಲೂರು, ಹೂವಿನನಾಯಕನಹಳ್ಳಿ ಮತ್ತು ಮಹದೇವಕೊಡಿಗೇಹಳ್ಳಿ ಹಳ್ಳಿಗಳ ವಿವಿಧ ಸರ್ವೆ ನಂಬರುಗಳಲ್ಲಿ ಒಟ್ಟು 3266–10 1/4 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುತ್ತದೆ. ಈ ಪೈಕಿ ಒಟ್ಟು 218–07 1/2 ಎಕರೆ ಜಮೀನಿಗೆ ದಿನಾಂಕ 15–06–2009 ರಿಂದ 02–07–2009ರ ವರೆಗೆ ಮತ್ತು ದಿನಾಂಕ 11–11–2009 ರಿಂದ 26–12–2009ರ ಅವಧಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಶ್ರೀ ಹೆಚ್. ಎಸ್. ರಾಮಕೃಷ್ಣ ರವರು ಪರಿಹಾರ ಪಾವತಿಸಿರುತ್ತಾರೆ. ಈ ಪೈಕಿ ಕಾನೂನುಗಳನ್ನು ಉಲ್ಲಂಘನೆ ಮಾಡಿ ಅಂದಾಜು 10–35 ಎಕರೆ ಜಮೀನಿಗೆ ಒಟ್ಟು ರೂ. 6.53 ಕೋಟಿಗಳ ಪರಿಹಾರವನ್ನು ವಿತರಿಸಿರುತ್ತಾರೆಂಬ ಮಾಹಿತಿಯ ವರದಿಯನ್ನು ಶ್ರೀ ಕೆ ಸಿ ಲಕ್ಷ್ಮೀನಾರಾಯಣ, ಪೊಲೀಸ್ ಇನ್‌ಸ್ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಈ ವರದಿಯನ್ನು ಆಧರಿಸಿ, ಶ್ರೀ ಹೆಚ್ ಎಸ್ ರಾಮಕೃಷ್ಣ ಹಾಗೂ ಇತರರ ವಿರುದ್ಧ ದಿನಾಂಕ 21–09–2010 ರಂದು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಮೊಕದ್ದಮೆ ಸಂಖ್ಯೆ: 46/2010ರಲ್ಲಿ ಕಲಂ 7,8,13(1)(ಸಿ)(ಡಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ, 1988 ಮತ್ತು ಕಲಂ 465, 468, 471, 420, 120ಬಿ Indian Penal Code ರೀತ್ಯಾ ಪ್ರಕರಣವನ್ನು ದಾಖಲಿಸಲಾಗಿದೆ.

4. ನಂತರ, ಸಕ್ಷಮ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆದು, ದಿನಾಂಕ 22–09–2010 ರಂದು ಶ್ರೀ ರಾಮಕೃಷ್ಣ ರವರ ವಾಸದ ಮನೆ ನಂ. ಸಿ–85/ಎ, 5ನೇ ಕ್ರಾಸ್, ಪಿಡಬ್ಲ್ಯುಡಿ ಕ್ವಾಟ್ರಸ್, ವಸಂತನಗರ, ಬೆಂಗಳೂರು ಅನ್ನು ಪಂಚರ ಸಮಕ್ಷಮ ಶೋಧನೆ ನಡೆಸಿ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ.

5. ದಿನಾಂಕ 11–11–2010 ರಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ನವರಿಗೆ ಭೂ ಪರಿಹಾರ ಪಾವತಿಸಿರುವ ಸಂಬಂಧಿಸಿದ ಕಡತವನ್ನು ತನಿಖಾಧಿಕಾರಿಯಾದ ಶ್ರೀ ಬಿ ಎನ್ ಕೃಷ್ಣಮೂರ್ತಿ, ಪೊಲೀಸ್ ಇನ್‌ಸ್ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರು ವಶಪಡಿಸಿಕೊಂಡಿರುತ್ತಾರೆ.

6. ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಬೆಂಗಳೂರು ಇವರ ದಿನಾಂಕ 02–12–2010ರ ವರದಿಯಂತೆ.

1. ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಬಿ ಕೆ ಪಾಳ್ಯ (ಬಂಡಿಕೊಡಿಗೇಹಳ್ಳಿ ಪಾಳ್ಯ) ಗ್ರಾಮದ ಸರ್ವೆ ನಂ. 7 ರಲ್ಲಿನ ಜಮೀನು ಈ ಹಿಂದೆ ಹಲವರಿಗೆ ಮಂಜೂರಾಗಿರುತ್ತದೆ. ಈ ಪೈಕಿ 04–00 ಎಕರೆ ಜಮೀನು ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ಎಂಬುವವರಿಗೆ ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿಗಳ ಆದೇಶ ಸಂಖ್ಯೆ: LND SR 300/60-61, ದಿನಾಂಕ 27–01–1961ರಲ್ಲಿ ಮಂಜೂರು ಮಾಡಿ ಸಾಗುವಳಿ ಚೀಟಿ ನೀಡಲಾಗಿರುವುದು ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: FOR CR 1/94-95, ದಿನಾಂಕ 23–11–1994ರಲ್ಲಿ ನಮೂದಿಸಲಾಗಿದೆ ಅದರೆ ಆದೇಶ ಸಂಖ್ಯೆ: LND SR 300/60-61ರ ಮೂಲ ಕಡತವು ಲಭ್ಯವಿರುವುದಿಲ್ಲ.

2. ತಹಶೀಲ್ದಾರ್, ದೇವನಹಳ್ಳಿ ಇವರ ಕಾರ್ಯಾಲಯದ ದೃಢೀಕರಿಸಿದ ದರಖಾಸ್ತು ವಹಿ ಸಂಖ್ಯೆ: 206/60–61 ರಲ್ಲಿ ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ರವರ ಹೆಸರನ್ನು ನಮೂದಿಸಿರುವುದು ಕಂಡುಬರುತ್ತದೆ.
3. ಆದರೆ, ಬಿ ಕೆ ಪಾಳ್ಯದ ಸರ್ವೆ ನಂ 7 ರಲ್ಲಿನ ಜಮೀನು ಮಂಜೂರಿದಾರರು ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40 ರಲ್ಲಿ ಸ್ವಾಧೀನದಲ್ಲಿ ಇರುವುದು ಕಂಡು ಬಂದ ಕಾರಣ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: FOR CR 1/94-95 ದಿನಾಂಕ 23–11–1994ರ ಪ್ರಕಾರ ಸ್ಥಳ ಬದಲಾವಣೆಯಾಗಿದ್ದ 8 ಮಂಜೂರಿದಾರರಿಗೆ ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40 ರಲ್ಲಿ ಸಾಗುವಳಿ ಚೀಟಿ ನೀಡಿ, ಮ್ಯೂಟೇಷನ್ ದಾಖಲೆಗಳನ್ನು ನೀಡಲಾಗಿದೆ. ಆದರೆ, ಬಿ ಕೆ ಪಾಳ್ಯ ಗ್ರಾಮದ ಸರ್ವೆ ನಂ 7ಕ್ಕೆ ಇದ್ದಂತಹ ಮಂಜೂರಾತಿ ದಾಖಲೆ, ಪಹಣಿ ಮ್ಯೂಟೇಷನ್‌ಗಳನ್ನು ರದ್ದುಗೊಳಿಸಿ ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40ಕ್ಕೆ ದಾಖಲೆಗಳನ್ನು ಮುಂದುವರಿಸಬೇಕಾಗಿತ್ತು. ಆದರೆ ಕಂದಾಯ ಸಿಬ್ಬಂದಿಯು ಇದನ್ನು ಗಮನಿಸದೇ ಎರಡೂ ಸರ್ವೆ ನಂಬರುಗಳಲ್ಲಿ ದಾಖಲೆಗಳು ಮುಂದುವರೆದಿರುತ್ತದೆ.
4. ಆದರೆ, ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ರವರ ಹೆಸರು ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40ಕ್ಕೆ ಸ್ಥಳ ಬದಲಾವಣೆಯ ಪಟ್ಟಿಯಲ್ಲಿ ಇರುವುದಿಲ್ಲ.
5. ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ರವರು ತಮ್ಮ 04–00 ಎಕರೆ ಜಮೀನಿನ ಪೈಕಿ 02–00 ಎಕರೆ ಜಮೀನನ್ನು ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ರವರಿಗೆ ಕ್ರಯಪತ್ರದ ಮೂಲಕ ದಿನಾಂಕ 19–02–1970 ರಂದು ಮಾರಾಟ ಮಾಡಿರುತ್ತಾರೆ ನಂತರ ಉಳಿಕೆ 02–00 ಎಕರೆ ಜಮೀನನ್ನು ಶ್ರೀ ದೊಡ್ಡಮುನಿಯಪ್ಪ ಬಿನ್ ಮುನಿಶಾಮಪ್ಪ ರವರಿಗೆ ಮಾರಾಟ ಮಾಡಿದ್ದು, ನಂತರ ಈ ಜಮೀನು ಶ್ರೀ ಪಿಳ್ಳಪ್ಪ ಮತ್ತು ಕೆಂಚಮ್ಮ ಇವರಿಗೆ ಮಾರಾಟವಾಗಿರುತ್ತದೆ.
6. ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ನವರಿಗೆ ಬಿ ಕೆ ಪಾಳ್ಯದ ಸರ್ವೆ ನಂ 7 ರಲ್ಲಿ ಯಾವುದೇ ಜಮೀನು ಉಳಿದಿಲ್ಲದಿದ್ದರೂ, ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: FOR CR 1/94-95 ದಿನಾಂಕ 23–11–1994ರ ಸ್ಥಳ ಬದಲಾವಣೆಯಾದ ಮಂಜೂರಿದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೂ, ಸ್ಥಳ ಬದಲಾವಣೆಗೆ ತಿದ್ದುಪಡಿ ಆದೇಶವಾಗಿರುವಂತೆ ಸಂಖ್ಯೆ: ಆರ್ ಆರ್ 17/1996–97ರ ಪ್ರಕಾರ ಮತ್ತೊಮ್ಮೆ ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40 ರ ಪೈಕಿ ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ನವರಿಗೆ 02–00 ಎಕರೆ ಶ್ರೀ ಪಿಳ್ಳಪ್ಪ ಬಿನ್ ಮುನಿಶಾಮಪ್ಪ ಉರುಫ್ ತಿಮ್ಮರಾಯಪ್ಪ ನವರಿಗೆ 01–00 ಎಕರೆ ಮತ್ತು ಶ್ರೀಮತಿ ಕೆಂಚಮ್ಮ ಬಿನ್ ಮುನಿಶಾಮಪ್ಪ ಉರುಫ್ ತಿಮ್ಮರಾಯಪ್ಪ ನವರಿಗೆ 01–00 ಎಕರೆಯಂತೆ ಒಟ್ಟು 04–00 ಎಕರೆ ಸ್ಥಳ ಬದಲಾವಣೆಗೆ ಆದೇಶವಾಗಿರುವಂತೆ ಖಾತೆ ಅಂಗೀಕರಿಸಲಾಗಿದೆ.
7. ಅಂದರೆ, ಮೇಲ್ಕಂಡ ಕ್ರಯದಾರರಿಗೆ ಬಿ ಕೆ ಪಾಳ್ಯದ ಸರ್ವೆ ನಂ 7ರಲ್ಲಿ 04–00 ಎಕರೆ ಮತ್ತು ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40 ರಲ್ಲಿ 04–00 ಎಕರೆ ಜಮೀನಿಗೆ ಕಂದಾಯ ದಾಖಲೆಗಳನ್ನು ಮುಂದುವರೆಸಲಾಗಿದೆ.
8. ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ FOR CR 1/94-95 ದಿನಾಂಕ 23–11–1994 ರಲ್ಲಿನ ನಮೂದುಗಳಂತೆ, ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ನವರಿಗೆ ಬಿ ಕೆ ಪಾಳ್ಯದ ಸರ್ವೆ ನಂ 7ರಲ್ಲಿ 04–00 ಎಕರೆ ಮಂಜೂರಾಗಿರುವುದು ನೈಜತೆಯಿಂದ ಕೂಡಿದೆ ಎಂದು ಪರಿಗಣಿಸಿದರೂ, ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40 ರಲ್ಲಿ 04–00 ಎಕರೆ ಜಮೀನಿಗೆ ಸ್ಥಳ ಬದಲಾವಣೆ ಆಗಿದೆ ಎಂದು ನಮೂದು ಮಾಡಿ ಖಾತೆ ಅಂಗೀಕರಿಸಿರುವುದು ಕರ್ತವ್ಯ ಲೋಪವಾಗಿದೆ ಹಾಗೂ ಸೃಷ್ಠಿತ ದಾಖಲೆಯಾಗಿರುತ್ತದೆ.
9. ಬಿ. ಕೆ. ಪಾಳ್ಯದ ಸರ್ವೆ ನಂ. 7 ರಲ್ಲಿನ 04–00 ಎಕರೆ ಜಮೀನು ಮಂಜೂರಿದಾರರಾದ ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ನವರಿಂದ ಮಾರಾಟವಾಗಿ ಹಾಲಿ ಶ್ರೀ ಕೃಷ್ಣಪ್ಪ ಹಾಗೂ ಇತರೆಯವರಿಗೆ ಹಕ್ಕುಗಳು ವರ್ಗಾವಣೆಗೊಂಡು ಕಂದಾಯ ದಾಖಲೆಗಳಲ್ಲಿ ಮುಂದುವರಿದಿದ್ದರೂ ಯಾವುದೇ ಮಂಜೂರಾತಿ ಆದೇಶ ಇಲ್ಲದಿದ್ದರೂ ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40 ರ ಪೈಕಿ 04–00 ಎಕರೆ ಜಮೀನಿನಲ್ಲಿ ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ನವರು ಸ್ವಾಧೀನದಲ್ಲಿರುವುದಾಗಿ ಮ್ಯೂಟೇಷನ್ ಅಂಗೀಕರಿಸಿರುವುದು ಸೃಷ್ಠಿತ ದಾಖಲೆಗಳೆಂದು ಪರಿಗಣಿಸಬೇಕಿದೆ ಈ ಸೃಷ್ಠಿತ ದಾಖಲೆಗಳ ಆಧಾರದ ಮೇಲೆ ನಡೆದಿರುವ ಎಲ್ಲ ಕ್ರಯದ ವಹಿವಾಟುಗಳು ಅಸಿಂಧುವಾಗಿರುತ್ತದೆ.
10. ಬಂಡೀಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂ 40/358 ಕ್ಕೆ ಶ್ರೀ ಕೃಷ್ಣಪ್ಪನ ತಮ್ಮನ ಮಕ್ಕಳಾದ ಶ್ರೀ ಸುಬ್ಬಣ್ಣ ಮತ್ತು ಶ್ರೀ ರಾಮು ಹಾಗೂ ಬಿ ಕೆ ಪಾಳ್ಯ ಗ್ರಾಮದ ಸವೆ ನಂ 7/ಪಿ20 ಕ್ಕೆ ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ರವರುಗಳು ಅಕ್ರಮ ದಾಖಲೆಗಳ ಮೇಲೆ ಹಕ್ಕು ಸೃಷ್ಟಿಸಿಕೊಂಡಿದ್ದು, ಇವರುಗಳು ನೈಜ ಮಾಲೀಕರಾಗಲು ಸಾಧ್ಯವಿಲ್ಲ ಹಾಗೂ ಈ ಜಮೀನುಗಳಿಗೆ ಪರಿಹಾರ ಹಣವನ್ನು ಪಡೆಯಲು ಅನರ್ಹರಾಗಿರುತ್ತಾರೆ. ಈ ಎರಡೂ ಸರ್ವೆ ನಂಬರುಗಳ ಜಮೀನು ಒಂದೇ ಆಗಿರುತ್ತದೆ ಆದರೆ ಸ್ಥಳ ಬದಲಾವಣೆಯ ಆದೇಶದಂತೆ ದಾಖಲಾತಿಗಳನ್ನು ರದ್ದುಪಡಿಸಿರುವುದಿಲ್ಲ.
11. ಬಂಡೀಕೊಡಿಗೆಹಳ್ಳಿ ಗ್ರಾಮದ ಸರ್ವೆ ನಂ 40/358 ರಲ್ಲಿನ 04–00 ಎಕರೆ ಪೈಕಿ 02–20 ಎಕರೆ ಜಮೀನನ್ನು ವಿಶೇಷ ಜಿಲ್ಲಾಧಿಕಾರಿಗಳು ಆದೇಶ ಸಂಖ್ಯೆ: RRT (2)NA CR 364/2008-09, 635/2008-09, 636/2008-09 ರಂತೆ ಮತ್ತು MR 43/2009-10, MR 63/09-10, MR 66/2009-10 ರಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 136(3) ರಡಿ ವಿಚಾರಣೆ ನಡೆಸಿ ಅಕ್ರಮ ದಾಖಲೆಗಳೆಂದು ಪರಿಗಣಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿದೆ ಶ್ರೀ ಸುಬ್ಬಣ್ಣ ನವರ ಹೆಸರಿನಲ್ಲಿರುವ ಉಳಿಕೆ 01–20 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಕಾಲಂ 11ರಲ್ಲಿ SC ST 38/08-09 ರಂತೆ PTCL ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ತಡೆಯಾಜ್ಞೆ ಇರುವುದನ್ನು ನಮೂದಿಸಲಾಗಿದೆ.

7. ಶ್ರೀ ನಾರಾಯಣಪ್ಪ ಬಿನ್ ತಿಮ್ಮರಾಯಪ್ಪ ನವರಿಗೆ ಬಿ ಕೆ ಪಾಳ್ಯದ ಸರ್ವೆ ನಂ 7 ರಲ್ಲಿ ಮಂಜೂರಾದ 04–00 ಎಕರೆ ಜಮೀನಿನ ಪೈಕಿ 02–00 ಎಕರೆ ಜಮೀನನ್ನು ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ಖರೀದಿಸಿದ ನಂತರ ಹಿಸ್ಸೆಯಾಗಿ ಸರ್ವೆ ನಂ 7/ಪಿ 20 ಎಂದಾಗಿರುತ್ತದೆ. ನಂತರ ಇದು ಸ್ಥಳ ಬದಲಾವಣೆಯಾಗಿ ಬಂಡಿಕೊಡಿಗೇಹಳ್ಳಿ ಗ್ರಾಮ ಸರ್ವೆ ನಂ 40/358 ಎಂದಾಗಿರುತ್ತದೆ. ಸಕ್ಷಮ ನ್ಯಾಯಾಲಯವು OS No. 328/1994 ರಲ್ಲಿ ನೀಡಿದ ಆದೇಶದನ್ವಯ, ಈ 02–00 ಎಕರೆ ಜಮೀನು ಶ್ರೀ ಕೃಷ್ಣಪ್ಪನವರ ತಮ್ಮನ ಮಕ್ಕಳಾದ ಶ್ರೀ ರಾಮ ಮತ್ತು ಶ್ರೀ ಸುಬ್ಬಣ್ಣನವರ ಹೆಸರಿಗೆ 01–20 ಎಕರೆ ಮತ್ತು ಮತ್ತೊಬ್ಬ ತಮ್ಮನ ಹೆಂಡತಿಯಾದ ಶ್ರೀಮತಿ ಗೌರಮ್ಮ ಮತ್ತು ತಮ್ಮನ ಮಗಳಾದ ಶ್ರೀಮತಿ ಸರಸ್ವತಿ ಎಂಬುವವರಿಗೆ 00–20 ಎಕರೆ

ಜಮೀನು ಆಸ್ತಿ ವಿಭಾಗದ ಮೂಲಕ ಇವರುಗಳ ಪಾಲಿಗೆ ಬಂದಿರುತ್ತದೆ. ಬಿ ಕೆ ಪಾಳ್ಯದ ಸರ್ವೆ ನಂ 7/ಪಿ20 ಮತ್ತು ಬಂಡಿಕೊಡಿಗೇಹಳ್ಳಿ ಸರ್ವೆ ನಂ 40/358 ರಲ್ಲಿನ ಜಮೀನುಗಳು ಒಂದೇ ಆಗಿದ್ದು, ಬಂಡಿಕೊಡಿಗೇಹಳ್ಳಿ ಸರ್ವೆ ನಂ 40/358ರಲ್ಲಿನ 01–20 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶ್ರೀ ರಾಮ ಮತ್ತು ಶ್ರೀ ಸುಬ್ಬಣ್ಣ ರವರುಗಳು ಒಟ್ಟು ರೂ. 4650000–00 ಗಳ ಪರಿಹಾರವನ್ನು ದಿನಾಂಕ 28–07–2008ರಂದು ಪಡೆದಿರುತ್ತಾರೆ. ಆದರೆ, ಬಿ ಕೆ ಪಾಳ್ಯದ ಸರ್ವೆ ನಂ 7/ಪಿ20 ರ 02–00 ಎಕರೆಗೆ ಸಂಬಂಧಿಸಿದಂತೆ ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ನವರ ಹೆಸರು ಭೂ ಸ್ವಾಧೀನ ಅಧಿಸೂಚನೆಯಲ್ಲಿ ಪ್ರಕಟವಾಗಿರುವುದರಿಂದ ಮತ್ತು ಕುಟುಂಬದ ಸದಸ್ಯರಿಗೆ ಸಕ್ಷಮ ನ್ಯಾಯಾಲಯದ ಆದೇಶದಂತೆ ಈಗಾಗಲೇ ಜಮೀನಿನ ಪಾಲು ನೀಡಿದ ನಂತರವೂ ಪಹಣಿಯಲ್ಲಿ ತನ್ನ ಹೆಸರು ಮುಂದುವರಿದಿರುವುದನ್ನು ಅರಿತಿದ್ದ ಶ್ರೀ ಕೃಷ್ಣಪ್ಪ ನವರು ಈಗಾಗಲೇ ಸ್ರೀ ರಾಮು ಮತ್ತು ಶ್ರೀ ಸುಬ್ಬಣ್ಣ ನವರು ಪರಿಹಾರ ಪಡೆದಿರುವ ಜಮೀನಿನ ಧಾಖಲಾತಿಗಳನ್ನೇ ಕೆಐಎಡಿಬಿ ನೀಡಿದರೆ ಕಾನೂನು ಉಲ್ಲಂಘಿಸಿ ಪರಿಹಾರ ಪಡೆಯುವ ಮೂಲಕ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗುತ್ತದೆ ಎಂಬ ಅರಿವಿನೊಂದಿಗೆ ಸಂಚು ರೂಪಿಸಿ, ಬಿ ಕೆ ಪಾಳ್ಯದ ಸರ್ವೆ ನಂ 7/ಪಿ20 ರ 02–00 ಎಕರೆ ಜಮೀನಿಗೆ ಪರಿಹಾರ ಕೋರಿ ದಿನಾಂಕ 21–06–2009 ರಂದು ಅರ್ಜಿ ಸಲ್ಲಿಸಿರುತ್ತಾರೆ. ಇವರೊಂದಿಗೆ, ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿಯಾದ ಶ್ರೀ ಹೆಚ್ ಎಸ್ ರಾಮಕೃಷ್ಣ, ವಿಷಯ ನಿರ್ವಾಹಕ ಶ್ರೀ ಬಿ ಎಂ ನಾಗಭೂಷಣ ರವರುಗಳು ಶಾಮೀಲಾಗಿ ಈಗಾಗಲೇ ಪರಿಹಾರ ನೀಡಿರುವ ಜಮೀನಿನ ಕ್ರಯ ಪತ್ರದ ವಿವರಗಳು, ಭೂ ಪರಿಹಾರವನ್ನು ವ್ಯವಹರಿಸಿರುವ ಕಡತ, ಪೇಮೆಂಟ್ ರಿಜಿಸ್ಟರ್ ಇತ್ಯಾದಿ ದಾಖಲೆಗಳು ತಮ್ಮ ಕಛೇರಿಯಲ್ಲಿ ಲಭ್ಯವಿರುವುದು ಅರಿವಿದ್ದರೂ ಸಹ ದುರುದ್ದೇಶಪೂರ್ವಕವಾಗಿ ಕಾನೂನು ಉಲ್ಲಂಘಿಸಿ ಅದೇ ಜಮೀನಿಗೆ ಮತ್ತೊಮ್ಮೆ ಭೂ ಪರಿಹಾರಕ್ಕಾಗಿ ಕಡತವನ್ನು ಶ್ರೀ ಬಿ ಎಂ ನಾಗಭೂಷಣ್ ರವರು ಅನುಮೋದನೆಗೆ ಸಲ್ಲಿಸುವುದು ಮೇಲಿನ ಎಲ್ಲ ಅಂಶಗಳ ಅರಿವು ಇದ್ದೂ ಕೂಡ ದುರುದ್ದೇಶಪೂರ್ವಕವಾಗಿ ಕಾನೂನನ್ನು ಉಲ್ಲಂಘಿಸಿ ಶ್ರೀ ಹೆಚ್ ಎಸ್ ರಾಮಕೃಷ್ಣ ರವರು ಪರಿಹಾರದ ಪ್ರಸ್ತಾವನೆಗೆ ಅನುಮೋದನೆ ನೀಡಿ ಅಕ್ರಮವಾದ ಭೂ ಪರಿಹಾರ ಹಣ ರೂ. 1.24 ಕೋಟಿಗಳ ಪರಿಹಾರವನ್ನು ಶ್ರೀ ಕಷ್ಣಪ್ಪ ಬಿನ್ ವೆಂಕಟರಮಣಪ್ಪ ನವರಿಗೆ ನೀಡುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟುಮಾಡಿರುತ್ತಾರೆ.

8. ನಿಯಮಾನುಸಾರದಂತೆ, ಒಂದು ಬಾರಿ ಪರಿಹಾರ ಪಡೆದಿರುವ ಅದೇ ಜಮೀನಿಗೆ ಮತ್ತೊಂದು ಬಾರಿ ಪರಿಹಾರವನ್ನು ನೀಡಬಾರದೆಂಬ ಅರಿವಿದ್ದರೂ ಸಹ, ವಿಷಯ ನಿರ್ವಾಹಕರು ಅನುಮೋದನೆಗೆ ಮಂಡಿಸಿದ ಭೂ ಪರಿಹಾರದ ಕಡತವನ್ನು ಸರಿಯಾಗಿ ಪರಿಶೀಲಿಸದೇ, ಕಛೇರಿ ವ್ಯವಸ್ಥಾಪಕರು ಮತ್ತು ಆಡಿಟ್ ವಿಭಾಗದವರು ಬರೆದ ಷರಾಗಳನ್ನು ಲೆಕ್ಕಿಸದೇ ಆರ್‌ಟಿಸಿ ಯಲ್ಲಿ ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ನವರ ವಿಸ್ತೀರ್ಣ ನಮೂದುಗೊಂಡಿಲ್ಲದಿದ್ದರೂ, ಕಲಂ 136(3)ರ ಬಗ್ಗೆ ವಿಶೇಷ ಜಿಲ್ಲಾಧಿಕಾರಿಗಳಿಂದ ಹಿಂಬರಹ ಪಡೆದಿಲ್ಲದಿದ್ದರೂ ಇದೇ ಜಮೀನಿಗೆ ಸಂಬಂಧಿಸಿದಂತೆ ಶ್ರೀ ರಾಮು ಮತ್ತು ಶ್ರೀ ಸುಬ್ಬಣ್ಣ ನವರಿಗೆ ಪರಿಹಾರ ಪಾವತಿಸುವ ದಾಖಲೆ/ಕಡತಗಳು ಕಛೇರಿಯಲ್ಲಿ ಲಭ್ಯವಿರುವುದಾಗಿ ಅರಿತಿದ್ದರೂ, ತಿರಸ್ಕರಿಸಬೇಕಾದ ಪರಿಹಾರದ ಪ್ರಸ್ತಾವನೆಯನ್ನು ಮಾನ್ಯ ಮಾಡುವ ಮೂಲಕ ಶ್ರೀ ಹೆಚ್ ಎಸ್ ರಾಮಕೃಷ್ಣ ರವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ಆರ್ಥಿಕ ನಷ್ಟವುಂಟುಮಾಡಿ ತಮ್ಮ ಕರ್ತವ್ಯದಲ್ಲಿ ಅಪರಾಧಿಕ ದುರ್ನಡತೆಯನ್ನು ಎಸಗಿರುತ್ತಾರೆ. ಈ ಎಲ್ಲ ಅಂಶಗಳು ಮೇಲಿನ ಕಂಡಿಕೆ 2 ರಲ್ಲಿನ ಸಾಕ್ಷ್ಯಾಧಾರಗಳಿಂದ ದೃಢಪಡುತ್ತದೆ.

9. ಮೇಲ್ಕಂಡ ತನಿಖಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಸಾಕ್ಷ್ಯಾಧಾರಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದೆ. ಆರೋಪಿಯಾದ ಶ್ರೀ ಹೆಚ್ ಎಸ್ ರಾಮಕೃಷ್ಣ ರವರು ಬಿ ಕೆ ಪಾಳ್ಯದ ಸರ್ವೆ ನಂ 7/ಪಿ20 ರ ಪೈಕಿ 02–00 ಎಕರೆ ಜಮೀನು ಮತ್ತು ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ 40/358 ರ ಜಮೀನು ಒಂದೇ ಆಗಿದ್ದು, ಇದಕ್ಕೆ ಈಗಾಗಲೇ ಪರಿಹಾರ ಹಣವನ್ನು ಪಾವತಿಸಲಾಗಿದ್ದರೂ ಸಹ, ಸೃಷ್ಟಿಸಿದ ದಾಖಲೆಗಳ ಆಧಾರದ ಮೇಲೆ ಫಲಾನುಭವಿಯಾದ ಆರೋಪಿ ಶ್ರೀ ಕೃಷ್ಣಪ್ಪ ಬಿನ್ ವೆಂಕಟರಮಣಪ್ಪ ರವರೊಂದಿಗೆ ಒಳಸಂಚು ನಡೆಸಿ ರೂ. 1.24 ಕೋಟಿಗಳ ಪರಿಹಾರ ಹಣವನ್ನು ಮತ್ತೊಂದು ಸಾರಿ ಅಕ್ರಮವಾಗಿ ಪಾವತಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಗೆ/ಸರ್ಕಾರಕ್ಕೆ ಆರ್ಥಿಕ ನಷ್ಟವುಂಟು ಮಾಡುವ ಮೂಲಕ ಕರ್ತವ್ಯದಲ್ಲಿ ದುರ್ನಡತೆ ಎಸಗಿರುವ ಅಂಶವು ತನಿಖಾಧಿಕಾರಿ ಸಲ್ಲಿಸಿರುವ ತನಿಖಾ ವರದಿ, ಸಾಕ್ಷ್ಯಾಧಾರಗಳು ಹಾಗೂ ಕಂಡಿಕೆ 2 ರಲ್ಲಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿದ ನಂತರ ಶ್ರೀ ಹೆಚ್ ಎಸ್ ರಾಮಕೃಷ್ಣ ರವರನ್ನು ಲಂಚ ನಿರೋಧಕ ಕಾಯ್ದೆಯಡಿ ಅಭಿಯೋಜನೆಗೆ ಒಳಪಡಿಸಲು ಸಮರ್ಥನೀಯ ಕಾರಣಗಳು ಇರುವುದನ್ನು ಮನಗಂಡು ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಮೇಲ್ಕಂಡ ಆರೋಪಿತರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಹಾಗೂ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 018 ಕೆಇವಿ 2011, ಬೆಂಗಳೂರು, ದಿನಾಂಕ : 13–06–2011

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಶ್ರೀ ಹೆಚ್ ಎಸ್ ರಾಮಕೃಷ್ಣ ರವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಹಾಗೂ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿದ್ದು ಆರೋಪಿಯಾದ ಶ್ರೀ ಹೆಚ್ ಎಸ್ ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ) ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಹಾಲಿ ಅಮಾನತ್ತಿನಲ್ಲಿರುವ ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಪ್ರಕಾರ ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 120(ಬಿ) ರಡಿಯಲ್ಲಿ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೊಳಪಡಿಸಲು ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ, 1977ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿ ಅಡಿಯಲ್ಲಿ ದಿನಾಂಕ 13–06–11 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ. ಪಿ. ಮೋಹನ್ ರಾಜ್
ಸರ್ಕಾರದ ಉಪ ಕಾರ್ಯದರ್ಶಿ
ಸಿಆಸುಇ (ಸೇವೆಗಳು)

ಪಿ.ಆರ್. 1519

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ನಗರಾಭಿವೃದ್ಧಿ ಇಲಾಖೆಯ ಕಡತಗಳು ಕಾಣೆಯಾಗಿರುವುದಕ್ಕೆ ಸಂಬಂಧಪಟ್ಟಂತೆ ಸಂಬಂಧಿಸಿದ ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ–ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯವರನ್ನು ನೇಮಿಸುವ ಬಗ್ಗೆ–ಆದೇಶ.

ಓದಲಾಗಿದೆ : 1) ನೋಟೀಸ್ ಸಂಖ್ಯೆ: ಸಿಆಸುಇ 14 ಸೇಇವಿ 2010, ದಿನಾಂಕ 13–10–2010

2) ಆರೋಪಿತ 11 ಮಂದಿ ಅಧಿಕಾರಿ/ನೌಕರರು ಸಲ್ಲಿಸಿರುವ ಲಿಖಿತ ಹೇಳಿಕೆಗಳು

ಪ್ರಸ್ತಾವನೆ :

ಶ್ರೀ ವಸಂತ್ ಶ್ರೀಧರ್ ಕುಲಕರ್ಣಿ ಮತ್ತು ಇತರರು–ವಿರುದ್ಧ–ಸರ್ಕಾರ ಮತ್ತು ಇತರರು ಇವರಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಮುಂದಿರುವ ಎಸ್.ಎಲ್.ಪಿ. (ಸಿವಿಲ್) ಪ್ರಕರಣ ಸಂಖ್ಯೆ 6662–6670/2002ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರು ಪಡಿಸಬೇಕಾಗಿದ್ದ ನಗರಾಭಿವೃದ್ಧಿ ಇಲಾಖೆಯ ಅಭಿವೃದ್ಧಿ ಪ್ರಾಧಿಕಾರ ಶಾಖೆಯ ಕಡತ ಸಂಖ್ಯೆ ನಅಇ 118 ಬೆಮಪ್ರಾ 2000 ಇದರೊಂದಿಗೆ ಜೋಡಣೆಯಾಗಿರುವ ಕಡತ ಸಂಖ್ಯೆ ನಅಇ 172 ಬೆಮಪ್ರಾ 1998 ಈ ಎರಡು ಕಡತಗಳು ಕಣ್ಮರೆ/ಕಳೆದು ಹೋಗಿರುವುದಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯ ಶಿಫಾರಸ್ಸಿನಂತೆ ಹೊಣೆಗಾರರಾದ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳಿಗೆ ಮೇಲೆ (1)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸ್ ನಲ್ಲಿ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

1) ಎಸ್. ಜೆ. ಸಂಪತ್ ಕುಮಾರ್
ಅಧೀನ ಕಾರ್ಯದರ್ಶಿ (ಪ್ರಸ್ತುತ ಅಮಾನತ್ತಿನಲ್ಲಿ)
2) ಸಿ. ಟಿ. ನಾರಾಯಣಸ್ವಾಮಿ
ಅಧೀನ ಕಾರ್ಯದರ್ಶಿ–ನಿಯೋಜನೆ ಮೇಲೆ
3) ಎನ್. ವೈ. ಸಾಗರ್
ಅಂದಿನ ಅಧೀನ ಕಾರ್ಯದರ್ಶಿ,
ಗ್ರಾ.ಅ. ಮತ್ತು ಪಂ.ರಾ. ಇಲಾಖೆ
4) ಶಾಂತರಾಮ್ ನಾಯಕ್
ಶಾಖಾಧಿಕಾರಿ (ಪ್ರಸ್ತುತ ಅಮಾನತ್ತಿನಲ್ಲಿ)
5) ಜಿ. ಎಸ್. ಪ್ರಕಾಶ್, ಹಿರಿಯ ಸಹಾಯಕರು ನಗರಾಭಿವೃದ್ಧಿ ಇಲಾಖೆ
6) ಟಿ. ಹಾಲಸಿದ್ದಪ್ಪ, ಹಿರಿಯ ಸಹಾಯಕ (ಪ್ರಸ್ತುತ ಅಮಾನತ್ತಿನಲ್ಲಿ)
7) ಎಲ್. ರಮೇಶ್, ಹಿಂದಿನ ಸಹಾಯಕರು (ಪ್ರಸ್ತುತ ಅಮಾನತ್ತಿನಲ್ಲಿ)
8) ಜಗದೀಶರೆಡ್ಡಿ, ಸಹಾಯಕರು (ಪ್ರಸ್ತುತ ಅಮಾನತ್ತಿನಲ್ಲಿ)
9) ಸಿ. ಆರ್. ರವಿಚಂದ್ರ, ಸಹಾಯಕ, ನಗರಾಭಿವೃದ್ಧಿ ಇಲಾಖೆ
10) ಪಿ. ಎನ್. ನಾಗರಾಜ್, ಸಹಾಯಕರು, ಗ್ರಾ.ಅ.&ಪಂ.ರಾ. ಇಲಾಖೆ
11) ಟಿ. ಹೆಚ್. ಚಿಕ್ಕಹುಚ್ಚಯ್ಯ, ಕಿರಿಯ ಸಹಾಯಕ, (ಪ್ರಸ್ತುತ ಅಮಾನತ್ತಿನಲ್ಲಿ)

ಮೇಲ್ಕಂಡ ಆರೋಪಿತ ಅಧಿಕಾರಿ/ನೌಕರರು ತಮ್ಮ ವಿರುದ್ಧ ಹೊರಿಸಲಾದ ಆರೋಪಗಳನ್ನು ನಿರಾಕರಿಸಿ ತಮ್ಮನ್ನು ದೋಷಮುಕ್ತರನ್ನಾಗಿಸುವಂತೆ ಮೇಲೆ (2)ರಲ್ಲಿ ಓದಲಾದ ಮನವಿಗಳಲ್ಲಿ ಕೋರಿರುತ್ತಾರೆ. ಸದರಿ ಲಿಖಿತ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಆರೋಪಗಳಲ್ಲಿನ ಸತ್ಯಾಸತ್ಯತೆಯನ್ನು ತಿಳಿಯುವ ದೃಷ್ಟಿಯಿಂದ ವಿಚಾರಣೆಯನ್ನು ಮುಂದುವರಿಸಲು ತೀರ್ಮಾನಿಸಿ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 14 ಸೇಇವಿ 2010, ಬೆಂಗಳೂರು, ದಿನಾಂಕ : 8–06–2011

ನಗರಾಭಿವೃದ್ಧಿ ಇಲಾಖೆಯ ಕಡತಗಳು ಕಾಣೆಯಾಗಿರುವುದಕ್ಕೆ ಸಂಬಂಧಪಟ್ಟಂತೆ ಪ್ರಸ್ತಾವನೆಯಲ್ಲಿ ವಿವರಿಸಿರುವ 11 ಮಂದಿ ಅಧಿಕಾರಿ/ನೌಕರರ ವಿರುದ್ಧದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11 ಮತ್ತು 13ರನ್ವಯ ಜಂಟಿ ಇಲಾಖಾ ವಿಚಾರಣೆ ನಡೆಸಲು ನಿಯಮ 11(2)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ರಿಚರ್ಡ್ ಲೋಬೋ, ಜಂಟಿ ಪ್ರಾರೂಪಣಕಾರರು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಬೆಂಗಳೂರು ಅವರನ್ನು ವಿಚಾರಣಾಧಿಕಾರಿಯಾಗಿಯೂ ಹಾಗೂ ಇದೇ ನಿಯಮಾವಳಿಗಳ ನಿಯಮ 11 (5) (ಸಿ)ರ ಅನ್ವಯ ಶ್ರೀ ಜೇವಿಯರ್, ಶಾಖಾಧಿಕಾರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಕೋಶ) ಅವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಕ ಮಾಡಿ ಆದೇಶಿಸಿದೆ.

ವಿಚಾರಣಾಧಿಕಾರಿಗಳು ಅಪಾದಿತರ ಮೇಲಿನ ಆರೋಪಗಳಿಗೆ ವಿಚಾರಣೆಯನ್ನು ನಡೆಸಿ ಆರೋಪ ಸಾಬೀತಾಗಿರುವ ಅಥವಾ ಸಾಬೀತಾಗದೇ ಇರುವ ಅಭಿಪ್ರಾಯಗಳನ್ನು ಒಳಗೊಂಡ ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರಿಯಾದ ಸರ್ಕಾರಕ್ಕೆ 3 ತಿಂಗಳುಗಳ ಒಳಗಾಗಿ ಸಲ್ಲಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎ. ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಸೇವೆಗಳು–3)

ಪಿ.ಆರ್. 1520

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಸಿಆಸುಇ 12 ಸೇನೌವ 2011, ಬೆಂಗಳೂರು, ದಿನಾಂಕ : 07–06–2011

ವಿಷಯ : 2011–12ನೇ ಸಾಲಿನಲ್ಲಿ ಮಾಡುವ ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ.

ದಿನಾಂಕ : 22–11–2001ರ ಸರ್ಕಾರಿ ಆದೇಶ ಸಂಖ್ಯೆ : ಡಿಪಿಎಆರ್ 4 ಎಸ್‌ಟಿಆರ್ 2001ರಲ್ಲಿ ಸರ್ಕಾರಿ ನೌಕರರ ವರ್ಗಾವಣೆ ಕುರಿತಂತೆ ವಿಸ್ತೃತ ಮಾರ್ಗಸೂಚಿಗಳನ್ನು ನೀಡಲಾಗಿದೆ. ಈ ಮಾರ್ಗಸೂಚಿಗಳ ಪ್ರಕಾರ ಸರ್ಕಾರಿ ನೌಕರರ ವರ್ಗಾವಣೆಗಳನ್ನು ಪ್ರತಿ ವರ್ಷ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಮಾತ್ರ ಕೆಲವು ಷರತ್ತಿಗೊಳಪಟ್ಟು ಮಾಡಬಹುದಾಗಿದೆ.

ದಿನಾಂಕ : 27–04–2011ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 12 ಸೇನೌವ 2011ರಲ್ಲಿ 2011–12ನೇ ಸಾಲಿನಲ್ಲಿ ಪೊಲೀಸು ಸಿಬ್ಬಂದಿ ಮಂಡಳಿಯ ವ್ಯಾಪ್ತಿಗೊಳಪಡುವ ಪೊಲೀಸು ಸಿಬ್ಬಂದಿಯನ್ನು ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ರ ವ್ಯಾಪ್ತಿಗೊಳಪಡುವ ಶಿಕ್ಷಕರನ್ನು ಹೊರತುಪಡಿಸಿ ಬೇರೆ ಸರ್ಕಾರಿ ನೌಕರರನ್ನು, ಸದರಿ ಆದೇಶದಲ್ಲಿ ವಿವರಿಸಿರುವ ಸಂದರ್ಭಗಳಲ್ಲಿ, ದಿನಾಂಕ : 31–05–2011ರ ಅವಧಿಯೊಳಗೆ ವರ್ಗಾವಣೆ ಮಾಡಲು ಆದೇಶಿಸಲಾಗಿರುತ್ತದೆ.

ದಿನಾಂಕ : 31–05–2011ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 12 ಸೇನೌವ 2011ರಲ್ಲಿ ದಿನಾಂಕ : 27–04–2011ರ ಮೇಲ್ಕಂಡ ಸರ್ಕಾರಿ ಆದೇಶದಲ್ಲಿ ನಮೂದಿಸಿದ ಸರ್ಕಾರಿ ನೌಕರರ ವರ್ಗಾವಣೆಗಳನ್ನು ದಿನಾಂಕ : 30–06–2011ರವರೆಗೆ ಮಾಡಬಹುದೆಂದು, ಆದರೆ ದಿನಾಂಕ : 02–06–2011 ರಿಂದ ನಡೆಯಲಿರುವ ವಿಧಾನ ಮಂಡಲದ ಅಧಿವೇಶನದ ಅವಧಿಯಲ್ಲಿ ಯಾವುದೇ ವರ್ಗಾವಣೆಗಳನ್ನು ಮಾಡಬಾರದೆಂದು ಆದೇಶಿಸಲಾಗಿರುತ್ತದೆ.

ವಿಧಾನ ಮಂಡಲದ ಅಧಿವೇಶನ ಪ್ರಾರಂಭವಾದ ಮೇಲೆ ಇಲಾಖಾ ವೃಂದಾ ನಿರ್ವಹಣಾ ಪ್ರಾಧಿಕಾರಗಳು ಸರ್ಕಾರಿ ನೌಕರರ ವರ್ಗಾವಣೆಗಳನ್ನು ಮಾಡುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ, ದಿನಾಂಕ : 31–05–2011ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 12 ಸೇನೌವ 2011 ರನ್ವಯ ವಿಧಾನ ಮಂಡಲದ ಅಧಿವೇಶನದ ಅವಧಿಯಲ್ಲಿ ಸರ್ಕಾರಿ ನೌಕರರನ್ನು ಯಾವ ಕಾರಣಕ್ಕೂ ವರ್ಗಾವಣೆ ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ.

ಮೊಹಮ್ಮದ್ ಸನಾವುಲ್ಲಾ
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪಿ.ಆರ್. 1521

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಎನ್.ಆರ್. ನಾಗರಾಜು, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಇವರ ವಿರುದ್ಧ ಲಂಚ ನಿರೋಧ ಕಾಯ್ದೆ, 1988 ಮತ್ತು ಭಾರತೀಯ ದಂಡ ಸಂಹಿತೆ, 1860 ರಡಿ ದಾಖಲಾದ ಪ್ರಕರಣದ ಅಭಿಯೋಜನಾ ಮಂಜೂರಾತಿ ಆದೇಶ.

ಓದಲಾಗಿದೆ :

1) ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ತನಿಖಾಧಿಕಾರಿಗಳು, ಪೊಲೀಸ್ ವಿಂಗ್, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೊಕದ್ದಮೆ ಸಂಖ್ಯೆ : 45/10 ರಲ್ಲಿ ಸಲ್ಲಿಸಿರುವ ಅಂತಿಮ ವರದಿ ದಿನಾಂಕ : 14–03–2011.
2) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ : 12–04–2011ರ ಪತ್ರ ಸಂಖ್ಯೆ : Lok/INV(G)/City/Crime-45/2010.

ಪ್ರಸ್ತಾವನೆ :

ಶ್ರೀ ಎನ್.ಆರ್. ನಾಗರಾಜು, ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರ ವಿರುದ್ಧ ಮೊಕದ್ದಮೆ ಸಂಖ್ಯೆ : 45/2010ರಲ್ಲಿ ಲೋಕಾಯುಕ್ತ ಪೊಲೀಸು ಠಾಣೆ, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ : 2ರ ಪತ್ರದೊಂದಿಗೆ ಕಳುಹಿಸುತ್ತಾ, ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ, 1988ರ 19(1)(ಬಿ) ಕಲಂನಡಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

2. ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರ ಸಂಖ್ಯೆ : LOK/INV(G)/City/Crime-45/2010 ದಿನಾಂಕ : 12–04–2011 ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ ಕೆ.ಸಿ. ಲಕ್ಷ್ಮಿನಾರಾಯಣ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಇವರ ಫಿರ್ಯಾದಿ ದಿನಾಂಕ : 21–09–2010.
2. ಪ್ರಥಮ ವರ್ತಮಾನ ವರದಿ ಬೆಂಗಳೂರು ನಗರ ವಿಭಾಗ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 45/2010, ದಿನಾಂಕ : 21–09–2010.
3. ಶ್ರೀ ಪಿ. ಸಂಪತ್ ಇವರು ವಾಸವಿರುವ ಮನೆ ಸಂಖ್ಯೆ : 338, 17ನೇ ಅಡ್ಡ ರಸ್ತೆ, 8ನೇ ಎ ಮುಖ್ಯ ರಸ್ತೆ, ಮಲ್ಲೇಶ್ವರ (ಪಶ್ಚಿಮ), ರಾಜಾಜಿನಗರ, ಬೆಂಗಳೂರು ಮನೆ ಶೋಧನಾ ಪಂಚನಾಮೆ ದಿನಾಂಕ : 22–09–2010.

4. ಬರವಣಿಗೆಯ ಮಹಜರು ದಿನಾಂಕ : 05–10–2010.

5. ಕಡತಗಳನ್ನು ಅಮಾನತ್ತುಪಡಿಸಿಕೊಂಡ ಮಹಜರು ದಿನಾಂಕ : 11–11–2010, 04–12–2010, 28–09–2010.

6. ಶ್ರೀ ಸಂಪತ್ @ ಸಂತೋಷ್ ಇವರ ತಂದೆ ಶ್ರೀ ಕೆ. ಪುಟ್ಟಪ್ಪ ರವರು State Bank of Mysore, Honnali, ಇಲ್ಲಿ ಹೊಂದಿರುವ ಲಾಕರ್ ನಂ. 23ರ ಶೋಧನಾ ಪಂಚನಾಮೆಯ ದಿನಾಂಕ : 30–12–2010.

7. Proceedings of the Superintendent of Police, Karnataka Lokayukta, Bangalore No. LOK/INV(G)/City/Crime-45/2010 dt. 21-09-2010.

8. Warrant to search after information of a particular offence issued by Addl. City Civil and Sessions Judge, Bangalore dt. 21-09-2010 (FORM NO. 10).

9. ಶ್ರೀ ಸಂಪತ್ ಬಿನ್ ಕೆ. ಪುಟ್ಟಪ್ಪ ಇವರ ನ್ಯಾಯಾಂಗ ಬಂಧನಕ್ಕಾಗಿ ಸಕ್ಷಮ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿ ದಿನಾಂಕ : 22–09–2010.

10. ಶ್ರೀ ಸಂಪತ್ ಬಿನ್ ಕೆ. ಪುಟ್ಟಪ್ಪ ಇವರ ಬಂದನ ತಿಳುವಳಿಕೆ ಪತ್ರ ದಿನಾಂಕ : 22–09–2010.

11. ಸಕ್ಷಮ ನ್ಯಾಯಾಲಯಕ್ಕೆ ಸಲ್ಲಿಸಿದ ಸ್ವತ್ತಿನ ಪಟ್ಟಿಗಳು.

12. Sri H. L. Hanumantharaju ರವರು ಹೊಂದಿರುವ ಖಾತೆಯ ಬಗ್ಗೆ Axix Bank ನವರು ನೀಡಿರುವ ಪತ್ರ ದಿನಾಂಕ : 08–10–2010.

13. CRPC ಕಲಂ 164 ರಡಿ ಸಕ್ಷಮ ನ್ಯಾಯಾಲಯಕ್ಕೆ ತನಿಖಾಧಿಕಾರಿಗಳು ಸಲ್ಲಿಸಿದ ನಿವೇದನೆ ದಿನಾಂಕ : 07–01–2011 (ಸಾಕ್ಷಿ ನುಡಿಯುವ ಬಗ್ಗೆ)

14. (1) ಶ್ರೀಮತಿ ನಾರಾಯಣಮ್ಮ ಕೋಂ ಲೇಟ್ ಕರಗದ ಮುನಿಶಾಮಪ್ಪ (2) ಶ್ರೀಮತಿ ಮುನಿಯಮ್ಮ ಕೋಂ ಅಂಗಡಿ ಚಿಕ್ಕಆಂಜಿನಪ್ಪ (3) ಶ್ರೀ ಬಿ.ಸಿ. ಶಿವಪ್ರಕಾಶ್ ಬಿನ್ ಅಂಗಡಿ ಚಿಕ್ಕಆಂಜಿನಪ್ಪ (4) ಶ್ರೀ ವಿ. ವೀರಣ್ಣ ಬಿನ್ ವೆಂಕಟಶಾಮಪ್ಪ (5) ಶ್ರೀ ಐ. ಬಾಲರಾಜ್ ಬಿನ್ ಇನ್ನೇಶಪ್ಪ (6) ಶ್ರೀ ಬಿ.ಎಂ. ನಾರಾಯಣಸ್ವಾಮಿ ಬಿನ್ ಮುನಿಭೈರಪ್ಪ (7) ಶ್ರೀ ಕೆ.ಪ್ರಕಾಶ್ ಬಿನ್ ಕೃಷ್ಣಪ್ಪ (8) ಶ್ರೀ ರಾಜು @ ರಾಜಣ್ಣ ಬಿನ್ ನಾರಾಯಣಸ್ವಾಮಿ (9) ಶ್ರೀ ಎಸ್. ಪಿ. ನಾಗೇಶಬಾಬು ಬಿನ್ ಲೇಟ್ ಎಸ್ ಪಾಲಾಕ್ಷಪ್ಪ (10) ಶ್ರೀಮತಿ ಕೆ. ಸುನಂದ ಕೋಂ ಕೆ.ವಿ. ಕೃಷ್ಣಮೂರ್ತಿ (11) ಶ್ರೀ ಎಂ. ಕೃಷ್ಣಪ್ಪ ಬಿನ್ ಲೇಟ್ ಮುನಿಶಾಮಪ್ಪ (12) ಶ್ರೀ ಎಸ್.ಎಸ್. ಗೀತಾ ಕೋಂ ರಾಧಾಕೃಷ್ಣನ್ (13) ಶ್ರೀ ಬಿ.ಹೆಚ್. ಶಶಿಕುಮಾರ್ ಬಿನ್ ಬಿ.ಎಲ್. ಹನುಮಂತರಾಜು (14) ಶ್ರೀ ಎ. ಅಲ್ಲಾಬಕ್ಷ್ ಬಿನ್ ಲೇಟ್ ಮೆಹಬೂಬ್ ಸಾಬ್ (15) ಶ್ರೀ ನರಸಿಂಹಯ್ಯ ಬಿನ್ ಲೇಟ್ ದೊಡ್ಡಣ್ಣ ಇವರ ಹೇಳಿಕೆಗಳು.

15. ಶ್ರೀಮತಿ ಧನಲಕ್ಷ್ಮಿ, ಕಂದಾಯ ಅಧಿಕಾರಿ ಇವರ ಪತ್ರ ದಿನಾಂಕ : 10–12–2010, 03–12–2010.

16. ಪ್ರಕರಣದ ತನಿಖೆಗಾಗಿ ಮಾಹಿತಿ ಹಾಗೂ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಪತ್ರ ದಿನಾಂಕ : 09–09–2010.

17. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಡತ ಸಂಖ್ಯೆ : ARB-1–6 ಮತ್ತು LAQ 1/2006-07 ಮತ್ತು ಇದರಲ್ಲಿನ ದಾಖಲೆ ಪ್ರತಿಗಳು.

18. ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರ ಪತ್ರ ದಿನಾಂಕ : 19–06–2009 ಮತ್ತು 22–02–2011.

19. ಅರೆಭಿನ್ನಮಂಗಲ ಗ್ರಾಮ ಸರ್ವೆ ನಂ. 1ರ ಭೂ ಮಂಜೂರಾತಿಗೆ ಸಂಬಂಧಿಸಿದ ಕಡತ ಸಂಖ್ಯೆ : LND/SR/1-551/60-61 ಲಭ್ಯವಿಲ್ಲವೆಂದು ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರು ನೀಡಿರುವ ಹಿಂಬರಹ ದಿನಾಂಕ : 19–06–2009.

20. ಅರೆಭಿನ್ನಮಂಗಲ ಗ್ರಾಮದ ಸರ್ವೆ ನಂ.1ರ ಪೈಕಿ 06.00 ಎಕರೆ ಜಮೀನಿಗೆ ನೀಡಿರುವ ಸಾಗುವಳಿ ಚೀಟಿ ವಿತರಣಾ ವಹಿಯು ಲಭ್ಯವಿಲ್ಲದಿರುವ ಬಗ್ಗೆ ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ಇವರು ನೀಡಿರುವ ಹಿಂಬರಹ ದಿನಾಂಕ : 20–06–2009.

21. ಅರೆಭಿನ್ನಮಂಗಲ ಗ್ರಾಮದ ಸರ್ವೆ ನಂ.1ರ ಸ್ಥಳ ಪರಿಶೀಲನೆ ಕುರಿತಂತೆ Surveyor, KIADB, ಗ್ರಾಮ ಲೆಕ್ಕಾಧಿಕಾರಿಗಳು ಇವರು ಸಲ್ಲಿಸಿದ ವರದಿ, ನಕ್ಷೆ ಇತ್ಯಾದಿಗಳು.

22. ಭೂ ಪರಿಹಾರ ಕೋರಿ ಶ್ರೀ ಹನುಮಂತರಾಜು/ಎಲ್.ಎನ್. ಶಿವಣ್ಣ ರವರು ಬರೆದ ಮನವಿ.

23. ಶ್ರೀ ಬಿ.ಎಲ್. ಹನುಮಂತರಾಜು ಇವರ ಭಾರತ ಚುನಾವಣಾ ಆಯೋಗ ನೀಡಿರುವ ಗುರುತಿನ ಚೀಟಿಯ ಪ್ರತಿ ಮತ್ತು ಪಡಿತರ ಚೀಟಿಯ ಪ್ರತಿ.

24. ಗ್ರಾಮ ಲೆಕ್ಕಾಧಿಕಾರಿಗಳು ನೀಡಿರುವ ಶ್ರೀ ಬಿ.ಎಲ್. ಹನುಮಂತರಾಜು ರವರ ವಂಶವೃಕ್ಷದ ಪ್ರತಿ.

25. ಶ್ರೀ ಎಲ್.ಎನ್. ಶಿವಣ್ಣ ರವರ ಮರಣ ಪ್ರಮಾಣ ಪತ್ರ ದಿನಾಂಕ : 31–12–2007.

26. ಅರೆಭಿನ್ನಮಂಗಲ ಗ್ರಾಮದ 2ನೇ ಬ್ಲಾಕ್‌ನಲ್ಲಿ 06–00 ಎಕರೆ ಜಮೀನು ಎಲ್.ಎನ್.ಶಿವಣ್ಣ ಬಿನ್ ಸಿದ್ದಪ್ಪ ಇವರಿಗೆ ಮಂಜೂರಾದ ಬಗ್ಗೆ LND/SR/1-551/60-61 ಆದೇಶದ ಪ್ರತಿ.

27. ಶ್ರೀ ಬಿ.ಎಲ್. ಹನುಮಂತರಾಜು ರವರಿಗೆ ಗ್ರಾಮ ಲೆಕ್ಕಾಧಿಕಾರಿಗಳು ನೀಡಿರುವ ಭೂ ಹಿಡುವಳಿ ದೃಢೀಕರಣ ಪತ್ರ.

28. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ, 1966 ರ ವಿಧಿ 28(2)ರ ಮೇರೆಗೆ ಶ್ರೀ ಎಲ್.ಎನ್. ಶಿವಣ್ಣ ಬಿನ್ ಸಿದ್ದಪ್ಪ ಇವರ ಹೆಸರಿಗೆ ಹೊರಡಿಸಲಾದ ನೋಟೀಸು ಪ್ರತಿ ದಿನಾಂಕ : 14–08–2006.

29. ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ಇವರು ಅರೆಭಿನ್ನಮಂಗಲ ಗ್ರಾಮ ಸರ್ವೆ ನಂ.1ರಲ್ಲಿ ಮಂಜೂರಿದಾರರ ಹೆಸರುಗಳ ಪಟ್ಟಿ ನೀಡಿರುವ ಪ್ರತಿ.

30. ಅರೆಭಿನ್ನಮಂಗಲ ಗ್ರಾಮದ ಸರ್ವೆ ನಂ. 1/4ರ ಬಗ್ಗೆ ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರ ಪತ್ರ ದಿನಾಂಕ : 29–11–2010 (ಕಡತ–3 ಪುಟ ಸಂಖ್ಯೆ–131).

31. ಅರೆಭಿನ್ನಮಂಗಲ ಗ್ರಾಮದ ಸರ್ವೆ ನಂ.1ರ ಒತ್ತುವರಿ ಬಗ್ಗೆ ವಿಶೇಷ ಜಿಲ್ಲಾಧಿಕಾರಿಗಳು (ಜಾರಿದಳ), ಬೆಂಗಳೂರು, ಇವರ ಪತ್ರ ದಿನಾಂಕ : 29–11–2010 (ಕಡತ–3 ಪುಟ ಸಂಖ್ಯೆ–139).

32. ಶ್ರೀ ಬಿ.ಎಲ್. ಹನುಮಂತರಾಜು ರವರ ಸೇವಾ ವಿವರಗಳಿಗೆ ಸಂಬಂಧಿಸಿದಂತೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಪತ್ರ ದಿನಾಂಕ : 08–12–2010, 20–12–2010 (ಪುಟ ಸಂಖ್ಯೆ–146, 156).

33. University of Agricultural Sciences, Bangalore ಇವರಿಗೆ Sri. B.L. Hanumantharaju ರವರು ದಿನಾಂಕ : 23–02–2001 ರಂದು ನಿವೃತ್ತಿ ವೇತನಕ್ಕಾಗಿ ಸಲ್ಲಿಸಿದ ಅರ್ಜಿಯ ಪ್ರತಿ (ಕಡತ–3 ಪುಟ ಸಂಖ್ಯೆ–157).

34. ಶ್ರೀ ಬಿ.ಎಲ್. ಹನುಮಂತರಾಜು, ಸಹಾಯಕ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಸೇವಾ ಪುಸ್ತಕದ ನಕಲು (ಕಡತ–3 ಪುಟ ಸಂಖ್ಯೆ–159).

35. ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ದಿನಾಂಕ : 29–12–2010 (ಪುಟ ಸಂಖ್ಯೆ–165).

36. ಜಂಟಿ ನಿರ್ದೇಶಕರು (ಸಾಂಖ್ಯಿಕ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಪತ್ರ ದಿನಾಂಕ : 28–12–2010 (ಶ್ರೀ ಎಲ್.ಎನ್. ಶಿವಣ್ಣ ಬಿನ್ ಸಿದ್ದಪ್ಪ ಇವರ ಮರಣ ಪ್ರಮಾಣ ಪತ್ರದ ಬಗ್ಗೆ) (ಪುಟ ಸಂಖ್ಯೆ–174).

37. ಅರೆಭಿನ್ನಮಂಗಲ ಗ್ರಾಮದ ಸರ್ವೆ ನಂ. 1 ರಲ್ಲಿ 1961–62 ನೇ ಸಾಲಿನಲ್ಲಿ ಮಂಜೂರಾಗಿರುವ ಮಂಜೂರಿದಾರರ Register of Darkhast ವಹಿಯ ಪ್ರತಿಯನ್ನು ಲಗತ್ತಿಸುತ್ತಾ, ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿಗಳು ಬರೆದ ಪತ್ರ ದಿನಾಂಕ : 10–12–2010.

38. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಅರೆಭಿನ್ನಮಂಗಲ ಗ್ರಾಮದ ಸರ್ವೆ ನಂ. 1/1, ಬ್ಲಾಕ್ ನಂ. 2 ವಿಸ್ತೀರ್ಣ 06–00 ಎಕರೆ ಜಮೀನಿನ ಸ್ಥಳ ಪರಿಶೀಲನೆ ನಡೆಸಿದ ಬಗ್ಗೆ ಭೂ ಮಾಪಕರು ಸಲ್ಲಿಸಿದ ವರದಿ ದಿನಾಂಕ : 18–01–2011.

39. ಇತರೇ ದಾಖಲೆ ಪ್ರತಿಗಳು.

3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಏರೋಸ್ಪೇಸ್, ಐ.ಟಿ. ಪಾರ್ಕ್, ಹಾರ್ಡ್‌ವೇರ್ ಪಾರ್ಕ್ ಯೋಜನೆಗಳಿಗಾಗಿ ದುಮ್ಮನಹಳ್ಳಿ, ಸಿಂಗಹಳ್ಳಿ, ಉಣಸೂರು, ಜೊನ್ನಹಳ್ಳಿ, ಬಾಲದಿಮ್ಮನಹಳ್ಳಿ, ಕವಡದಾಸನಹಳ್ಳಿ, ಭಟ್ರಮಾರನಹಳ್ಳಿ, ಬಂಡಿಕೊಡಿಗೇಹಳ್ಳಿಪಾಳ್ಯ, ಅರೆಭಿನ್ನಮಂಗಲ, ಗೊಲ್ಲಹಳ್ಳಿ, ಬಂಡಿಕೊಡಿಗೇಹಳ್ಳಿ, ಬಾಗಲೂರು, ಹೋವಿನನಾಯಕನಹಳ್ಳಿ ಮತ್ತು ಮಹದೇವಕೊಡಿಗೇಹಳ್ಳಿ ಹಳ್ಳಿಗಳ ವಿವಿಧ ಸರ್ವೆ ನಂಬರುಗಳಲ್ಲಿ ಒಟ್ಟು 3266–10 1/4 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುತ್ತದೆ. ಈ ಪೈಕಿ ಒಟ್ಟು 313–38 1/4 ಎಕರೆ ಜಮೀನಿಗೆ ದಿನಾಂಕ : 26–12–2009 ರಿಂದ 28–06–2010 ರವರೆಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಶ್ರೀ ಎನ್.ಆರ್. ನಾಗರಾಜು ರವರು ಕಾನೂನುಗಳನ್ನು ಉಲ್ಲಂಘನೆ ಮಾಡಿ ಒಟ್ಟು ರೂ. 183,89,20,208–00 ಗಳ ಪರಿಹಾರವನ್ನು ವಿತರಿಸಿರುತ್ತಾರೆಂಬ ಮಾಹಿತಿಯ ವರದಿಯನ್ನು ಶ್ರೀ ಕೆ.ಸಿ. ಲಕ್ಷ್ಮೀನಾರಾಯಣ, ಪೋಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಈ ವರದಿಯನ್ನು ಆಧರಿಸಿ, ಶ್ರೀ ನಾಗರಾಜು ಹಾಗೂ ಇತರರ ವಿರುದ್ಧ ದಿನಾಂಕ : 21–09–2010 ರಂದು ಕರ್ನಾಟಕ ಲೋಕಾಯುಕ್ತ ಪೊಲೀಸು ಠಾಣೆ, ಬೆಂಗಳೂರು ನಗರ ವಿಭಾಗ ಇಲ್ಲಿ ಮೊಕದ್ದಮೆ ಸಂಖ್ಯೆ : 45/2010 ರಲ್ಲಿ ಕಲಂ 7, 8, 13(1)(ಸಿ)(ಡಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ, 1988 ಮತ್ತು ಕಲಂ 465, 468, 471, 420, 120ಬಿ Indian Penal Code ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ.

4. ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಅರೆಭಿನ್ನಮಂಗಲ ಗ್ರಾಮದ ಒಟ್ಟು 398–33 ಎಕರೆ ಜಮೀನು ಸಹ ಭೂ ಸ್ವಾಧೀನವಾಗಿದ್ದು, ಈ ಪೈಕಿ ಸರ್ವೆ ನಂ. 1 ರಲ್ಲಿನ ಗೋಮಾಳ ಜಮೀನನ್ನು ಒಟ್ಟು 16 ಜನರಿಗೆ ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ಇವರ ಆದೇಶದ ಸಂಖ್ಯೆ : LND SR 1-551/60-61, ದಿನಾಂಕ : 14–11–60/61 ರಲ್ಲಿ ತಲಾ 06–00 ಎಕರೆಯಂತೆ ಪೊಲಿಟಿಕಲ್ ಸಫರರ್ಸ್ ರೂಲ್ಸ್ ಮೇರೆಗೆ ಮಂಜೂರು ಮಾಡಲಾಗಿದೆ. ಸದರಿ ಭೂ ಮಂಜೂರಾತಿ ಅದೇಶದ ಕ್ರಮ ಸಂಖ್ಯೆ 3 ರಲ್ಲಿ ಶ್ರೀ ಎಲ್.ಎನ್.ಶಿವಣ್ಣ ಬಿನ್ ಸಿದ್ದಪ್ಪ ಎಂಬುವವರ ಹೆಸರು ಇದ್ದು, ಸರ್ವೆ ನಂ. 1ರ ಒಟ್ಟು ವಿಸ್ತೀರ್ಣವನ್ನು ಹಿಸ್ಸೆ ಮಾಡಿ ಇದರಲ್ಲಿನ 06–00 ಎಕರೆ ವಿಸ್ತೀರ್ಣಕ್ಕೆ ಸರ್ವೆ ನಂ. 1/4 ಎಂದು ನಮೂದಿಸಿ, ಶ್ರೀ ಎಲ್.ಎನ್.ಶಿವಣ್ಣ ರವರ ಹೆಸರಿಗೆ ಖಾತೆ ಮಾಡಲಾಗಿದೆ. ಸದರಿ ಅರೆಬಿನ್ನಮಂಗಲ ಗ್ರಾಮವು ಈ ಮೊದಲು ದೇವನಹಳ್ಳಿ ತಾಲ್ಲೂಕು ಕಛೇರಿಯ ವ್ಯಾಪ್ತಿಗೆ ಒಳಪಟ್ಟಿದ್ದು, 1978–79ನೇ ಸಾಲಿನ ಕೈಬರಹದ ಆರ್.ಟಿ.ಸಿ ಯಲ್ಲಿ ಶ್ರೀ ಎಲ್.ಎನ್.ಶಿವಣ್ಣ ರವರ ಹೆಸರಿದ್ದು, ಇವರ ಹೆಸರಿನಲ್ಲಿ ಖಾತೆ ಇರುತ್ತದೆ. ಇವರ ಮರಣಾ ನಂತರ ವಾರಸುದಾರಿಕೆಯಿಂದಾಗಿ ಸದರಿ ಜಮೀನು ಇವರ ಮಗ ಶ್ರೀ ಬಿ.ಎಲ್.ಹನುಮಂತರಾಜು ರವರ ಹೆಸರಿಗೆ ಬಂದಿದ್ದು, ಗಣಕೀಕೃತ ಆರ್.ಟಿ.ಸಿ. ಮತ್ತು ಖಾತೆ ದಾಖಲೆಗಳಲ್ಲಿ ಇವರ ಹೆಸರು ನಮೂದಾಗಿರುತ್ತದೆ. ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರ ದಿನಾಂಕ : 19–06–2009ರ ಪತ್ರದಂತೆ ಶ್ರೀ ಹನುಮಂತರಾಜು ರವರೇ ಜಮೀನಿನ ಅನುಭವದಲ್ಲಿ ಇದ್ದು, ಕಂದಾಯ ಪಾವತಿ ರಸೀದಿ, ಸ್ವತ್ತಿನ ಮೇಲಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರದಲ್ಲಿ, ವಂಶ ವೃಕ್ಷ ಇತ್ಯಾದಿ ಇತರೇ ದಾಖಲಾತಿಗಳಲ್ಲಿ ಶ್ರೀ ಹನುಮಂತರಾಜು ರವರ ಹೆಸರು ಇದ್ದು, ಸದರಿ ಜಮೀನಿಗೆ ಯಾವುದೇ ತಕರಾರು ಅರ್ಜಿಯು ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿಲ್ಲದ ಕಾರಣ, ವಿಶೇಷ ಭೂ ಸ್ವಾಧೀನಾಧಿಕಾರಿ–2, ಕೆಐಎಡಿಬಿ ಇವರ ದಿನಾಂಕ : 04–05–2010ರ ನಡವಳಿ ಸಂಖ್ಯೆ : LAQ/CR/10-11 ರ ರೀತ್ಯಾ, ಒಟ್ಟು ರೂ. 3.72 ಕೋಟಿಗಳ ಪರಿಹಾರ ಮಂಜೂರಾಗಿರುತ್ತದೆ ಹಾಗೂ ಇದನ್ನು ಶ್ರೀ ಹನುಮಂತರಾಜು ರವರು ದಿನಾಂಕ : 29–05–2010ರ Corporation Bank ಚೆಕ್ಕು ಸಂಖ್ಯೆ : 583879 ಮೂಲಕ ಪಡೆದಿರುತ್ತಾರೆ.

5. ಸದರಿ ಭೂ ಸ್ವಾಧೀನವಾದ ಅರೆಬಿನ್ನಮಂಗಲ ಗ್ರಾಮದ ಸರ್ವೆ ನಂ. 1/4ರ ವಿಸ್ತೀರ್ಣ 06–00 ಎಕರೆ ಜಮೀನಿಗೆ ಪರಿಹಾರ ಪಾವತಿಸುವಂತೆ ಕೋರಿ ಶ್ರೀ ಹನುಮಂತರಾಜು ರವರು ಮೊದಲು ದಿನಾಂಕ : 04–06–2009 ರಂದು ಮತ್ತು ನಂತರ 18–05–2010 ರಂದು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧೀನಗರ, ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಿ, ಅರ್ಜಿಯೊಂದಿಗೆ (1) ಕೃಷಿ ಪಾಸ್ ಪುಸ್ತಕ (2) ಭಾರತ ಚುನಾವಣಾ ಆಯೋಗದ ಗುರುತಿನ ಚೀಟಿ (3) ಪಡಿತರ ಚೀಟಿ (4) ವಂಶವೃಕ್ಷ (5) ಎಲ್.ಎನ್.ಶಿವಣ್ಣ ರವರ ಮರಣ ಪ್ರಮಾಣ ಪತ್ರ (6) ಭೂ ಮಂಜೂರಾತಿ ಆದೇಶದ ಪ್ರತಿ (7) ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣ ಪತ್ರ (8) ಮ್ಯುಟೇಶನ್ ರಿಜಿಸ್ಟರ್ ಪ್ರತಿ (9) ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ ಇವರ ದಿನಾಂಕ : 04–05–2009ರ ಹಿಂಬರಹ (10) ತಹಶೀಲ್ದಾರ್,

ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರ ದಿನಾಂಕ : 08–05–2009ರ ಹಿಂಬರಹ (11) ಕೈಬರಹದ ಆರ್‌ಟಿಸಿ (12) ಗಣಕೀಕೃತ ಆರ್‌ಟಿಸಿ (13) ಬೆಂಗಳೂರು ಉತ್ತರ ತಾಲ್ಲೂಕು ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ರಸೀದಿ ದಿನಾಂಕ : 30–04–2009 (14) ಬೆಂಗಳೂರು ಉತ್ತರ ತಾಲ್ಲೂಕು ಸಿಂಗಹಳ್ಳಿ ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಬ್ಯಾಂಕ್ ನಿಯಮಿತದ ಸಾಲ ತೀರುವಳಿ ಪತ್ರ ದಿನಾಂಕ : 02–05–2009 (15) ವ್ಯವಸ್ಥಾಪಕರು, ಪಿ.ಎಲ್.ಡಿ. ಬ್ಯಾಂಕ್, ಗುಟ್ಟಹಳ್ಳಿ, ಬೆಂಗಳೂರು ಇವರು ಸಾಲ ಇರುವುದಿಲ್ಲ ಎಂಬ ಬಗ್ಗೆ ನೀಡಿದ ಪತ್ರ ದಿನಾಂಕ: 30–04–2009 (16) ಬೆಂಗಳೂರು ಉತ್ತರ ತಾಲ್ಲೂಕು, ಬಾಗಲೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ನಿಯಮಿತ ಇವರು ನೀಡಿರುವ ಸಾಲ ತೀರುವಳಿ ಪತ್ರ ದಿನಾಂಕ : 02–05–2009 (17) ಗ್ರಾಮ ಲೆಕ್ಕಾಧಿಕಾರಿ ನೀಡಿರುವ ಭೂ ಹಿಡುವಳಿ ದೃಢೀಕರಣ ಪತ್ರ ಹಾಗೂ ಸರ್ಕಾರಿ ಬಾಕಿ ಪಾವತಿಯ ರಸೀದಿ (18) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಜಾರಿಗೊಳಿಸಲಾದ ನೋಟೀಸು ದಿನಾಂಕ : 14–08–2006 (19) ಅರೆಬಿನ್ನಮಂಗಲ ಸರ್ವೆ ನಂ. 1 ರ ಮಂಜೂರಿದಾರರ ಹೆಸರುಗಳನ್ನು ತಿಳಿಸುವ ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ಇವರ ಪಟ್ಟಿ ಇವುಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿರುತ್ತಾರೆ.

6. ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಬೆಂಗಳೂರು ಇವರ ದಿನಾಂಕ : 19–11–2010ರ ವರದಿಯಂತೆ, ಅರೆಭಿನ್ನಮಂಗಲ ಗ್ರಾಮದ ಸರ್ವೆ ನಂ. 1/4 ಶ್ರೀ ಬಿ.ಎಲ್. ಹನುಮಂತರಾಜು ರವರಿಗೆ ಸಂಬಂಧಿಸಿದ್ದು ಮ್ಯುಟೇಶನ್ ರಿಜಿಸ್ಟರ್ ನಂ. 11/08–09, ದಿನಾಂಕ : 10–02–2009ರ ಪ್ರತಿ ಲಗತ್ತಿಸಿರುತ್ತಾರೆ. ಸದರಿ ಜಮೀನು ಈ ಮೊದಲು ದೇವನಹಳ್ಳಿ ತಾಲ್ಲೂಕು ಕಛೇರಿಯ ವ್ಯಾಪ್ತಿಗೆ ಒಳಪಟ್ಟಿದ್ದು, ನಂತರ ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಆದರೆ ಭೂ ಮಂಜೂರಾತಿ ಆದೇಶದ ಸಂಖ್ಯೆ : ಎಸ್‌ಆರ್ 1/551/60–61, ದಿನಾಂಕ : 14–11–60/61ರ ಮೂಲ ಕಡತ, ಸಾಗುವಳಿ ಚೀಟಿ ವಿತರಣಾ ವಹಿಗಳು ದೇವನಹಳ್ಳಿ ತಾಲ್ಲೂಕು ಕಛೇರಿಯಿಂದ ವರ್ಗಾಯಿಸಿರುವುದಿಲ್ಲ. ಈ ಸರ್ವೆ ನಂ. 1/4 ರಲ್ಲಿ ಶ್ರೀ ಬಿ.ಎಲ್.ಹನುಮಂತರಾಜು ರವರು ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ಈ ಹಿಂದೆ ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಧನಲಕ್ಷ್ಮಿ ರವರು ದೃಢೀಕರಣ (ಸಂಖ್ಯೆ : LND (NA) Cr/249/08-09, ದಿನಾಂಕ : 19–06–2009) ನೀಡಿರುತ್ತಾರೆ. ಆದರೆ ಇದನ್ನು ತಹಶೀಲ್ದಾರರ ಹೇಳಿಕೆಯ ಮೇಲೆ ಸಿದ್ದಪಡಿಸಲಾಗಿತ್ತೆಂದು, ಸಂಬಂಧಿಸಿದ ಕಡತವು ವಾಪಸ್ಸು ಬಂದಿರುವುದಿಲ್ಲವೆಂದು ಅಂದಿನ ವಿಷಯ ನಿರ್ವಾಹಕರು ತಿಳಿಸಿರುತ್ತಾರೆ.

7. ಉಪ ವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪವಿಭಾಗ, ಬೆಂಗಳೂರು ಇವರು ತನಿಖಾಧಿಕಾರಿಗಳಿಗೆ ಬರೆದ ದಿನಾಂಕ : 10–12–2010ರ ಪತ್ರದೊಂದಿಗೆ ಲಗತ್ತಿಸಿರುವ 1961–62 ನೇ ಸಾಲಿನಲ್ಲಿ ಅರೆಬಿನ್ನಮಂಗಲ ಗ್ರಾಮದ ಸರ್ವೆ ನಂ. 1 ರಲ್ಲಿ ಮಂಜೂರಾಗಿರುವ 16 ಜನ ಮಂಜೂರಿದಾರರ ಹೆಸರುಗಳುಳ್ಳ Register of Darkhast ನ ಪ್ರತಿಯಲ್ಲಿ ಕ್ರಮ ಸಂಖ್ಯೆ 3 ರಲ್ಲಿ ಶ್ರೀ ಎಲ್.ಎನ್. ಶಿವಣ್ಣ ಬಿನ್ ಸಿದ್ದಪ್ಪ ಎಂಬುವವರ ಹೆಸರು ಇರುವುದಿಲ್ಲ, ಆದರೆ, ಶ್ರೀ ಹನುಮಂತರಾಜು ರವರು ಪರಿಹಾರ ಕೋರಿ ಸಲ್ಲಿಸಿದ ಮನವಿಯೊಂದಿಗೆ ಲಗತ್ತಿಸಿದ್ದ ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ಇವರು ನೀಡಿರುವರು ಎನ್ನಲಾದ ಮಂಜೂರಿದಾರರ ಹೆಸರಿನ ಪಟ್ಟಿಯ ಜೆರಾಕ್ಸ್ ಪ್ರತಿಯ ಕ್ರಮ ಸಂಖ್ಯೆ 3 ರಲ್ಲಿ ಶ್ರೀ ಎಲ್.ಎನ್. ಶಿವಣ್ಣ ರವರು ಹೆಸರು ಇರುತ್ತದೆ. ಈ ಜೆರಾಕ್ಸ್ ಪ್ರತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಇದನ್ನು ದಿನಾಂಕ : 05–05–1995 ರಂದು ನೀಡಿರುವುದು ಕಂಡುಬರುತ್ತದೆ. ಅದೇ Register of Darkhastನ ಜೆರಾಕ್ಸ್ ಪ್ರತಿಯನ್ನು ಗಮನಿಸಿದಾಗ ದಿನಾಂಕ : 14–11–1962 ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

8. ಶ್ರೀ ಹನುಮಂತರಾಜು ರವರು ಪರಹಾರ ಕೋರಿ ಸಲ್ಲಿಸಿದ ಮನವಿಯೊಂದಿಗೆ ಇವರ ತಂದೆ ಎನ್ನಲಾದ ಶ್ರೀ ಎಲ್.ಎನ್.ಶಿವಣ್ಣ ರವರ ಮರಣ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಲತ್ತಿಸಿರುತ್ತಾರೆ. ಆದರೆ, ಶ್ರೀ ಹನುಮಂತರಾಜು ರವರು ಈ ಮೊದಲು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಇವರ ಸೇವಾ ಪುಸ್ತಕದಲ್ಲಿ ತಮ್ಮ ತಂದೆಯವರ ಹೆಸರನ್ನು Sri Lakkappa ಎಂದು ನೀಡಿದ್ದು, ದಿನಾಂಕ : 23–02–2001 ರಂದು ಸಲ್ಲಿಸಿದ ನಿವೃತ್ತಿ ವೇತನ ಅರ್ಜಿಯಲ್ಲಿ Lakkappa (Late) ಎಂದು ನೀಡಿರುತ್ತಾರೆ. ಶ್ರೀ ಎಲ್.ಎನ್. ಶಿವಣ್ಣ ರವರ ಮರಣ ಘಟನೆಯು ನೋಂದಣಿಯಾಗಿರುವುದಿಲ್ಲವೆಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತನ್ನ ದಿನಾಂಕ : 28–12–2010ರ ಪತ್ರದಲ್ಲಿ ತಿಳಿಸಿರುತ್ತದೆ. ಅಂದರೆ, ಶ್ರೀ ಎಲ್.ಎನ್. ಶಿವಣ್ಣ ರವರ ಮರಣ ಪ್ರಮಾಣ ಪತ್ರವು ಸೃಷ್ಟಿತ ದಾಖಲೆಯಾಗಿರುತ್ತದೆ.

9. ಶ್ರೀ ಹನುಮಂತರಾಜು ರವರು ದಿನಾಂಕ : 30–10–2008 ರಂದು ಉಪ ವಿಭಾಗಾಧಿಕಾರಿಗಳು ಬೆಂಗಳೂರು ಉತ್ತರ ಉಪ ವಿಭಾಗ ಇವರಿಗೆ ಸಲ್ಲಿಸಿದ ಖಾತೆ ಬದಲಾವಣೆ ಮನವಿಯಂತೆ, ಶ್ರೀ ಎಲ್.ಎನ್. ಶಿವಣ್ಣ ರವರು ದಿನಾಂಕ : 19–09–1970 ರಂದು ಮರಣ ಹೊಂದಿದ ಕಾರಣ, ಅರೆಬಿನ್ನಮಂಗಲ ಗ್ರಾಮದ ಸರ್ವೆ ನಂ. 1ರ ಪೈಕಿ 06–00 ಎಕರೆ ಜಮೀನನ್ನು ಇವರ ಮಗ ಶ್ರೀ ಹನುಮಂತರಾಜು ರವರ ಹೆಸರಿಗೆ ಖಾತೆ ವರ್ಗಾಯಿಸುವ ಮೊದಲು ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ 65ನೇ ನಿಯಮದಂತೆ ದಿನಾಂಕ : 20–12–2008 ರಂದು ನಮೂನೆ 21ನ್ನು ಪ್ರಚುರಪಡಿಸಿದ ನಂತರ, ಯಾವುದೇ ತಕರಾರು ಬಂದಿಲ್ಲದ ಕಾರಣ, ಸಂಬಂಧಿಸಿದ ಗ್ರಾಮಲೆಕ್ಕಿಗರ ವರದಿಯನ್ನು ಆಧರಿಸಿ ಖಾತೆ ವರ್ಗಾಯಿಸಲಾಗಿರುವುದು ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರು ದಿನಾಂಕ : 22–02–2011 ರಂದು ತನಿಖಾಧಿಕಾರಿಗಳಿಗೆ ಬರೆದ ಪತ್ರದೊಂದಿಗೆ ಕಂಡುಬರುತ್ತದೆ. ಅಂದರೆ 2008–09ನೇ ಸಾಲಿನಲ್ಲಿ ಶ್ರೀ ಹನುಮಂತರಾಜು ರವರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ದಿನಾಂಕ 25–09–2008 ರಂದು ಈ ಜಮೀನನ್ನು ಭೂ ಸ್ವಾಧೀನಪಡಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

10. ಪರಿಹಾರ ಹಣ ಪಾವತಿಸುವ ಬಗ್ಗೆ ವ್ಯವಹರಿಸಲಾದ ಕಡತದಲ್ಲಿ ಲಭ್ಯವಿರುವ ಅರೆಭಿನ್ನಮಂಗಲ ಸರ್ವೆ ನಂ. 1ರ ನಕ್ಷೆಯ ಬ್ಲಾಕ್ 34ರಲ್ಲಿ ಶ್ರೀ ಎಲ್.ಎನ್. ಶಿವಣ್ಣ ರವರಿಗೆ 06–00 ಎಕರೆ ಜಮೀನು ಇರುವುದಾಗಿ ಭೂ ಮಾಪಕರು ವರದಿ ಸಲ್ಲಿಸಿರುತ್ತಾರೆ. ಆದರೆ, ವಿಶೇಷ ಜಿಲ್ಲಾಧಿಕಾರಿಗಳು (ಜಾರಿದಳ) ಇವರ ಪತ್ರ ದಿನಾಂಕ : 29–11–2010 ರಂತೆ ಬ್ಲಾಕ್ 34 ರಲ್ಲಿ ಶ್ರೀಮತಿ ನಾರಾಯಣಮ್ಮ ಮತ್ತು ಶ್ರೀಮತಿ ಮುನಿಯಮ್ಮ ಎಂಬುವವರು ಇದನ್ನು ಒತ್ತುವರಿ ಮಾಡಿಕೊಂಡಿರುವುದಾಗಿ ತಿಳಿಸಲಾಗಿದೆ. ಅಂದರೆ, ಶ್ರೀ ಎಲ್.ಎನ್. ಶಿವಣ್ಣ ರವರಿಗೆ ಈ ಜಮೀನು ಸೇರಿಲ್ಲದಿದ್ದರೂ, ಭೂ ಮಾಪಕರು ಇವರು ಜಮೀನಿನಲ್ಲಿ ಇರುವುದಾಗಿ ಕಲ್ಪಿತ ವರದಿ ನೀಡಿರುವುದು ಕಂಡುಬರುತ್ತದೆ.

11. ತನಿಖಾ ವರದಿ, ದಾಖಲೆ ಪ್ರತಿಗಳು ಮತ್ತು ಆರೋಪಿತರು ಹಾಗೂ ಇತರೆಯವರ ಹೇಳಿಕೆಗಳನ್ನು ಗಮನಿಸಿದಾಗ, ಅರೆಭಿನ್ನಮಂಗಲ ಗ್ರಾಮದ ಸರ್ವೆ ನಂ. 1/4 ರ 06–00 ಎಕರೆ ಜಮೀನು ಈ ಮೊದಲು ಶ್ರೀ ಎಲ್.ಎನ್. ಶಿವಣ್ಣ ಬಿನ್ ಸಿದ್ದಪ್ಪ ಎಂಬುವವರಿಗೆ ಮಂಜೂರಾಗಿರುವುದಿಲ್ಲ. ಇವರು ಕಲ್ಪಿತ ವ್ಯಕ್ತಿಯಾಗಿದ್ದು, ಇವರ ಮರಣವೂ ಸಹ ದೃಢಪಟ್ಟಿರುವುದಿಲ್ಲ. ಹೀಗಿರುವಲ್ಲಿ, ಸದರಿ ಜಮೀನು ಭೂ ಸ್ವಾಧೀನವಾದ ನಂತರ ಇದಕ್ಕೆ ಯಾವುದೇ ಹಕ್ಕುದಾರರು ಇಲ್ಲವೆಂದು ಮನಗಂಡು, ಶ್ರೀ ಬಿ.ಎಲ್. ಹುಮಂತರಾಜು, ಇವರ ಮಗ ಶ್ರೀ ಬಿ. ಹೆಚ್. ಶಶಿಕುಮಾರ್, ಶ್ರೀ ಸಂತೋಷ್ @ ಸಂಪತ್

ಹಾಗೂ ಇತರರು ಕಂದಾಯ ಇಲಾಖೆ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಅಧಿಕಾರಿ/ಸಿಬ್ಬಂದಿ ವರ್ಗದವರೊಂದಿಗೆ ಒಳಸಂಚು ನಡೆಸಿ, ಪರಿಹಾರ ಪಡೆದಿರುವುದು ಮತ್ತು ಇದರ ಲಾಭವನ್ನು ಹಂಚಿಕೊಂಡಿರುವುದು ಕಂಡುಬರುತ್ತದೆ. ಈ ಕೃತ್ಯವು ಶ್ರೀ ಬಿ.ಹೆಚ್. ಶಶಿಕುಮಾರ್ ರವರ ಹೇಳಿಕೆಯಿಂದ ದೃಢಪಡುತ್ತದೆ.

12. ಮೇಲ್ಕಂಡ ತನಿಖಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಸಾಕ್ಷ್ಯಾಧಾರಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದೆ. ಆರೋಪಿಯಾದ ಶ್ರೀ ಎನ್.ಆರ್.ನಾಗರಾಜು ರವರು ಅರೆಬಿನ್ನಮಂಗಲ ಸರ್ವೆ ನಂ. 1/4 ರ 06–00 ಎಕರೆ ಜಮೀನು ಶ್ರೀ ಎಲ್.ಎನ್. ಶಿವಣ್ಣ ಬಿನ್ ಸಿದ್ದಪ್ಪ ಎಂಬುವವರಿಗೆ ಮಂಜೂರಾಗಿಲ್ಲದಿದ್ದರೂ, ಮಂಜೂರಾಗಿದೆ ಎಂಬ ಸೃಷ್ಟಿತ ಸುಳ್ಳು ದಾಖಲೆಗಳ ಜೆರಾಕ್ಸ್ ಪ್ರತಿಗಳ ಆಧಾರದ ಮೇಲೆ ಇತರೇ ಆರೋಪಿಗಳಾದ ಶ್ರೀ ಬಿ.ಹೆಚ್. ಶಶಿಕುಮಾರ್, ಶ್ರೀ ಸಂತೋಷ್ @ ಸಂಪತ್ ಹಾಗೂ ಇತರೆಯವರೊಂದಿಗೆ ಒಳಸಂಚು ನಡೆಸಿ ಪಲಾನುಭವಿ ಆರೋಪಿ ಶ್ರೀ ಬಿ.ಎಲ್. ಹನುಮಂತರಾಜು ರವರಿಗೆ ರೂ. 3.72 ಕೋಟಿಗಳ ಪರಿಹಾರ ಹಣವನ್ನು ಅಕ್ರಮವಾಗಿ ಪಾವತಿಸಿ, ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಗೆ/ಸರ್ಕಾರಕ್ಕೆ ಆರ್ಥಿಕ ನಷ್ಟವುಂಟು ಮಾಡುವ ಮೂಲಕ ಕರ್ತವ್ಯದಲ್ಲಿ ದುರ್ನಡತೆ ಎಸಗಿರುವ ಅಂಶವು ತನಿಖಾ ವರದಿ, ಸಾಕ್ಷ್ಯಾಧಾರಗಳು, ಹೇಳಿಕೆಗಳು ಹಾಗೂ ಕಂಡಿಕೆ 2 ರಲ್ಲಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿದ ನಂತರ ಮೇಲ್ನೋಟಕ್ಕೆ ಕಂಡುಬರುವ ಕಾರಣ, ಶ್ರೀ ಎನ್.ಆರ್.ನಾಗರಾಜುರವರನ್ನು ಲಂಚ ನಿರೋಧಕ ಕಾಯ್ದೆಯಡಿ ಅಭಿಯೋಜನೆಗೆ ಒಳಪಡಿಸಲು ಸಮರ್ಥನೀಯ ಕಾರಣಗಳು ಇರುವುದನ್ನು ಮನಗಂಡು ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಮೇಲ್ಕಂಡ ಆರೋಪಿತರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಹಾಗೂ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 019 ಕೆಇವಿ 11, ಬೆಂಗಳೂರು, ದಿನಾಂಕ : 13–06–2011

ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಶ್ರೀ ಎನ್.ಆರ್. ನಾಗರಾಜು ರವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಹಾಗೂ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿದ್ದು, ಆರೋಪಿಯಾದ ಶ್ರೀ ಎನ್.ಆರ್. ನಾಗರಾಜು, ಕೆಎಎಸ್ (ಕಿರಿಯ ಶ್ರೇಣಿ) ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಹಾಲಿ ಅಮಾನತ್ತಿನಲ್ಲಿರುವ ಇವರನ್ನು ಲಂಚ ನಿರೋದಕ ಕಾಯ್ದೆ 1988ರ ಕಲಂ 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಪ್ರಕಾರ ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 420, 471 ಮತ್ತು 120(ಬಿ) ರಡಿಯಲ್ಲಿ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೊಳಪಡಿಸಲು ಲಂಚ ನಿರೋಧ ಕಾಯ್ದೆ, 1988ರ ಕಲಂ 19(1)(ಬಿ) ರನ್ವಯ ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ, 1977ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿ ಅಡಿಯಲ್ಲಿ ದಿನಾಂಕ : 13–06–2011 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಪಿ. ಮೋಹನ್ ರಾಜ್

ಸರ್ಕಾರದ ಉಪ ಕಾರ್ಯದರ್ಶಿ

ಪಿ.ಆರ್. 1522 ಸಿಆಸು ಇಲಾಖೆ (ಸೇವೆಗಳು)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಆರ್.ಸಿ. ಹೊನ್ನಭಂಡಾರ್, ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಪ್ರಸ್ತುತ ಮಾನ್ಯ ಅರಣ್ಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ, ಇವರ ಗುತ್ತಿಗೆ ಆಧಾರದ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳ ಬಗ್ಗೆ.

ಓದಲಾಗಿದೆ : ಅಧಿಸೂಚನೆ ಸಂಖ್ಯೆ : ಸಿಆಸುಇ 569 ಸಅಸೇ 2010, ದಿನಾಂಕ : 24–08–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಅಧಿಸೂಚನೆಯಲ್ಲಿ ಶ್ರೀ ಆರ್.ಸಿ. ಹೊನ್ನಭಂಡಾರ್, ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಇವರನ್ನು ಮಾನ್ಯ ಅರಣ್ಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ದಿನಾಂಕ : 28–02–2011 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅಥವಾ ಮಾನ್ಯ ಸಚಿವರ ಪದಾವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಶ್ರೀ ಆರ.ಸಿ. ಹೊನ್ನಭಂಡಾರ್, ಮಾನ್ಯ ಅರಣ್ಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಯ ಗುತ್ತಿಗೆ ನೇಮಕಾತಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳ ಬಗ್ಗೆ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 569 ಸಅಸೇ 2010, ಬೆಂಗಳೂರು ದಿನಾಂಕ : 14ನೇ ಜೂನ್ 2011.

ಶ್ರೀ ಆರ್. ಸಿ. ಹೊನ್ನಭಂಡಾರ್, ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು, ಇವರು ಮಾನ್ಯ ಅರಣ್ಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಯ ಕರ್ತವ್ಯ ವಹಿಸಿಕೊಂಡ ದಿನಾಂಕ : 10–03–2011 ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತುಗಳು ಮತ್ತು ನಿಬಂಧನೆಗೊಳಪಟ್ಟು ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ಆದೇಶಿಸಲಾಗಿದೆ:

1. <u>ಅವಧಿ :</u>

ಶ್ರೀ ಆರ್. ಸಿ. ಹೊನ್ನಭಂಡಾರ್, ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು, ಇವರ ಒಪ್ಪಂದದ ನೇಮಕಾತಿಯ ಅವಧಿಯು ದಿನಾಂಕ : 10–03–2011 ರಿಂದ ಮಾನ್ಯ ಸಚಿವರ ಪದಾವಧಿಯವರೆಗೆ ಅಥವಾ ಒಂದು ವರ್ಷದ ಅವಧಿಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇರುತ್ತದೆ.

2. <u>ಗುತ್ತಿಗೆ ನೇಮಕಾತಿಯ ಪ್ರಾರಂಭ ಮತ್ತು ಅಂತ್ಯ :</u>

ಸದರಿ ಅಧಿಕಾರಿಯ ಒಪ್ಪಂದದ ನೇಮಕಾತಿಯು ದಿನಾಂಕ : 10–03–2011 ರಿಂದ ಪ್ರಾರಂಭಗೊಂಡು ಹುದ್ದೆಯ ಪ್ರಭಾರವನ್ನು ಹಿಂದಕ್ಕೆ ವಹಿಸಿಕೊಟ್ಟ ದಿನಾಂಕದಂದು ಮುಕ್ತಾಯಗೊಳ್ಳುತ್ತದೆ.

3. **ವೇತನ ಮತ್ತು ಇತರೆ ಭತ್ಯೆಗಳು :**

ಶ್ರೀ ಆರ್. ಸಿ. ಹೊನ್ನಭಂಡಾರ್, ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು, ಇವರು ಒಪ್ಪಂದದ ನೇಮಕಾತಿಯ ಅವಧಿಯಲ್ಲಿ ಅವರ ಮಾತೃ ಸಂಸ್ಥೆಯಲ್ಲಿ, ಪಡೆಯುತ್ತಿದ್ದ ವೇತನ, ತುಟ್ಟಿ ಭತ್ಯೆ, ಕಾರ್ಯ ನಿರ್ವಹಿಸುವ ಸ್ಥಳಕ್ಕೆ ಅನ್ವಯವಾಗುವ ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ಹಾಗೂ ಸಚಿವರ ಆಪ್ತ ಶಾಖೆಯಲ್ಲಿ ಸದರಿ ಹುದ್ದೆಗೆ ನಿಗದಿಪಡಿಸಿರುವ ವಿಶೇಷ ವೇತನವನ್ನು ಪಡೆಯಲು ಅರ್ಹರಿರುತ್ತಾರೆ. ಆದರೆ ನೌಕರರು ನಿಯೋಜನೆಯ ಭತ್ಯೆ, ಅನ್ಯ ಸೇವಾ ಭತ್ಯೆ ಅಥವಾ ಇನ್ನಾವುದೇ ಊಟದ ಭತ್ಯೆ, ಹೆಚ್ಚಿನ ಕಾಲದ ಭತ್ಯೆ, ಬೋನಸ್, ಅನುಗ್ರಹಪೂರ್ವ ಭತ್ಯೆ ಪಡೆಯಲು ಅರ್ಹರಲ್ಲ.

4. **ರಜೆ ನಿಯಮಗಳು :**

ಇವರ ಮಾತೃ ಇಲಾಖೆಯಲ್ಲಿನ ರಜಾ ನಿಯಮಗಳಿಗೆ ಅರ್ಹರಿರುತ್ತಾರೆ.

5. **ರಜಾ ವೇತನ ವಂತಿಗೆ :**

ಅಧಿಕಾರಿಯ ಮೂಲ ವೇತನದ ಶೇಕಡ 11 ರಷ್ಟನ್ನು ರಜಾ ವೇತನ ವಂತಿಗೆಯಾಗಿ ಸರ್ಕಾರವು ಪಾವತಿಸುತ್ತದೆ.

6. **ಭವಿಷ್ಯ ನಿಧಿ ವಂತಿಗೆ :**

ಅಧಿಕಾರಿಯ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಶೇಕಡ 12ರಷ್ಟನ್ನು ಸರ್ಕಾರದ ವತಿಯಿಂದ ವಂತಿಗೆ ಮತ್ತು ಅಧಿಕಾರಿಯ ಮೂಲವೇತನ ಮತ್ತು ತುಟ್ಟಿಭತ್ಯೆಯ ಶೇಕಡ 12ರಷ್ಟನ್ನು ವಂತಿಗೆಯಾಗಿ ಪ್ರತಿ ತಿಂಗಳಿನ ಸಂಬಳದಲ್ಲಿ ಕಟಾಯಿಸಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಪಾವತಿಸತಕ್ಕದ್ದು.

7. **ಉಪದಾನ ವಂತಿಗೆಗಳು :**

ಸರ್ಕಾರವು ವರ್ಷಕ್ಕೆ ಅರ್ಧ ತಿಂಗಳ ವೇತನ ಮತ್ತು ಅದಕ್ಕೆ ಸಮನಾದ ತುಟ್ಟಿಭತ್ಯೆಯೊಂದಿಗೆ ಉಪದಾನ ವಂತಿಗೆಯಾಗಿ ನೀಡುತ್ತದೆ.

8. **ವೈದ್ಯಕೀಯ ರಿಯಾಯಿತಿ :**

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ಅನ್ವಯ ವೈದ್ಯಕೀಯ ವೆಚ್ಚವನ್ನು ಪಡೆಯಲು ಅರ್ಹರಿರುತ್ತಾರೆ.

9. 'ಮಾನ್ಯ ಅರಣ್ಯ ಸಚಿವರ ಆಪ್ತ ಶಾಖೆಯಲ್ಲಿ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಗೆ ನಿಗದಿಪಡಿಸಿರುವ ಕೆಲಸಗಳನ್ನು ಹಾಗೂ ಮಾನ್ಯ ಸಚಿವರು ಕಾಲಕಾಲಕ್ಕೆ ವಹಿಸಿಕೊಡುವ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

10. ಅಧಿಕಾರಿಯವರು ವಿಶೇಷ ಕರ್ತವ್ಯಾಧಿಕಾರಿ ಹುದ್ದೆಯ ಕೆಲಸ ಕಾರ್ಯಗಳನ್ನು ಶ್ರದ್ಧಾ ಭಕ್ತಿಯಿಂದ ನಿರ್ವಹಿಸತಕ್ಕದ್ದು ಹಾಗೂ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ತಿಳಿದು ಬರುವಂತಹ ಕಛೇರಿಯ ಅಧಿಕೃತ ಗೌಪ್ಯ ಮಾಹಿತಿಗಳ ಬಗ್ಗೆ ಕಟ್ಟುನಿಟ್ಟಾಗಿ ಗೌಪ್ಯತೆಯನ್ನು ಕಾಪಾಡತಕ್ಕದ್ದು.

11. ಅಧಿಕಾರಿಯವರ ದುರ್ನಡತೆಯಿಂದ ಸರ್ಕಾರಕ್ಕೆ ಉಂಟಾಗುವ ಯಾವುದೇ ನಷ್ಟಗಳನ್ನು ಭರಿಸಿಕೊಡಲು ಅಧಿಕಾರಿಯು ಭಾದ್ಯತೆಯುಳ್ಳವರಾಗಿರುತ್ತಾರೆ.

12. ಅಧಿಕಾರಿಯವರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಟ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸು ಇಲಾಖೆ (ಸೇವೆಗಳು–3)

ಪಿ.ಆರ್. 1523

ಕಂದಾಯ ಸಚಿವಾಲಯ

ವಿಷಯ : ಶ್ರೀ ಹೆಚ್.ಡಿ. ಲೋಕೇಶ್, ಹಿಂದಿನ ತಹಶೀಲ್ದಾರರು, ಇವರ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 110 ಎಎಸ್‌ಡಿ 2006, ದಿನಾಂಕ : 22–06–2006.
2. ಶ್ರೀ ಹೆಚ್.ಡಿ. ಲೋಕೇಶ್, ಹಿಂದಿನ ತಹಶೀಲ್ದಾರರು, ಇವರ ಪತ್ರ ದಿನಾಂಕ : 13–12–2006.
3. ಅಧಿಕೃತ ಜ್ಞಾಪನ ಸಂ. ಆರ್‌ಡಿ 77 ಎಎಸ್‌ಡಿ 2007, ದಿನಾಂಕ : 07–03–2007.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 22–06–2006ರ ಅಧಿಸೂಚನೆಯಲ್ಲಿ ಶ್ರೀ ಹೆಚ್.ಡಿ.ಲೋಕೇಶ್ ಇವರು ಕಂದಾಯ ಇಲಾಖೆಯ ತಹಶೀಲ್ದಾರ್, ಗುಂಪು–ಬಿ ಹುದ್ದೆಗೆ ನೇಮಕಗೊಂಡಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ : 13–12–2006ರ ಪತ್ರದಲ್ಲಿ ಶ್ರೀಯುತರು, ಕಂದಾಯ ಇಲಾಖೆಯಲ್ಲಿ ಸೇವೆ ಪ್ರಾರಂಭಿಸುವ ಪೂರ್ವದಲ್ಲಿ ಗೃಹ ಇಲಾಖೆಯಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿ ಸಲ್ಲಿಸಿರುವ ಸೇವೆಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವಂತೆ ಕೋರಿರುತ್ತಾರೆ.

ಶ್ರೀಯುತರ ಮನವಿಯನ್ನು ಹಾಗೂ ಸೇವಾ ಪುಸ್ತಕಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಶ್ರೀ ಹೆಚ್.ಡಿ.ಲೋಕೇಶ್, ಇವರು ಡೈರೆಕ್ಟರ್ ಜನರಲ್ ಆಂಡ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಇವರ ಆದೇಶ ಸಂಖ್ಯೆ : 7/ಇಎಸ್‌ಟಿ–1/99–98, ದಿನಾಂಕ : 30–12–1998 ರನ್ವಯ ದಿನಾಂಕ : 04–01–1999 ಅನ್ನು ಪೊಲೀಸ್ ಇನ್ಸ್‌ಪೆಕ್ಟರ್ ಅಗಿ ನೇಮಕಗೊಂಡಿದ್ದು, ನಂತರ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರಾಜ್ಯ ಗುಪ್ತ ವಾರ್ತೆ, ಬೆಂಗಳೂರು ಇವರ ಅಧಿಕೃತ ಜ್ಞಾಪನ ಸಂಖ್ಯೆ : ಎಸ್‌ಪಿಎ/ಸಿಬ್ಬಂದಿ–1/ಜನರಲ್–12/2006–07, ದಿನಾಂಕ : 07–06–2006 ರನ್ವಯ ದಿನಾಂಕ : 27–06–2006 ರಂದು ಸದರಿ ಸೇವೆಯಿಂದ ಬಿಡುಗಡೆ ಹೊಂದಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : 3ರ ದಿನಾಂಕ : 07–03–2007ರ ಅಧಿಕೃತ ಜ್ಞಾಪನದ ಮೇಲೆ ಶ್ರೀಯುತರು ಇಂಡಿಯನ್ ಟ್ರೇಡ್ ಸರ್ವೀಸ್‌ನ ಗ್ರೇಡ್–III, ಪ್ರೊಬೇಷನರ್ ಆಗಿ ಆಯ್ಕೆ ಹೊಂದಿದ್ದರಿಂದ ಕಂದಾಯ ಇಲಾಖೆಯ ತಹಶೀಲ್ದಾರ್ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ.

ಮೇಲಿನ ಅಂಶಗಳನ್ನು ಪರಿಗಣಿಸಿ ಶ್ರೀ ಹೆಚ್.ಡಿ. ಲೋಕೇಶ್, ಹಿಂದಿನ ತಹಶೀಲ್ದಾರರು, ಇವರು ಗೃಹ ಇಲಾಖೆಯಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿ 04–01–1999 ರಿಂದ ದಿನಾಂಕ : 27–06–2006 ರವರೆಗಿನ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 224 (ಎ) ರೀತ್ಯ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 12 ಎಎಸ್‌ಡಿ 2007, ಬೆಂಗಳೂರು ದಿನಾಂಕ : 03ನೇ ಜೂನ್ 2011.

ಮೇಲೆ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಹೆಚ್.ಡಿ. ಲೋಕೇಶ್, ಹಿಂದಿನ ತಹಶೀಲ್ದಾರರು, ಇವರು ಕಂದಾಯ ಇಲಾಖೆಯ ಸೇವೆಗೆ ಸೇರುವ ಪೂರ್ವದಲ್ಲಿ ಗೃಹ ಇಲಾಖೆಯಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿ ದಿನಾಂಕ : 04–01–1999 ರಿಂದ 27–06–2006 ರವರೆಗೆ ಸಲ್ಲಿಸಲಾಗಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 224(ಎ) ರೀತ್ಯ ಸದರಿಯವರ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ಸೇವೆಗಳು–3) ರವರ ಟಿಪ್ಪಣಿ ಸಂಖ್ಯೆ : ಆಇ 297 ಸೇ/3/10, ದಿನಾಂಕ : 10–02–2010ರಲ್ಲಿ ನೀಡಿರುವ ಸಹಮತದೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 1524

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ :
1. ಬಿಜಾಪುರ ಜಿಲ್ಲಾಧಿಕಾರಿಗಳ ಪತ್ರ ಸಂ : ಆರ್‌ಬಿ/ಸಿಎಎಲ್/ಸಿಆರ್/08/2011–12, ದಿನಾಂಕ : 29–04–2011.
2. ಬಿಜಾಪುರ ಜಿಲ್ಲಾಧಿಕಾರಿಗಳ ಪತ್ರ ಸಂ : ಆರ್‌ಬಿ/ಸಿಎಎಲ್/ಸಿಆರ್/08/2011–12, ದಿನಾಂಕ : 30–04–2011.
3. ಬಿಜಾಪುರ ಜಿಲ್ಲಾಧಿಕಾರಿಗಳ ಪತ್ರ ಸಂ : ಆರ್‌ಬಿ/ಸಿಎಎಲ್/ಸಿಆರ್/08/2011–12, ದಿನಾಂಕ : 02–05–2011.
4. ಗದಗ ಜಿಲ್ಲಾಧಿಕಾರಿಗಳ ಪತ್ರ ಸಂ : ಪುನರ್ವಸತಿ ವಹಿ/02/2011–12, ದಿನಾಂಕ : 11–04–2011.
5. ಬೆಳಗಾಂ ಜಿಲ್ಲಾಧಿಕಾರಿಗಳ ಪತ್ರ ಸಂ : ಎಬಿ/ಎಫ್ಎಫ್ಎಲ್/ಸಿಆರ್/11/2011–12, ದಿನಾಂಕ : 03–05–2011.

ಪ್ರಸ್ತಾವನೆ :

ಬಿಜಾಪುರ, ಗದಗ ಮತ್ತು ಬೆಳಗಾವಿ ಜಿಲ್ಲಾಧಿಕಾರಿಗಳ ಮೇಲೆ ಓದಲಾದ (1) ರಿಂದ (5)ರ ಪತ್ರಗಳಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನ ಕೊಟ್ಯಾಳ ಗ್ರಾಮ, ಇಂಡಿ ತಾಲ್ಲೂಕಿನ ಅರ್ಜುನಗಿ ಬಿ.ಕೆ. ಮತ್ತು ನಾದ ಬಿ.ಕೆ. ಗ್ರಾಮ, ಬಸವನಬಾಗೇವಾಡಿ, ತಾಲ್ಲೂಕಿನ ಸಾತಿಹಾಳ ಗ್ರಾಮ ಮತ್ತು ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸೌಂದಲದಾ ಮತ್ತು ಕೊಗೋನಳ್ಳಿ ಗ್ರಾಮ ಹಾಗೂ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹೊಳೆಹಲೂರು ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ. ಈ ಡೀಸೆಲ್ ಜನರೇಟರ್‌ನಿಂದ ವಿದ್ಯುಚ್ಛಕ್ತಿ ಪಡೆದು ಮನೆಗಳ ನಿರ್ಮಾಣಕ್ಕೆ ನೀರನ್ನು ಒದಗಿಸಲಾಗಿರುತ್ತದೆ. ಆದುದರಿಂದ, ಈ ಡೀಸೆಲ್ ಜನರೇಟರ್‌ನ ಬಾಡಿಗೆಯ ಹಣ ಬಿಜಾಪುರ ಜಿಲ್ಲಾಧಿಕಾರಿಗಳು–ರೂ. 8,04,911/– ಗದಗ ಜಿಲ್ಲಾಧಿಕಾರಿಗಳು–ರೂ. 1,83,000/– ಮತ್ತು ಬೆಳಗಾವಿ ಜಿಲ್ಲಾಧಿಕಾರಿಗಳು ರೂ. 2,44,600/– ಒಟ್ಟು ರೂ. 12,32,511/– ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 402 ಟಿಎನ್‌ಆರ್ 2010, ಬೆಂಗಳೂರು ದಿನಾಂಕ : 06ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಬಿಜಾಪುರ, ಗದಗ ಮತ್ತು ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಈ ಕೆಳಗಿನಂತೆ ಬಿಡುಗಡೆ ಮಾಡಲಾಗಿದೆ.

ಕ್ರ.ಸಂ.	ಜಿಲ್ಲೆಗಳು	ಬಿಡುಗಡೆ ಮಾಡಿದ ಮೊತ್ತ (ರೂ.)
1	ಬಿಜಾಪುರ	8,04,911/–
2	ಗದಗ	1,83,000/–
3	ಬೆಳಗಾವಿ	2,44,600/–
	ಒಟ್ಟು	**12,32,511/–**

(ಒಟ್ಟು ರೂಪಾಯಿ ಹನ್ನೆರಡು ಲಕ್ಷದ ಮೂವತ್ತೆರಡು ಸಾವಿರದ ಐದನೂರ ಹನ್ನೊಂದು ಮಾತ್ರ)

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235-00-111-0-02 'Public Contributions to the Calamity Relief' ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್–8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ & ಸೇವೆಗಳು–2)

ಪಿ.ಆರ್. 1525

ಕಂದಾಯ ಸಚಿವಾಲಯ

ವಿಷಯ : ಶ್ರೀ ಎನ್. ಪುಟ್ಟಸ್ವಾಮಿ, ಹಿಂದಿನ ತಹಶೀಲ್ದಾರ್, ಚಾಮರಾಜನಗರ (ಪ್ರಸ್ತುತ ನಿವೃತ್ತರು) ಇವರ ವಿರುದ್ಧ ಲೋಕಾಯುಕ್ತ ಪ್ರಕರಣ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :
1. ಉಪ ನಿಬಂಧಕರು, ವಿಚಾರಣೆ–4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: Compt/uplock/MYS/785/2007/DRE-4, ದಿನಾಂಕ: 08/08/2008.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 4 ಎಡಿಇ 2008, ದಿನಾಂಕ: 18/09/2008.
3. ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪತ್ರ ಸಂಖ್ಯೆ: lok/ARE-4/ENQ-42/2008, ದಿನಾಂಕ: 08/03/2011.

ಪ್ರಸ್ತಾವನೆ :

ಶ್ರೀ ಎನ್. ಪುಟ್ಟಸ್ವಾಮಿ, ಹಿಂದಿನ ತಹಶೀಲ್ದಾರ್, ಚಾಮರಾಜನಗರ (ಪ್ರಸ್ತುತ ನಿವೃತ್ತರು) ಇವರ ವಿರುದ್ಧ ಶ್ರೀ ಸಿ.ವಿ. ನಂಜಪ್ಪ ಬಿನ್ ಲೇಟ್ ಹೆಚ್.ಎನ್.ವಿ. ಆಚಾರ್, ರಾಜೇಶ್ವರಿ ನಿಲಯ, ಚಾಮರಾಜನಗರ ಜಿಲ್ಲೆ, ತಾಲ್ಲೂಕು, ಕಸಬಾ ಹೋಬಳಿ, ಶಿವಪುರ ಗ್ರಾಮದ ಸ.ನಂ. 247 ಮೈಸೂರು ಮಿನರಲ್ಸ್ ಸಂಸ್ಥೆ ಅಕ್ರಮವಾಗಿ ಸಂಗ್ರಹಿಸಿದ್ದು, ಇವುಗಳನ್ನು ತೆರವುಗೊಳಿಸಲು ಕೋರಲಾದ ತಹಶೀಲ್ದಾರ್ ಸೂಕ್ತ ಕ್ರಮ ಕೈಗೊಳ್ಳದೇ ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಇರುವುದರಿಂದ ಹಸ್ತಕ್ಷೇಪ ಮಾಡುವುದು ಸಮಂಜಸವಲ್ಲವೆಂದು ತಾವು ಹಿಂಬರಹ ನೀಡಿರುವ ಹಿನ್ನೆಲೆಯಲ್ಲಿ ಅರ್ಜಿದಾರರು ತಹಶೀಲ್ದಾರ್ ಶ್ರೀ ಎನ್. ಪುಟ್ಟಸ್ವಾಮಿ ಇವರ ವಿರುದ್ಧ ಲೋಕಾಯುಕ್ತ ದೂರು ನೀಡಿರುತ್ತಾರೆ. ಕರ್ನಾಟಕ ಲೋಕಾಯುಕ್ತ ಕಾಯ್ದೆ ಅಧಿನಿಯಮ 12(4)ರನ್ವಯ ಸದರಿ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡುತ್ತಾರೆ. ಹಾಗೂ ಅಂತಹ ಕ್ರಮವನ್ನು ಕೈಗೊಂಡ ಬಗ್ಗೆ ಸದರಿ ಕಾಯ್ದೆ 12(4)ರನ್ವಯ 3 ತಿಂಗಳೊಳಗಾಗಿ ಮಾನ್ಯ ಲೋಕಾಯುಕ್ತ ನೀಡುವಂತೆ ಕೋರುತ್ತಾರೆ. ಮೇಲೆ ಓದಲಾದ ಕ್ರ.ಸಂ.(2) ರಲ್ಲಿ ಶ್ರೀ ಎನ್. ಪುಟ್ಟಸ್ವಾಮಿ, ತಹಶೀಲ್ದಾರ್, ಪ್ರಸ್ತುತ ನಿವೃತ್ತರು ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 214ನ್ನು ಓದಿಕೊಂಡು ಕರ್ನಾಟಕ ನಾಗರೀಕ ಸೇವಾ ವರ್ಗೀಕರಣ 14(ಎ) ಅಡಿಯಲ್ಲಿ ವಿಚಾರಣೆ ನಡೆಸುವ ಸಲುವಾಗಿ ಮಾನ್ಯ ಉಪ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿ ಆದೇಶಿಸಿತ್ತು.

ಮೇಲೆ ಓದಲಾದ ಕ್ರ.ಸಂ. (3)ರಲ್ಲಿ ಉಪ ಲೋಕಾಯುಕ್ತ ಕಛೇರಿಯ ಅಪರ ನಿಬಂಧಕರು, ವಿಚಾರಣೆಗಳು–4 ಇವರ ಆರೋಪದ ವಿರುದ್ಧ ಇಲಾಖಾ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಲಾಗಿತ್ತು. ಆರೋಪಿತರ ಮೇಲಿನ ಆರೋಪವು ಭಾಗಶ: ರುಜುವಾತಾಗಿದೆ ಎಂದು ನೀಡಿದ್ದಾರೆ. ವಿಚಾರಣಾಧಿಕಾರಿಗಳು ವಿಚಾರಣೆ ಮಾಡಿ ಸಲ್ಲಿಸಿದಂತೆ ವಿಚಾರಣಾ ವರದಿಯನ್ನು ಮಾನ್ಯ ಉಪ ಲೋಕಾಯುಕ್ತರು ವಿಚಾರಣಾ ಕಡತ / ದಾಖಲೆಗಳ ಮೇಲಿನ ಮೌಖಿಕ ಹಾಗೂ ದಸ್ತಾವೇಜಿನ ಸಾಕ್ಷ್ಯಾಧಾರಗಳನ್ನು ಮರು ಮೌಲ್ಯ ಮಾಡಿದ ಹಿನ್ನೆಲೆಯಲ್ಲಿ ಆರೋಪಿತರ ಮೇಲೆ ಹೊರಿಸಲಾದ ಆರೋಪ ಸಾಬೀತಾಗಿಲ್ಲವೆಂದು ತೀರ್ಮಾನಕ್ಕೆ ಬಂದು ಆರೋಪಿತರ ಮೇಲೆ ಪ್ರಾರಂಭಿಸಲಾಗಿದ್ದ ಇಲಾಖಾ ವಿಚಾರಣೆಯನ್ನು ಕೈ ಬಿಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಸನ್ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪಿಕೊಂಡು ಇಲಾಖಾ ವಿಚಾರಣೆಯನ್ನು ಕೈಬಿಡಲು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 29 ಎಡಿಇ 2010 ಬೆಂಗಳೂರು, ದಿನಾಂಕ: 01/06/2011.

ಮೇಲಿನ ಪ್ರಸ್ತಾವನೆಯನ್ನು ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎನ್. ಪುಟ್ಟಸ್ವಾಮಿ, ಹಿಂದಿನ ತಹಶೀಲ್ದಾರ್, ಚಾಮರಾಜನಗರ ಜಿಲ್ಲೆ, ಹಾಲಿ ನಿವೃತ್ತರು ಇವರ ವಿರುದ್ಧ ಇಲಾಖಾ ವಿಚಾರಣಾ ಪ್ರಕರಣವನ್ನು ಸರ್ಕಾರವು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಿದೆ. ಇವರ ವಿರುದ್ಧ ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಅವರು ಯಾವ ಸೌಲಭ್ಯಗಳಿಗೆ ಅರ್ಹರಾಗಿರುತ್ತಿದ್ದರೋ ಆ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. **ಬಾಲಕೃಷ್ಣಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 1526

ಕಂದಾಯ ಸಚಿವಾಲಯ

ವಿಷಯ : ಶ್ರೀ. ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ (ನಿವೃತ್ತ) ಇವರ ಮೇಲಿನ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ :
1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಜಿ–44/ಸಿಆರ್ 10/2010 ಕೊಪ್ಪಳ, ದಿನಾಂಕ: 03/09/2010.
2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 58 ಎಡಿಇ 2010, ದಿನಾಂಕ: 23/09/2010.
3. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಜಿ–44/ಸಿಆರ್ 10/2010 ಕೊಪ್ಪಳ, ದಿನಾಂಕ: 28/02/2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರ ದಿನಾಂಕ: 03/09/2010ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಶ್ರೀ ಶಾಮಣ್ಣ ಬಿನ್ ದುರಗಪ್ಪ ಮಾದರ್, ಕೃಷಿಕ, ಗುಡ್ಡದ ಹನುಮಸಾಗರ, ಕುಷ್ಟಗಿ ತಾಲ್ಲೂಕು, ಇವರು ತಮ್ಮ ಗ್ರಾಮದ ಸರ್ವೆ ನಂ. 3/1ರಲ್ಲಿ 4 ಎಕರೆ 31 ಗುಂಟೆ ಮತ್ತು ತನ್ನ ಅಣ್ಣನ ಮಗ ದುರಗಪ್ಪ ಬಿನ್ ಹನುಮಂತಪ್ಪ ಇದೇ ಸರ್ವೆ ನಂಬರಿನ 4 ಎಕರೆ 31 ಗುಂಟೆ ಜಮೀನಿನ ಸಾಗುವಳಿ ಚೀಟಿ ಪಡೆದುಕೊಂಡಿದ್ದು, ಸದರಿ ಜಮೀನುಗಳ ಪೂರ್ಣ ಅಧಿಕಾರ ಹೊಂದುವ ಸಲುವಾಗಿ ಪಹಣಿಗಳನ್ನು ಪಡೆಯಲು ಸೂಕ್ತ

ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ವಿಚಾರಿಸಿದಾಗ, ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಇವರು ರೂ. 10,000/– ರೂಪಾಯಿಗಳನ್ನು ಲಂಚ ಕೊಡುವಂತೆ ಒತ್ತಾಯಿಸಿದ್ದರಿಂದ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತ ಪೊಲೀಸಿನವರಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೊಪ್ಪಳ, ಇವರು ಮೇಲ್ಕಂಡ ಆರೋಪಿತ ಅಧಿಕಾರಿಯ ವಿರುದ್ಧ ಲಂಚ ನಿರೋಧಕ ಕಾಯಿದೆ 1998ರ ಕಲಂ 7, 13, (1)ಡಿ ಜೊತೆಗೆ 13 (2)ರ ಪ್ರಕಾರ ಕೊಪ್ಪಳ ಲೋಕಾಯುಕ್ತ ಠಾಣೆ ಮೊಕದ್ದಮೆ ಸಂ. 10/2010ರಲ್ಲಿ ಪ್ರಕರಣವನ್ನು ದಾಖಲಿಸಿ, ತನಿಖೆಯನ್ನು ಕೈಗೊಂಡು ನಂತರ ಪಂಚ ಸಾಕ್ಷಿಗಳೊಂದಿಗೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿಯವರು ದಿನಾಂಕ: 19/08/2010 ರಂದು ಬೀಸಿದ ಬಲೆಗೆ ಆರೋಪಿತ ಅಧಿಕಾರಿಯಾದ ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಇವರು ತಮ್ಮ ಕಛೇರಿಯಲ್ಲಿ ಸಾಕ್ಷಿದಾರರುಗಳ ಸಮಕ್ಷಮ ದೂರುದಾರರಿಂದ ಲಂಚದ ಹಣ ರೂ. 10,000/– ವನ್ನು ಕೇಳಿ, ದೂರುದಾರರು ಕೊಡಲು ಹೋದಾಗ ಅಲ್ಲಿಯೇ ಇದ್ದ, ಖಾಸಗಿ ವ್ಯಕ್ತಿ ಶ್ರೀ ವೀರೇಶ್ ಬಿನ್ ಯಮನೂರಪ್ಪ ಮಂಗಳೂರು, ಇವರಿಗೆ ಕೊಡುವಂತೆ ತಿಳಿಸಿದ್ದು, ಅದರಂತೆ ಲಂಚದ ಹಣವನ್ನು ದೂರುದಾರರಿಂದ ಸದರಿ ಖಾಸಗಿ ವ್ಯಕ್ತಿಯು ಲಂಚದ ಹಣವನ್ನು ಪಡೆಯುವಾಗ ಸಿಕ್ಕಿಬಿದ್ದಿರುತ್ತಾರೆ. ಈ ರೀತಿ ನಡೆದ ಘಟನೆ ಬಗ್ಗೆ ದೂರುದಾರರು ಮತ್ತು ಸಾಕ್ಷಿದಾರರು ತಮ್ಮ ಹೇಳಿಕೆಯಲ್ಲಿ ದೃಢಪಡಿಸಿರುವುದರಿಂದ ಸದರಿ ಇಬ್ಬರು ಆರೋಪಿತರುಗಳನ್ನು ಘನ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಗಿದೆ ಎಂದು ತಿಳಿಸುತ್ತಾ, ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ, ಮತ್ತು ಶ್ರೀ ವೀರೇಶ್, ಖಾಸಗಿ ವ್ಯಕ್ತಿ ಇವರುಗಳ ಮೇಲಿನ ಭ್ರಷ್ಟಾಚಾರದ ಆಪಾದನೆಗಳಲ್ಲಿ ಮೇಲು ನೋಟಕ್ಕೆ ಸತ್ಯಾಂಶವಿರುತ್ತದೆ. ಆದ್ದರಿಂದ ಆರೋಪಿ ಸರ್ಕಾರಿ ಅಧಿಕಾರಿಯಾದ ಶ್ರೀ. ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ, ಕೊಪ್ಪಳ ಜಿಲ್ಲೆ, ಇವರು ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗು ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿದ್ದರಿಂದ ಇವರನ್ನು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 10(1) (ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲೆ ಓದಲಾದ ಕ್ರ.ಸಂ. (2) ದಿನಾಂಕ: 23/09/2010ರ ಆದೇಶದಲ್ಲಿ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ.(3)ರ ದಿನಾಂಕ: 28/02/2011ರ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ರವರು ಸದರಿ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿರುವ ತನಿಖಾಧಿಕಾರಿಯ ಅಂತಿಮ ವರದಿಯೊಂದಿಗೆ ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1998ರ ಕಲಂ 7,13(1)ರ ಜೊತೆಗೆ 13(2)ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಸಕ್ಷಮ ನ್ಯಾಯಾಲಯದಲ್ಲಿ ಸದರಿ ಆರೋಪಿತ ಅಧಿಕಾರಿಗಳ ಅಭಿಯೋಜನೆಗೆ ಒಳಪಡಿಸಲು ಅರ್ಹರಿರುವುದರಿಂದ ಮಂಜೂರಾತಿಯನ್ನು ನೀಡುವ ಸಕ್ಷಮ ಪ್ರಾಧಿಕಾರ ಅರ್ಥಾತ್ ಸದರಿ ಆಪಾದಿತ ಸರ್ಕಾರಿ ಅಧಿಕಾರಿಯನ್ನು ತಮ್ಮ ಹುದ್ದೆಯಿಂದ ತೆಗೆದುಹಾಕುವ ಅಧಿಕಾರವುಳ್ಳ ಪ್ರಾಧಿಕಾರದ ಪೂರ್ವಾನುಮತಿ ಅತ್ಯಗತ್ಯವಾಗಿರುವುದರಿಂದ ಅಭಿಯೋಜನಾ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಈ ಬಗ್ಗೆ ಅನುಮತಿ ನೀಡುವ ಸಂಬಂಧ ಅಪರ ಪೊಲೀಸ್ ನಿರ್ದೇಶಕರು ಒದಗಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಅಂದರೆ, ಫಿರ್ಯಾದುದಾರರ ದೂರು, ಪ್ರಥಮ ವರ್ತಮಾನ ವರದಿ, ಟ್ರ್ಯಾಪ್ ಪ್ರಕ್ರಿಯೆಯನ್ನು ಅನುಸರಿಸಿದ ಪಂಚನಾಮೆ, ಮಹಜರ್, ಧ್ವನಿ ಮುದ್ರಣ, ನೆರಳಿನಂತೆ ಹಿಂಬಾಲಿಸಿದ ಸಾಕ್ಷಿದಾರರ ಸಾಕ್ಷ್ಯ, ತನಿಖಾಧಿಕಾರಿಯ ವರದಿ ಮತ್ತು ರಾಸಾಯನಿಕ ಪರೀಕ್ಷೆಗಳ ವರದಿ ಮುಂತಾದ ದಾಖಲೆಗಳನ್ನು ಗಣನೆಗೆ ತೆಗೆದುಕೊಂಡಾಗ ಶ್ರೀ ಮಾರೆಪ್ಪ ನಿವೃತ್ತ ತಹಶೀಲ್ದಾರರ ವಿರುದ್ದದ ಆರೋಪಗಳ ಬಗ್ಗೆ 1988ರ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಯಡಿ ಅವರನ್ನು ಅಭಿಯೋಜನೆಗೆ ಒಳಪಡಿಸಲು ಮೇಲ್ನೋಟಕ್ಕೆ ಸ್ಪಷ್ಟವಾದ ಒಂದು ಪ್ರಕರಣವಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಆದುದರಿಂದ ಕರ್ನಾಟಕ ಲೋಕಾಯುಕ್ತ ಕಛೇರಿಯ ಅಪರ ಪೊಲೀಸ್ ಮಹಾ ನಿರ್ದೇಶಕರ ವರದಿಯನ್ನು ಸರ್ಕಾರವು ಪರಿಗಣಿಸಿ ಸದರಿ ನಿವೃತ್ತ ತಹಶೀಲ್ದಾರ್‌ರವರ ಕ್ರಿಮಿನಲ್ ದುರ್ನಡತೆಗಾಗಿ ಅವರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 58 ಎಡಿಇ 2010 ಬೆಂಗಳೂರು, ದಿನಾಂಕ 03-06-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಆರೋಪಿತರಾದ ಶ್ರೀ. ಮಾರೆಪ್ಪ, ತಹಶೀಲ್ದಾರ್, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ, ಪ್ರಸ್ತುತ ನಿವೃತ್ತಿಯಾಗಿರುವ ಇವರನ್ನು ಹುದ್ದೆಯಿಂದ ತೆಗೆದು ಹಾಕುವ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಅವರನ್ನು ಭ್ರಷ್ಟಾಚಾರ ನಿವಾರಣಾ ಅಧಿನಿಯಮ ಕಲಂ 7, 13(1)(ಡಿ) ಇದರ ಜೊತೆಗೆ ಓದಲಾದ ಕಲಂ 13(2) ರಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಕರ್ನಾಟಕ ಲೋಕಾಯುಕ್ತ ಅಪರ ಪೊಲೀಸ್ ಮಹಾನಿರ್ದೇಶಕರಿಗೆ ಈ ಮೂಲಕ ಸರ್ಕಾರದ ಮಂಜೂರಾತಿಯನ್ನು ನೀಡಿದೆ.

ಮುಂದುವರೆದು, ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ, 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಎಲ್ಲಾ ಆದೇಶಗಳನ್ನು ಅಥವಾ ಲೇಖನಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕು ಅಥವಾ ಹೊರಡಿಸುವಂತೆ ಮಾಡಬೇಕು.

ಅದೇ ನಿಯಮಾವಳಿಯ ನಿಯಮ 19(1)ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿದ ಆದೇಶಗಳು ಮತ್ತು ಲೇಖನಗಳು ಒಬ್ಬ ಅಧೀನ ಕಾರ್ಯದರ್ಶಿಯ ಸಹಿಯಿಂದ ಅಧಿಕೃತಗೊಳ್ಳಬೇಕು ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ಈ ಮೇಲ್ಕಂಡ ಆದೇಶವನ್ನು ದಿನಾಂಕ: 02/06/2011 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 1527

ಕಂದಾಯ ಸಚಿವಾಲಯ

ವಿಷಯ : ಶ್ರೀ ಟಿ.ಎನ್. ಪ್ರಾಣೇಶ್‌ಮೂರ್ತಿ, ನಿವೃತ್ತ ತಹಶೀಲ್ದಾರ್ ಇವರಿಗೆ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1. ಮಹಾಲೇಖಪಾಲರ ಪತ್ರ ಸಂಖ್ಯೆ: GEI/R3/Vol 318/17-18, ದಿನಾಂಕ: 07/04/2010.
2. ಮಹಾಲೇಖಪಾಲರ ಪತ್ರ ಸಂಖ್ಯೆ: GEI/R3/Vol 318/1148, ದಿನಾಂಕ: 14/10/2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ.(1)ರ ದಿನಾಂಕ: 07/04/2010ರ ಪತ್ರದಲ್ಲಿ ಮಹಾಲೇಖಪಾಲರು ಶ್ರೀ ಟಿ.ಎನ್. ಪ್ರಾಣೇಶ್‌ಮೂರ್ತಿ ನಿವೃತ್ತ ತಹಶೀಲ್ದಾರ್ ಇವರು ವೇತನ ಶ್ರೇಣಿ ರೂ.2050–3950 ರಲ್ಲಿ ದಿನಾಂಕ: 01/02/1998 ರಂದು ಗರಿಷ್ಠ ವೇತನ ಮಿತಿ ತಲುಪಿರುತ್ತಾರೆಂದು, ಸದರಿಯವರು ದಿನಾಂಕ: 01/02/1999 ರಿಂದ ಮೊದಲನೇ ಸ್ಥಗಿತ ವೇತನ ಬಡ್ತಿಗೆ ಅರ್ಹರಿರುವುದರಿಂದ ದಿನಾಂಕ: 01/02/1999 ರಿಂದ ಜಾರಿಗೆ ಬರುವಂತೆ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 25 ಎಎಸ್‌ಡಿ 2010 ಬೆಂಗಳೂರು, ದಿನಾಂಕ: 01/06/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಟಿ.ಎನ್. ಪ್ರಾಣೇಶ್‌ಮೂರ್ತಿ, ನಿವೃತ್ತ ತಹಶೀಲ್ದಾರ್ ಇವರಿಗೆ ದಿನಾಂಕ: 01/02/1999 ರಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 2050–3950 ರಲ್ಲಿ ಮೊದಲನೇ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಬಾಲಕೃಷ್ಣಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 1528

ಕಂದಾಯ ಸಚಿವಾಲಯ

ವಿಷಯ : ಕೆ.ಆರ್. ಪೇಟೆ ತಾಲ್ಲೂಕು ಕಸಬಾ ಹೋಬಳಿ ಮಣಿಗನಹಳ್ಳಿ ಗ್ರಾಮದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ದೇವಾಲಯ ಮತ್ತು ಕಾಪನಹಳ್ಳಿ ಗವಿಮಠಕ್ಕೆ ಉತ್ತರಾಧಿಕಾರಿ ನೇಮಕ ಮಾಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ: ಎಡಿಎಂ 8 ಸಿಆರ್ 7/11–12, ದಿನಾಂಕ: 26/04/2011.

ಪ್ರಸ್ತಾವನೆ :

ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಕಸಬಾ ಹೋಬಳಿ ಗ್ರಾಮದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ದೇವಾಲಯ ಹಾಗೂ ಬೂಕನಕೆರೆ ಹೋಬಳಿ ಕಾಪನಹಳ್ಳಿ ಗವಿಮಠದ ಪೀಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಚಂದ್ರಶೇಖರ ಸ್ವಾಮೀಜಿಯವರು ದಿನಾಂಕ: 02/01/2011 ರಂದು ಕೈಲಾಸವಾಸಿಯಾಗಿದ್ದು, ಸದರಿಯವರಿಂದ ತೆರವಾದ ಸ್ಥಾನಕ್ಕೆ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ಕೋಡಿಹಳ್ಳಿ ಹೋಬಳಿ, ಹುಣಸನಹಳ್ಳಿ ಗ್ರಾಮ ಶ್ರೀಮತಿ ಮಂಗಳಗೌರಮ್ಮ ಕೋಂ ಜಗದೀಶಯ್ಯರವರ ಪುತ್ರ ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮೀಜಿ (ಪೂರ್ವಾಶ್ರಮದ ನಾಮಧೇಯ ಶ್ರೀ ಹೆಚ್.ಜೆ. ಉಮೇಶ್) ಯವರನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಲು ಕೃಷ್ಣರಾಜಪೇಟೆಯ ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಘಟಕದ ಅಧ್ಯಕ್ಷರು ಮನವಿ ನೀಡಿದ್ದು, ಇದನ್ನು ಕೆ.ಆರ್.ಪೇಟೆಯ ರಾಜಸ್ವ ನಿರೀಕ್ಷಕರು ಹಾಗೂ ತಹಶೀಲ್ದಾರ್‌ರವರುಗಳು ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸುತ್ತಾ, ಕಾಯ್ದೆಯಲ್ಲಿ ಮಠಗಳನ್ನು ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಟ್ಟರೂ ಮಠಗಳಿಗೆ ಸರ್ಕಾರದಿಂದ ನೀಡಲಾಗುವ ಅನುದಾನ / ನಗದು ಅನುದಾನ / ತಸ್ಥೀಕು, ವರ್ಷಾಸನ ಇತ್ಯಾದಿಗಳು ಪಾವತಿ ಮಾಡುವುದರಿಂದ ಮಠಗಳಿಗೆ ಪೀಠಾಧಿಕಾರಿಗಳನ್ನು ಆಯ್ಕೆ ಮಾಡಿರುವುದಕ್ಕೆ ಸರ್ಕಾರವು ಮಾನ್ಯತೆ ನೀಡುವ ಅವಶ್ಯಕತೆ ಇರುತ್ತದೆಯೆಂದು ಅಭಿಪ್ರಾಯ ನೀಡುತ್ತಾ, ಕೆ.ಆರ್.ಪೇಟೆ ತಾಲ್ಲೂಕು ಕಸಬಾ ಹೋಬಳಿ ಮಣಿಗನಹಳ್ಳಿ ಗ್ರಾಮದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ದೇವಾಲಯ ಮತ್ತು ಕಾಪನಹಳ್ಳಿ ಗವಿಮಠಕ್ಕೆ ಶ್ರೀ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮೀಜಿಯವರನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡುವ ಬಗ್ಗೆ ಸರ್ಕಾರದಿಂದ ಮಾನ್ಯತೆ ನೀಡುವಂತೆ ಧಾರ್ಮಿಕ ದತ್ತಿ ಆಯುಕ್ತರು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಧಾರ್ಮಿಕ ದತ್ತಿ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಮುಸೇವಿ 2011, ಬೆಂಗಳೂರು, ದಿನಾಂಕ: 03/06/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕೆ.ಆರ್. ಪೇಟೆ ತಾಲ್ಲೂಕು ಕಸಬಾ ಹೋಬಳಿ ಮಣಿಗನಹಳ್ಳಿ ಗ್ರಾಮದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ದೇವಾಲಯ ಮತ್ತು ಕಾಪನಹಳ್ಳಿ ಗವಿಮಠಕ್ಕೆ ಶ್ರೀ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮೀಜಿಯವರನ್ನು (ಪೂರ್ವಾಶ್ರಮದ ನಾಮಧೇಯ ಶ್ರೀ ಹೆಚ್.ಜೆ. ಉಮೇಶ್) ಉತ್ತರಾಧಿಕಾರಿಯಾಗಿ ನೇಮಕ ಮಾಡಲು ಸರ್ಕಾರದ ಮಾನ್ಯತೆ ನೀಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಲ್.ಎಸ್. ಶ್ರೀಕಂಠಬಾಬು
ಪೀಠಾಧಿಕಾರಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 1529

INFRASTRUCTURE DEVELOPMENT SECRETARIAT

Sub :- Release of funds to KSIIDC for implementation Dabhol Bangalore gas pipeline.

Read :-
1. GO.No. IDD 14UIP 08 dated: 25/11/2009
2. GO.No.IDD 14UIP 08 dated: 29/07/2010
3. IDD 4 UIP 2011 dated: 12/05/2011
4. Letter No. DGM (IPD)/GAIL/366/2011-12, dated: 20/05/2011 of DGM, KSIIDC

Preamble :

In the Government Order read at (1) above, KSIIDC was designated as nodal agency for the activities relating to the implementation of Dhabol-Bangalore gas pipeline project on behalf of Government of Karnataka, sanction was also accorded, for creation of "GAIL Project cell" in KSIIDC with an estimated expenditure of Rs. 135 lakhs for 3 years from 2009-10 to 2011-12 respectively. An amount of Rs. 19.50 Lakhs was released during 2009-10 towards estimated cost.

2. In G.O. read at (2) above an amount of Rs. 55 lakhs (Rs. Fifty five lakhs only) was released towards the expenditure of GAIL cell for the period 2010-11.
3. This is the new scheme cleared by the planning Department and Financial Department vide G.O. read at (3) above during the financial year 2011-12.
4. Deputy General Manager KSIIDC in his letter dated: 20/05/2011 read at (3) above has requested for release of Rs. 25 lakhs towards the expenditure of GAIL cell for the year 2011-12 and stated that an amount of Rs. 4.88 lakhs has already been incurred towards this project during the current financial year.
5. Government of Karnataka after examining the proposal has decided to release Rs. 25 lakhs towards expenditure of GAIL cell for the year 2011-12.

Government Order No. IDD 18 UIP 2010, Bengalore, Dated: 08/06/2011

Government of Karnataka is pleased to release an amount of Rs. 25 lakhs (Rs. Twenty five lakhs only) towards the expenditure of GAIL cell for the period 2011-12.

2. The expenditure shall be met from the Head of Account 5465-01-190-1-16 Gas pipeline project" out of the Budget provision in 2011-12.
3. Managing Director KSIIDC is authorized to draw the amount on a payee Receipt duly counter signed by Under Secretary to Government Infrastructure Development Department.
4. This order is issued in accordance with the financial powers delegated to principal Secretaries, vide, Government Order No: FD/1TFP 2008 dated: 16/05/2008.

By Order and in the name of the Governor of Karnataka
C.A. Baburavindranath Patel
Under Secretary to Government
Infrastructure Development Department

P.R No: 1530

FOREST, ECOLOGY AND ENVIRONMENT SECRETARIAT

Sub :- Constitution of Committee for monitoring the implementation of the provisions of fly ash Notification issued by MoEF, GoI.

Read :-
1. Notification No: S.O. 763 (E) dated: 14/09/1999
2. Notification No: 979 (E) dated: 27/08/2003
3. Amended Notification No: S.O. 2804 (E) dated: 03/11/2009

Preamble :

The Ministry of Environment and Forests (MoEF), Government of India have issued the directions with regard to the use of fly ash, bottom ash and pond ash generated by the thermal power plants in the manufacture of bricks and other construction activities vide Notification read at (1) above. Specification for use of ash-based products were proposed in the draft Notification read at (2) above and the same have been confirmed vide Notification read at (3) above.

The Ministry of Environment and Forests, Government of India, New Delhi through the Notification read at (3) above have proposed for constitution of a monitoring committee under the chairmanship of Secretary, Department of Environment with representatives from Department of power, Department of Mining, Road and Building Construction Department and State Pollution Control Board for the purpose of monitoring and facilitating the implementation of provisions of the notifications read above. The Committee also need to deal with any unresolved issue by Dispute Settlement Committee as prescribed in sub-paragraph (4) of paragraph 1 of the Notification read at (3) above at the State level. The Committee is also to be empowered to suitably modify (waive or relax) the stipulation under sub-paragraph (1) in case of non-availability of fly ash in sufficient quantities from thermal power plant as certified by the said power plants. The Committee is to meet at least once in every quarter.

The Government have considered the issue and have decided to constitute monitoring Committee as under. Hence this order.

Government Order No. FEE 75 ENV 2011, Bengalore, Dated: 04/06/2011

Pursuant to the specification made at para-7 of the notification No. S.O. 2804 (E) dated: 03/11/2009 and the facts and circumstances explained in the preamble the Government hereby constitutes the following monitoring Committee.

1.	Principal Secretary to Government Forest, Ecology and Environment Department	Chairman
2.	Additional Chief Secretary to Government/Principal Secretary or representative of Energy Department	Member
3.	Secretary to Government (Ecology and Environment) Forest, Ecology and Environment Department	Member
4.	Secretary to Government, public Works Department	Member
5.	Director, Mines and Geology Department	Member
6.	Member Secretary, Karnataka State Pollution Control Board	Member
7.	Special Director, Department of Forest, Ecology and environment	Member Secretary

The Committee shall have the following functions and responsibilities:

1. The Committee shall monitor and ensure complete utilization of fly ash, bottom ash and pond ash generated by the thermal power plants in the manufacture of bricks and other construction activity in the State in accordance with the provisions of notifications read above.
2. The Committee shall deal with unresolved issue by Dispute Settlement Committee as prescribed in sub-paragraph (4) of paragraph 1 of the notification No. S.O. 763 (E) dated: 14/09/1999, in addition to monitoring and facilitating implementation of the notification.
3. The Committee shall suitably modify (waive or relax) the stipulation under sub-paragraph (1) in case of non-availability of fly ash in sufficient quantities from thermal power plant as certified by the said power plants.
4. The Committee shall meet at least once in every quarter and send the progress report of monitoring the implementations of the provisions of the notifications read above to the Ministry of Environment and Forests.

By Order and in the name of the Governor of Karnataka
B. Manohar
Under Secretary to Government
(Ecology and Environment)
Forest, Ecology and Environment Dept.

P.R No: 1531

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯ ಧಾರವಾಡ ನಗರದ ಸಿವಿಲ್ ನ್ಯಾಯಾಲಯದ ವೃತ್ತದಿಂದ ಧಾರವಾಡ ರೈಲು ನಿಲ್ದಾಣದವರೆಗಿನ (ಚೈ.0.00 ರಿಂದ 1.30) ರಸ್ತೆ ಸುಧಾರಣೆ ಕಾಮಗಾರಿಯ ಪರಿಷ್ಕೃತ ರೂ. 478 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ :
1. ಸರ್ಕಾರದ ಪತ್ರ ಸಂಖ್ಯೆ: ನಅಇ 158 ಎಹೆಚ್‌ಡಿ 2008, ದಿನಾಂಕ: 05/12/2008.
2. ಸರ್ಕಾರದ ಆದೇಶ ಸಂಖ್ಯೆ: ನಅಇ 2 ಎಹೆಚ್‌ಡಿ 2009, ದಿನಾಂಕ: 01/09/2009.
3. ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡ ಇವರ ಪತ್ರ ಸಂಖ್ಯೆ: ಯುಡಿಸಿ/ಎಸ್‌ಎಫ್‌ಸಿ/ಸಿಆರ್/2/2008-09, ದಿನಾಂಕ: 07/06/2010 ಮತ್ತು 19/08/2010.
4. ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಪೌನಿ ತಾಂತ್ರಿಕ/ಹೆಚ್‌ಡಿಎಂಸಿ/122/10-11, ದಿನಾಂಕ: 25/03/2011.
5. ಸರ್ಕಾರದ ಆದೇಶ ಸಂಖ್ಯೆ: ನಅಇ 30 ಎಹೆಚ್‌ಡಿ 2011, ದಿನಾಂಕ: 01/06/2011.

ಮೇಲೆ (1)ರಲ್ಲಿ ಓದಲಾದ ಸರ್ಕಾರದ ದಿನಾಂಕ: 05/12/2008ರ ಪತ್ರದಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವತಿಯಿಂದ ಮಾನ್ಯ ಮುಖ್ಯ ಮಂತ್ರಿಗಳ ರೂ. 100 ವಿಶೇಷ ಅನುದಾನದ ಅಡಿ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳುವ ಸಲುವಾಗಿ ಮೇಲೆ ಹೇಳಲಾದ ಕಾಮಗಾರಿಯ ಅಂದಾಜು ವೆಚ್ಚ ರೂ. 300 ಲಕ್ಷ ಸೇರಿದಂತೆ 11 ಕಾಮಗಾರಿಗಳ ರೂ. 1834.49 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮೇಲೆ ಹೇಳಲಾದ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ಹುಬ್ಬಳ್ಳಿ-ಧಾರವಾಡ ನಗರದ ಸಿವಿಲ್ ನ್ಯಾಯಾಲಯದ ವೃತ್ತದಿಂದ ಧಾರವಾಡ ರೈಲು ನಿಲ್ದಾಣದವರೆಗಿನ (ಚೈ.0.00 ರಿಂದ 1.30) ರಸ್ತೆ ಸುಧಾರಣೆ ಕಾಮಗಾರಿಯ ರೂ. 3,33,78,378/- ಮೊತ್ತದ ಟೆಂಡರ್ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ. ಕಾಮಗಾರಿಯ ಮೂಲ ಅಂದಾಜು ಮೊತ್ತ ರೂ. 300 ಲಕ್ಷಗಳು ಇದ್ದು ನಂತರ ಕಾಮಗಾರಿಗೆ ರೂ. 2,97,54,690.93 ಮೊತ್ತಕ್ಕೆ (ಪರಿಷ್ಕೃತ ಚಾಲ್ತಿದರ ಪಟ್ಟಿಯಂತೆ ಪರಿಷ್ಕೃತ ಮೊತ್ತ ರೂ. 3,01,91,949.94) ಟೆಂಡರ್ ಕರೆಯಲಾಗಿತ್ತು. ನಂತರ ಕಾಮಗಾರಿಯನ್ನು ಟೆಂಡರ್ ಮೂಲಕ ಶ್ರೀ ಬಿ. ತಿರುಪತಿ ರೆಡ್ಡಿ ಇವರಿಗೆ ಶೇಕಡ 9.55 ಹೆಚ್ಚುವರಿ ಟೆಂಡರ್ ಪ್ರೀಮಿಯಂ ಮೊತ್ತಕ್ಕೆ ಅಂದರೆ ರೂ. 3,33,78,378 ಮೊತ್ತಕ್ಕೆ ವಹಿಸಲಾಗಿದೆ.

3. ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ರೂ. 100 ಕೋಟಿ ವಿಶೇಷ ಅನುದಾನದ ಅಡಿ ಕೈಗೊಳ್ಳಲಾದ ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯ ಧಾರವಾಡ ನಗರದ ಸಿವಿಲ್ ನ್ಯಾಯಾಲಯದ ವೃತ್ತದಿಂದ ಧಾರವಾಡ ರೈಲು ನಿಲ್ದಾಣದವರೆಗಿನ (ಚೈ. 0.00 ರಿಂದ 1.30) ರಸ್ತೆ ಸುಧಾರಣೆ ಕಾಮಗಾರಿಯ ರೂ. 1,22,38,505 ಮೊತ್ತದ ವರ್ಕ್ ಸ್ಲಿಪ್ ಮತ್ತು ರೂ. 2,05,93,570 ಮೊತ್ತದ ಇ.ಐ.ಆರ್.ಎಲ್. ಸೇರಿದಂತೆ ರೂ.478 ಲಕ್ಷ ಮೊತ್ತದ ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ನೀಡುವಂತೆ ಕೋರಲಾಗಿದೆ.

4. ಮೇಲೆ (4)ರಲ್ಲಿ ಓದಲಾದ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ದಿನಾಂಕ: 25/03/2011 ಪತ್ರದಲ್ಲಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಹೆಚ್ಚುವರಿ ಮಾಹಿತಿಯನ್ನು ಮತ್ತು ಸ್ಪಷ್ಟೀಕರಣವನ್ನು ನೀಡಿರುತ್ತಾರೆ.

5. ಈಗ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಕಾಮಗಾರಿಯ ವೆಚ್ಚದಲ್ಲಿ ಹೆಚ್ಚಳ ಉಂಟಾಗಿರುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯಲ್ಲಿ ದಿನಾಂಕ: 17/01/2009ರಂದು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ನಡೆದ ಉಸ್ತುವಾರಿ ಸಮಿತಿ ಸಭೆಯಲ್ಲಿ ಸದರಿ ರಸ್ತೆಯನ್ನು ಡಾಂಬರಿಗೆ ಬದಲಾಗಿ ರಸ್ತೆಯ ಮಧ್ಯಭಾಗದಿಂದ ಎರಡೂ ಬದಿಗಳಲ್ಲಿ 3.75 ಮೀಟರು ಅಗಲಕ್ಕೆ ಕಾಂಕ್ರೀಟ್ ರಸ್ತೆಯನ್ನು ಮತ್ತು ಎರಡೂ ಬದಿಗೆ 2.75 ಮೀಟರು ಅಗಲಕ್ಕೆ ಡಾಂಬರು ರಸ್ತೆ ನಿರ್ಮಾಣ ಮಾಡಲು ತೀರ್ಮಾನಿಸಲಾಗಿದೆ.

6. ಪ್ರಸ್ತುತ ಸಲ್ಲಿಸಿರುವ ವರ್ಕ್‌ಸ್ಲಿಪ್ ಮೊತ್ತ ರೂ. 1,22,38,505/– ಮತ್ತು ಇ.ಐ.ಆರ್.ಎಲ್ ಮೊತ್ತ ರೂ. 205,93,570/– ಇವುಗಳನ್ನು ಒಳಗೊಂಡಂತೆ ಪರಿಷ್ಕೃತ ಕ್ರಿಯಾ ಯೋಜನೆಯ ಮೊತ್ತವು ರೂ. 478 ಲಕ್ಷಗಳಾಗಿದ್ದು, ಇದನ್ನು ಕಾಮಗಾರಿಯ ಚಾಲ್ತಿ ದರದಂತೆ ಪರಿಷ್ಕೃತ ಮೂಲ ಅಂದಾಜು ಮೊತ್ತ ರೂ. 3,01,91,949.94ಕ್ಕೆ ಹೋಲಿಸಿದಾಗ ಒಟ್ಟಾರೆ ಹೆಚ್ಚಳ ರೂ. 1,78,08,050/– ಆಗುತ್ತಿದ್ದು, ಇದು ಶೇಕಡ 59.84 ಹೆಚ್ಚುವರಿ ಇರುತ್ತದೆ.

7. ಸದರಿ ಕಾಮಗಾರಿಗೆ ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಟೆಂಡರ್ ದಸ್ತಾವೇಜು ಕೆ.ಡಬ್ಲ್ಯೂ–4, ಸೆಕ್ಷನ್–5: ಕಂಡೀಷನ್ಸ್ ಆಫ್ ಕಾಂಟ್ರಾಕ್ಟ್, ಕ್ಲಾಸ್ 34 ವೇರಿಯೇಷನ್ಸ್ ಅಂಶದಲ್ಲಿ ಪ್ರದತ್ತವಾಗಿರುವ ಅಧಿಕಾರದಂತೆ ಅನುಮೋದಿತ ಮೂಲ ಗುತ್ತಿಗೆದಾರರ ವತಿಯಿಂದಲೇ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್ ಅಂಶಗಳು ಸೇರಿದಂತೆ ಸಂಪೂರ್ಣ ಕಾಮಗಾರಿಯನ್ನು ರೂ. 478 ಲಕ್ಷಗಳ ಮೌಲ್ಯದಲ್ಲಿ ಪೂರ್ಣಗೊಳಿಸಲಾಗಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.

8. ಮೂಲ ಮಂಜೂರಾದ ಅಂದಾಜು ಪಟ್ಟಿಯ ಮೊತ್ತವಾದ ರೂ.300 ಲಕ್ಷಕ್ಕಿಂತ ಒಟ್ಟಾರೆ ಹೆಚ್ಚುವರಿಯಾಗಿ ಬೇಕಾಗಿರುವ ರೂ. 178 ಲಕ್ಷಗಳ ಅನುದಾನವನ್ನು ರೂ. 100 ಕೋಟಿ ವಿಶೇಷ ಅನುದಾನದ ಅಡಿ 1ನೇ ಹಂತದಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವೆಚ್ಚದ ಒಟ್ಟಾರೆ ಉಳಿತಾಯದಲ್ಲಿ ಭರಿಸಲು ಉದ್ದೇಶಿಸಲಾಗಿದೆ.

9. ಮೇಲೆ (5)ರಲ್ಲಿ ಓದಲಾದ ದಿನಾಂಕ: 01/06/2011ರ ಸರ್ಕಾರದ ಆದೇಶದಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯಲ್ಲಿ ರೂ. 100 ಕೋಟಿ ವಿಶೇಷ ಅನುದಾನದ ಅಡಿ 1ನೇ ಹಂತದಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಪರಿಷ್ಕೃತ ಕ್ರಿಯಾ ಯೋಜನೆ ಪಟ್ಟಿಗೆ ಅನುಮೋದನೆ ನೀಡಲಾಗಿದೆ. ಈ ಪರಿಷ್ಕೃತ ಕ್ರಿಯಾ ಯೋಜನೆ ಪಟ್ಟಿಯ ಕ್ರಮ ಸಂಖ್ಯೆ 43ರಲ್ಲಿ ಪ್ರಸ್ತಾಪಿತ ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯ ಧಾರವಾಡ ನಗರದ ಸಿವಿಲ್ ನ್ಯಾಯಾಲಯದ ವೃತ್ತದಿಂದ ಧಾರವಾಡ ರೈಲು ನಿಲ್ದಾಣದವರೆಗಿನ (ಚೈ.0.00 ರಿಂದ 1.30) ರಸ್ತೆ ಸುಧಾರಣೆ ಕಾಮಗಾರಿಗೆ ರೂ. 478 ಲಕ್ಷ ಅನುದಾನ ಒದಗಿಸಲಾಗಿದೆ. ಇದರಿಂದಾಗಿ ಪ್ರಸ್ತಾಪಿತ ಕಾಮಗಾರಿಯ ರೂ. 178 ಲಕ್ಷ ಮೊತ್ತದ ಹೆಚ್ಚುವರಿ ವೆಚ್ಚಕ್ಕೆ ಅನುದಾನ ಒದಗಿಸಿದಂತಾಗಿದೆ.

10. ಸರ್ಕಾರವು ಪ್ರಸ್ತಾವನೆಯನ್ನು ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಮತ್ತು ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ, ಧಾರವಾಡ ಇವರ ಶಿಫಾರಸ್ಸನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 84 ಎಹೆಚ್‌ಡಿ 2010 ಬೆಂಗಳೂರು, ದಿನಾಂಕ: 04/06/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯ ಧಾರವಾಡ ನಗರದ ಸಿವಿಲ್ ನ್ಯಾಯಾಲಯ ವೃತ್ತದಿಂದ ಧಾರವಾಡ ರೈಲು ನಿಲ್ದಾಣದವರೆಗೆ (ಚೈ.0.00 ರಿಂದ 1.30) ರಸ್ತೆ ಸುಧಾರಣೆ ಕಾಮಗಾರಿಯ ರೂ. 1,22,38,505/– ಮೊತ್ತದ ವರ್ಕ್ ಸ್ಲಿಪ್ ಮತ್ತು ರೂ. 2,05,93,570 ಲಕ್ಷ ಮೊತ್ತದ ಇ.ಐ.ಆರ್.ಎಲ್ ಸೇರಿದಂತೆ ರೂ. 478 ಲಕ್ಷ ಮೊತ್ತದ ಪರಿಷ್ಕೃತ ಅಂದಾಜು ಪಟ್ಟಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಆ.ಟಿ ಸಂಖ್ಯೆ: ಆಇ 296 ವೆಚ್ಚ–9/2011, ದಿನಾಂಕ: 28/05/2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಆರ್. ಮಹೇಶ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
(ಮಹಾನಗರಪಾಲಿಕೆ–2), ನಗರಾಭಿವೃದ್ಧಿ ಇಲಾಖೆ

ಪಿ.ಆರ್. 1532

ಉದ್ಯೋಗ ಮತ್ತು ತರಬೇತಿ ಸಚಿವಾಲಯ

ವಿಷಯ : ಕರ್ನಾಟಕ ವೊಕೇಷನಲ್ ಎಜುಕೇಷನ್ ಅಂಡ್ ಟ್ರೈನಿಂಗ್ (ಕೆವಿಇಟಿ) ಅನ್ನು ರಿಜಿಸ್ಟರ್ಡ್ ಸೊಸೈಟಿ ಮಾಡಿರುವುದಕ್ಕೆ ಘಟನೋತ್ತರ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂ. ಉತಇ/ತರಬೇತಿ/ಎಂ.ಇ.ಎಸ್./ವಿವ–22/2010–11, ದಿನಾಂಕ: 07/02/2011.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ತಮ್ಮ ಪತ್ರದಲ್ಲಿ ಎಂ.ಇ.ಎಸ್. ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ಮತ್ತು ಕೇಂದ್ರ ಸರ್ಕಾರದ ಅನುದಾನವನ್ನು ಇಲಾಖೆಗೆ ವರ್ಗಾವಣೆ ಮಾಡುವುದಾಗಿ ತಿಳಿಸಿದ್ದರಿಂದ ತ್ವರಿತ ಕ್ರಮಕೈಗೊಂಡು, ಡಿಜಿಇಟಿ ನೀಡಿರುವ ಮಾದರಿಯಲ್ಲಿ ಕರ್ನಾಟಕ ವೊಕೇಷನಲ್ ಎಜುಕೇಷನ್ ಅಂಡ್ ಟ್ರೈನಿಂಗ್ ಹೆಸರಿನಲ್ಲಿ ಎಂ.ಓ.ಎ ಮತ್ತು ನಿಯಮ ನಿಬಂಧನೆಗಳನ್ನು ಸಿದ್ದಪಡಿಸಿ ಆಯುಕ್ತರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿ, ಕೈಗಾರಿಕಾ ಉದ್ಯಮಿಗಳ ಸಂಘದ ಪ್ರತಿನಿಧಿಗಳ

ಸಮಿತಿಯನ್ನು ರಚಿಸಿ ದಿ ರಿಜಿಸ್ಟ್ರಾರ್ ಆಫ್ ಸೊಸೈಟೀಸ್ ಬೆಂಗಳೂರು ನಗರ, ಆಲಿಆಸ್ಕರ್ ರಸ್ತೆ, ಬೆಂಗಳೂರು–01, ಇಲ್ಲಿ ಕರ್ನಾಟಕ ವೊಕೇಷನಲ್ ಎಜುಕೇಷನ್ ಅಂಡ್ ಟ್ರೈನಿಂಗ್ (ಕೆವಿಇಟಿ) ಅನ್ನು ಸೊಸೈಟಿ ಎಂದು ನೋಂದಾಯಿಸಲಾಗಿದೆ ಎಂದು ತಿಳಿಸುತ್ತಾ ಈ ಬಗ್ಗೆ ಘಟನೋತ್ತರ ಮಂಜೂರಾತಿ ನೀಡುವಂತೆ ಕೋರಿರುವರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 122 ಇಟಿಐ 2010 ಬೆಂಗಳೂರು, ದಿನಾಂಕ: 04/06/2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸೊಸೈಟಿ ಫಾರ್ ಕರ್ನಾಟಕ ವೊಕೇಷನಲ್ ಎಜುಕೇಷನ್ ಅಂಡ್ ಟ್ರೈನಿಂಗ್ (ಕೆವಿಇಟಿ) ಅನ್ನು ರಿಜಿಸ್ಟ್ರಾರ್ ಆಫ್ ಸೊಸೈಟೀಸ್ ಇಲ್ಲಿ ನೋಂದಣಿ ಮಾಡಿರುವುದಕ್ಕೆ ಸರ್ಕಾರದ ಘಟನೋತ್ತರ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಜೆ.ಎಸ್. ವಿಶ್ವನಾಥಪ್ಪ
ಪೀಠಾಧಿಕಾರಿ, ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಪಿ.ಆರ್. 1533

LABOUR SECRETARIAT

Sub : Reconstitution of Institute Management Committee of the Government Industrial Training Institute, Hosur Road, Bangalore-29.

Read: 1.Government Order No. LD 334 ETI 2007 Dt. 23-09-2008.
2. Letter No. DET/T/T-1/CR-2/01-02 dated: 22-03-2011.

PREAMBLE:

In the Government Order read at (1) above, The Institute Management committee is constituted for the 6 Government Industrial Training Institutes which are Upgraded as COEs in I Phase with Central Government assistance and Industrial Training Institute, Hosur Road, Bangalore-29 is one among them.

The Commissioner, Employment and Training Department in his letter read at (2) above has requested to re-constitute the Institute Management Committee of Government Industrial Training Institute, Hosur Road, Bangalore-29 since some of members are not attending the meetings.

Considering his proposal Government has decided to reconstitute the IMC and hence this order.

Government Order No. LD 66 ETI 2011 Bangalore, Dated 09-06-2010

The Institute Management Committee constituted for Government industrial Training Institute, Hosur Road, Bangalore-29 vide Government Order No. LD 334 ETI 2007 Dt. 23-09-2008, is herewith cancelled and the following Institute Management Committee is constituted comprising of the members mentioned below with immediate effect.

Sl. No.	Name of the Industrial Training Institute & Sector		Representatives	Designation
1.	Government Industrial Training Institute Hosur Road, Bangalore-29. (Sector-Electrical)	1	Director Training, M/s. NTTF Industries Ltd., Bangalore	Chairman
		2	Principal, Govt. ITI, Hosur Road, Bangalore-29	Co-Chairman
		3	Training Officer, Govt. ITI, Hosur Road, Bangalore-29	Convener
		4	Representative from Weir Minerals, Bangalore	Member
		5	Representative from Dept. of Factories and Boilers, Bangalore	Member
		6	Representative from Dept. of Karnataka Knowledge Commission Bangalore	Member
		7	Representative from B.M.S.T & Research Institute, Bangalore	Member
		8	Representative from R.V.T.I, Bangalore	Member
		9	Joint Director, Divisional Office, Bangalore	Member
		10	Vice Principal, Govt. ITI, Hosur Road, Bangalore-29	Member
		11	Joint Director, Industries & Commerce Department, Urban District, Bangalore	Member
		12	District Employment Officer, Bangalore	Member
		13	Student Representative, Govt. ITI, Hosur Road, Bangalore-29	Member

By Order and in the name of the Governor of Karnataka
J.S. Vishwanathappa
Desk Officer,
Labour Department, (Employment and Training)

P.R. 1534

ಕಾರ್ಮಿಕ ಸಚಿವಾಲಯ

ವಿಷಯ : ರಾಜ್ಯ ಯೋಜನಾ ಅನುಷ್ಠಾನ ಘಟಕಕ್ಕೆ (ಎಸ್.ಪಿ.ಐ.ಯು) ಸೃಜನೆಯಾಗಿರುವ ಅಪರ ರಾಜ್ಯ ಯೋಜನಾ ನಿರ್ದೇಶಕರು ಹುದ್ದೆಯ ಭರ್ತಿಯ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಕಾಇ 224 ಎಟಿಐ 2008, ದಿನಾಂಕ: 16–05–2011.

2. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ: ಉತನಿ/ತರಬೇತಿ/ಯೋ–01/ವಿವ–04/2007–08, ದಿನಾಂಕ: 09–08–2010.

3. ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿ.ಆ.ಸು.ಇ. 38 ಸೇನಿಡಿ 96, ದಿನಾಂಕ: 01–08–1996.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಅದೇಶದಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ರಾಜ್ಯ ಯೋಜನಾ ಅನುಷ್ಠಾನ ಘಟಕಕ್ಕೆ ರೂ. 24,450–31,800 ವೇತನ ಶ್ರೇಣಿಯ ಅಪರ ರಾಜ್ಯ ಯೋಜನಾ ನಿರ್ದೇಶಕರು ಹುದ್ದೆಯನ್ನು ಸೃಜಿಸಲು ಮಂಜೂರಾತಿ ನೀಡಲಾಗಿತ್ತು.

ಮೇಲೆ (2)ರಲ್ಲಿ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಸದರಿ ಹುದ್ದೆಯನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಯ ತರಬೇತಿ ವಿಭಾಗದ ಜಂಟಿ ನಿರ್ದೇಶಕರು ಮುಂಬಡ್ತಿ ಮೂಲಕ ತುಂಬಬಹುದು ಎಂದು ತಿಳಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರದ ಅಧಿಕೃತ ಜ್ಞಾಪನಾ ಪತ್ರದಲ್ಲಿ ನೇಮಕಾತಿ ವಿಧಾನದ ಬಗ್ಗೆ ನಿಯಮಗಳು ಇಲ್ಲದಿದ್ದ ಪ್ರಕರಣದಲ್ಲಿ ಕೆಲವು ಷರತ್ತುಗಳಿಗೆ ಒಳಪಡಿಸಿ ಕಾರ್ಯಾಕಾರಿ ಆದೇಶಗಳನ್ನು ಹೊರಡಿಸಬಹುದಾಗಿದೆ ಎಂದು ತಿಳಿಸಿದ್ದು, ಅದರ 2ನೇ ಷರತ್ತಿನ ಪ್ರಕಾರ ಹೊಸದಾಗಿ ಸೃಜಿಸಿರುವ ಹುದ್ದೆಗಳಿಗೆ ಮತ್ತು ನೇಮಕಾತಿ ವಿಧಾನವನ್ನು ರೂಪಿಸದಿರುವ ಹುದ್ದೆಗಳಿಗೆ ನೇಮಕಾತಿ ನಿಯಮಗಳನ್ನು ರೂಪಿಸುವಲ್ಲಿ ವಿಳಂಬವಾಗುವ ಸಾಧ್ಯತೆ ಇರುವ ಪ್ರಕರಣಗಳಲ್ಲಿ ಕಾರ್ಯಾಕಾರಿ ಆದೇಶವನ್ನು ಹೊರಡಿಸಬಹುದೆಂದು ತಿಳಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 224 ಇಟಿಐ 2008 ಬೆಂಗಳೂರು, ದಿನಾಂಕ 9–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ರಾಜ್ಯ ಯೋಜನಾ ಅನುಷ್ಠಾನ ಘಟಕಕ್ಕೆ ಹೊಸದಾಗಿ ಸೃಜಿಸಲಾಗಿರುವ ಅಪರ ರಾಜ್ಯ ಯೋಜನಾ ನಿರ್ದೇಶಕರು ಹುದ್ದೆಗೆ (ವೇತನ ಶ್ರೇಣಿ ರೂ. 24,450–31,800) ಈ ಆದೇಶದ ಅನುಬಂಧ 1 ರಲ್ಲಿ ವಿವರಿಸಿರುವಂತೆ ಕೆಳಗಿನ ನಿಬಂಧನೆಗಳಿಗೆ ಒಳಪಡಿಸಿ ನೇಮಕಾತಿ ವಿಧಾನವನ್ನು ಗೊತ್ತುಪಡಿಸಲಾಗಿದೆ.

1) ಈ ಕಾರ್ಯಕಾರಿ ಆದೇಶದ ಮುಖಾಂತರ ನಿಗದಿಪಡಿಸಿದ ನೇಮಕಾತಿ ವಿಧಾನವು ಸದರಿ ಕಾರ್ಯಕಾರಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ 6 ತಿಂಗಳ ಕಾಲ ಮಾತ್ರ ಜಾರಿಯಲ್ಲಿರುತ್ತದೆ.

2) 6 ತಿಂಗಳ ಒಳಗಾಗಿ ಈ ನೇಮಕಾತಿ ವಿಧಾನವನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ ಅಳವಡಿಸತಕ್ಕದ್ದು.

3) 6 ತಿಂಗಳ ಅವಧಿಯ ನಂತರ ಈ ಕಾರ್ಯಕಾರಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ.

ಈ ಅದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಸಿಆಸುಇ 42 ಸೇನಿಡಿ 2011, ದಿನಾಂಕ: 08–06–2011ರ ಮೂಲಕ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಜೆ.ಎಸ್. ವಿಶ್ವನಾಥಪ್ಪ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಸರ್ಕಾರದ ಆದೇಶ ಸಂಖ್ಯೆ: ಕಾಇ 224 ಇಟಿಐ 2008 ಬೆಂಗಳೂರು, ದಿನಾಂಕ 9–06–2011ಕ್ಕೆ ಅನುಬಂಧ–1

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ	ನೇಮಕಾತಿ ವಿಧಾನ	ಅರ್ಹತೆ
1	ಅಪರ ರಾಜ್ಯ ಯೋಜನಾ ನಿರ್ದೇಶಕರು (ವೇತನ ಶ್ರೇಣಿ ರೂ. 24,450–31,800)	01	ಉದ್ಯೋಗ ಮತ್ತು ತರಬೇತಿ ಇಲಾಖೆಯ ತರಬೇತಿ ವಿಭಾಗದ ಜಂಟಿ ನಿರ್ದೇಶಕರು (ತರಬೇತಿ) ವೃಂದದಿಂದ ಜೇಷ್ಠತೆ ಮತ್ತು ಅರ್ಹತೆ ಆಧಾರದಿಂದ ಮುಂಬಡ್ತಿ ಮೇರೆಗೆ	ಉದ್ಯೋಗ ಮತ್ತು ತರಬೇತಿ ಇಲಾಖೆಯ ತರಬೇತಿ ವಿಭಾಗದ ಜಂಟಿ ನಿರ್ದೇಶಕರು (ತರಬೇತಿ) ಹುದ್ದೆಯಲ್ಲಿ ಕನಿಷ್ಟ 3 ವರ್ಷಗಳ ಸೇವೆ ಸಲ್ಲಿಸಿರಬೇಕು

ಜೆ.ಎಸ್. ವಿಶ್ವನಾಥಪ್ಪ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಪಿ.ಆರ್. 1535

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ವಸತಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಚನೆ ಕುರಿತು.

ಓದಲಾಗಿದೆ : ಪತ್ರ ಸಂ:ಕವಶಿಸಸ/ಶಿಕ್ಷಣ-1/ಸಿಆರ್-315/2009-10, ದಿ: 13-10-2010.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಸರ್ಕಾರದ ಶಿಕ್ಷಣ ಇಲಾಖೆಯ ಪ್ರಾಥಮಿಕ/ಪ್ರೌಢಶಾಲೆಗಳ ನಿರ್ವಹಣೆಗೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (SDMA) ಇರುವಂತೆ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿಶಾಲೆಗಳಿಗೂ ವಸತಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (Residential School Development and Management Committee) ಯನ್ನು ರಚಿಸಿ ಸಮರ್ಪಕವಾಗಿ ನಿರ್ವಹಣೆ ಮಾಡುವುದು ಅವಶ್ಯಕವೆಂದು ದಿನಾಂಕ 14-12-2010 ರಂದು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಂಘದ 52 ನೇ ಆಡಳಿತ ಮಂಡಳಿಯ ಸಭೆಯಲ್ಲಿ ವಸತಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಚನೆಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಗಿದ್ದು, ಅದರಂತೆ ಪ್ರತಿ ವಸತಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಚಿಸುವ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಅದರಂತೆ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 21 ಮೊದೇಶಾ 2011, ಬೆಂಗಳೂರು, ದಿನಾಂಕ: 31-05-2011

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ (SDMA) ಯನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಮತ್ತು ವಿಧಾನ ಪರಿಷತ್ ಸದಸ್ಯರನ್ನು ಸೇರಿಸಿಕೊಂಡು ವಿಧಾನ ಸಭಾ ಕ್ಷೇತ್ರ ಮಟ್ಟದ ಒಂದು ಸಮಿತಿ ಅಲ್ಲದೇ ಪ್ರತಿ ಶಾಲೆಗೆ ತಹಶೀಲ್ದಾರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

(1) ವಿಧಾನ ಸಭಾ ಕ್ಷೇತ್ರ ಮಟ್ಟದ ಸಮಿತಿ:-

(1)	ಮಾನ್ಯ ವಿಧಾನ ಸಭಾ ಸದಸ್ಯರು	ಅಧ್ಯಕ್ಷರು
(2)	ಮಾನ್ಯ ವಿಧಾನ ಪರಿಷತ್ ಸದಸ್ಯರು (ಆ ವಿಧಾನಸಭಾ ಕ್ಷೇತ್ರದಲ್ಲಿ ವಾಸಿಸುವವರು)	ಸದಸ್ಯರು
(3)	ತಹಶೀಲ್ದಾರರು	ಸದಸ್ಯರು
(4)	ಕ್ಷೇತ್ರ ಶಿಕ್ಷಣಾಧಿಕಾರಿಗಳು	ಸದಸ್ಯರು
(5)	ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್	ಸದಸ್ಯರು
(6)	ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ	ಸದಸ್ಯ ಕಾರ್ಯದರ್ಶಿ (ತಾಲ್ಲೂಕು BC/ST ಅಧಿಕಾರಿಗಳು ಇದ್ದಲ್ಲಿ)
(7)	ಇಬ್ಬರು ವಿದ್ಯಾರ್ಥಿಗಳ ಪೋಷಕರು (ಸದರಿ ಸಮಿತಿ ನಾಮನಿರ್ದೇಶನ ಮಾಡಿಕೊಳ್ಳುವುದು)	ಸದಸ್ಯರು
(8)	ಇಬ್ಬರು ವಸತಿ ಶಾಲೆಗಳ ಪ್ರಾಂಶುಪಾಲರು (ಸದರಿ ಸಮಿತಿ ನಾಮನಿರ್ದೇಶನ ಮಾಡಿಕೊಳ್ಳುವುದು)	ಸದಸ್ಯರು

(2) ವಸತಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ:-
(ಪ್ರತಿಯೊಂದು ಶಾಲೆಗೆ)

(1)	ತಹಶೀಲ್ದಾರರು	ಅಧ್ಯಕ್ಷರು
(2)	ಕ್ಷೇತ್ರ ಶಿಕ್ಷಣಾಧಿಕಾರಿಗಳು	ಸದಸ್ಯರು
(3)	ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ	ಸದಸ್ಯರು
(4)	ತಾಲ್ಲೂಕು ಹಿಂದುಳಿದ ವರ್ಗಗಳ/ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಇದ್ದಲ್ಲಿ	ಸದಸ್ಯರು
(5)	ಇಬ್ಬರು ವಿದ್ಯಾರ್ಥಿಗಳ ಪೋಷಕರು (ಸದರಿ ಸಮಿತಿ ನಾಮ ನಿರ್ದೇಶನ ಮಾಡಿಕೊಳ್ಳುವುದು)	ಸದಸ್ಯರು
(6)	ಇಬ್ಬರು ವಸತಿ ಶಾಲೆಗಳ ವಿದ್ಯಾರ್ಥಿಗಳು (ಸದರಿ ಸಮಿತಿ ನಾಮ ನಿರ್ದೇಶನ ಮಾಡಿಕೊಳ್ಳುವುದು)	ಸದಸ್ಯರು
(7)	ವಸತಿ ಶಾಲೆಯ ಪ್ರಾಂಶುಪಾಲರು	ಸದಸ್ಯರು
(8)	ವಸತಿ ಶಾಲೆಯ ವಾರ್ಡನ್	ಸದಸ್ಯ ಕಾರ್ಯದರ್ಶಿ

ಈ ಮೇಲ್ಕಂಡ ಸಮಿತಿಗಳು ಮುಖ್ಯವಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಬಾಟೆ

ಪಿ.ಆರ್. 1536

ಸರ್ಕಾರದ ಅಧೀನ ಕಾರ್ಯದರ್ಶಿ-3

ಸಮಾಜ ಕಲ್ಯಾಣ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಬೆಂಗಳೂರು ಇದರ ಆಡಳಿತಗಾರರ ಅವಧಿ ವಿಸ್ತರಣೆ ಬಗ್ಗೆ.

ಓದಲಾಗಿದೆ : 1. ಸರ್ಕಾರ ಆದೇಶ ಸಂಖ್ಯೆ ಸಿಒ 80 ಸಿಎಲ್ಎಂ 2010, ದಿನಾಂಕ: 04–05–2010.

2. ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಯುಬಿಸಿ–5/ಮನವಿ/58/ 2006–07, ದಿನಾಂಕ: 05–04–2011.

ಪ್ರಸ್ತಾವನೆ:

ಅಮಾನತ್ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ದಿನಾಂಕ: 31.03.2011ರವರೆಗೆ ವಿಸ್ತರಿಸಿದ್ದು, ಈಗ ಸದರಿ ಅವಧಿಯು ಮುಕ್ತಾಯಗೊಂಡಿರುತ್ತದೆ. ಸದರಿ ಬ್ಯಾಂಕಿನ ಕಾರ್ಯನಿರ್ವಹಣೆ ಕುರಿತು ದಿನಾಂಕ: 24.01.2011ರಂದು ನಡೆದ ಕಾರ್ಯನಿರ್ವಹಣೆ ಸಮಿತಿ ಸಭೆಯಲ್ಲಿ ಆಡಳಿತ ಮಂಡಳಿ ಚುನಾವಣೆ ನಡೆಸಲು ನಿರ್ಣಯಿಸಲಾಗಿ, ಬ್ಯಾಂಕಿನ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಅನುಮತಿ ಕೋರಿದೆ ಹಾಗೂ ಆಡಳಿತ ಮಂಡಳಿ ಚುನಾವಣೆ ನಡೆದು ಹೊಸ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಳ್ಳುವವರೆಗೆ ಅಥವಾ ದಿನಾಂಕ: 01.04.2011 ರಿಂದ ಆರು ತಿಂಗಳವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಡಳಿತಗಾರರ ಅವಧಿಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರ ಮೇರೆಗೆ ವಿಸ್ತರಿಸಲು ಸಹಕಾರ ಸಂಘಗಳ ನಿಬಂಧಕರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 77 ಸಿಎಲ್ಎಂ 2011, ಬೆಂಗಳೂರು, ದಿನಾಂಕ 25–05–2011

ಪ್ರಸ್ತಾವನೆಯಲ್ಲಿ ವಿವರಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ದಿನಾಂಕ: 01.04.2011 ರಿಂದ 30.09.2011ರವರೆಗೆ ವಿಸ್ತರಿಸಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ ಪ್ರಕರಣ 30(1) ಈ ಕೆಳಕಂಡ ಮಾರ್ಪಾಟುಗಳೊಂದಿಗೆ ಅಮಾನತ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದಕ್ಕೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ, ಎಂದರೆ:–

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30 ಉಪಪ್ರಕರಣ (1)ರಲ್ಲಿನ **"ಒಂದು ವರ್ಷ"** ಎಂಬ ಪದಗಳಿಗೆ ಬದಲಾಗಿ **"ಐವತ್ತೆರಡು ತಿಂಗಳು"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ:2) ಪ್ರಕರಣ 30 ಉಪ–ಪ್ರಕರಣ (1) ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 30.09.2011 ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ–30 ಉಪ–ಪ್ರಕರಣ (1)ರಲ್ಲಿನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್. 1537

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಸಾಗರ ಪಟ್ಟಣಕ್ಕೆ ಶರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಲಿಂಗನಮಕ್ಕಿ ರಿಸರ್‌ವಾಯರ್ ಹಿನ್ನೀರಿನಿಂದ ನೀರು ಸರಬರಾಜು ಮಾಡುವ ಯೋಜನೆಯ ಮಾರ್ಗ ಮಧ್ಯದಲ್ಲಿ ಬರುವ ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಅಂದಾಜು ವೆಚ್ಚ ರೂ. 5486.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ:ನಅಇ 42 ಯುಡಬ್ಲ್ಯೂಎಸ್ 2007, ದಿನಾಂಕ: 2–9–2008.

2. ವ್ಯ.ನಿ., ಕನನೀಸ ಒಚಮಂಡಳಿ, ರವರ ಪತ್ರ ಸಂಖ್ಯೆ: ಕಜಮ/ತಾಂತ್ರಿಕ/ಉಮುಅ–(ಇ)/ತಾಂಸ–9/ಸಾಗರ–ನಿ.ಸ.ಯೋ/1998/2008–09, ದಿನಾಂಕ 22.09.08.

3. ವ್ಯ.ನಿ., ಕನನೀಸ ಒಚಮಂಡಳಿ, ರವರ ಪತ್ರ ಸಂಖ್ಯೆ:ಕಜಮ/ತಾಂತ್ರಿಕ/ಉಮುಅ–(ಇ)/ತಾಂಸ 9/ಸಾಗರ–ನಿ.ಸ.ಯೋ/352/2011–12, ದಿನಾಂಕ: 07.05.2011.

4. ಸರ್ಕಾರದ ಆದೇಶ ಸಂಖ್ಯೆ:ನಅಇ 18 ಯುಡಬ್ಲ್ಯೂಎಸ್ 2010, ದಿನಾಂಕ: 07.05.2011.

ಪ್ರಸ್ತಾವನೆ:

ಸಾಗರ ಪಟ್ಟಣಕ್ಕೆ ಶರಾವತಿ ನದಿಯ ಹಿನ್ನೀರಿನಿಂದ ನೀರು ಸರಬರಾಜು ಮಾಡುವ ಯೋಜನೆಯನ್ನು ಅಂದಾಜು ರೂ. 4000.00 ಲಕ್ಷಗಳಲ್ಲಿ ಕನನೀಸ ಮತ್ತು ಒಚ ಮಂಡಳಿಯು ಕೈಗೆತ್ತಿಕೊಳ್ಳಲು ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು. ಸದರಿ ಯೋಜನೆಯ ಮಾರ್ಗಮಧ್ಯದಲ್ಲಿ ಬರುವ 14 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಪ್ರಸ್ತಾವನೆಯನ್ನು ದಿನಾಂಕ: 10–9–2008ರಂದು ನಡೆದ ಸಚಿವ ಸಂಪುಟದ ಇಚ್ಛೆಯಂತೆ ಪ್ರಸ್ತಾವನೆಯನ್ನು ಸಲ್ಲಿಸಲು ಮಂಡಳಿಗೆ ಸೂಚಿಸಲಾಯಿತು.

ಅದರಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ರವರು ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಪ್ರಸ್ತುತ ಯೋಜನೆಯ ಅಂದಾಜು ಪಟ್ಟಿಯನ್ನು ಈ ಹಿಂದೆ ಸಲ್ಲಿಸಿದ್ದ 2007–08ನೇ ಸಾಲಿನ ದರಪಟ್ಟಿಗೆ ಬದಲಾಗಿ 2008–09ನೇ ಸಾಲಿನ ಅಂದರೆ, 2011–12ನೇ ಸಾಲಿಗೆ ಮುಂದುವರೆದ ದರಪಟ್ಟಿಯನ್ನು ಆದರಿಸಿ ತಯಾರಿಸಿರುವ ಪ್ರಯುಕ್ತ ಮತ್ತು ಈ ಹಿಂದೆ ಮಂಡಳಿಯು ಸದರಿ ಯೋಜನೆಗೆ ಅಗತ್ಯವಿರುವ ನೀರನ್ನು ಸಾಗರ ಪಟ್ಟಣದ ಹತ್ತಿರವಿರುವ ಬೆಳ್ಳಣ್ಣೆ ಬಳಿಯಿಂದ ಪಡೆಯಲು ಉದ್ದೇಶಿಸಿ, ಅದರಂತೆ ಅಂದಾಜು ತಯಾರಿಸಿದ್ದು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಸದರಿ ಯೋಜನೆಯ ಮೂಲಕೇಂದ್ರ ಸ್ಥಾವರವನ್ನು ಕಾರ್ಗಲ್ ಅಣೆಕಟ್ಟಿನ ಬಳಿ ಅಂದರೆ,

ಪ್ರಸ್ತಾವಿತ ಬೆಳ್ಳಣ್ಣೆಯಿಂದ ಸುಮಾರು 5.5 ಕಿ.ಮೀ., ದೂರವಿರುವ ಸ್ಥಳಕ್ಕೆ ವರ್ಗಾಯಿಸಬೇಕಾದ್ದರಿಂದ, ಅಂದಾಜು ಪಟ್ಟಿಯನ್ನು ರೂ. 6300.00 ಲಕ್ಷಗಳಿಗೆ ಪರಿಷ್ಕರಿಸಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದರೆ, ಸದರಿ ಯೋಜನೆಯ ಮಾರ್ಗ ಮಧ್ಯದ 14 ಹಳ್ಳಿಗಳ ಪ್ರಾಕ್ಷೇಪಿತ ಜನಸಂಖ್ಯೆಯು ಸುಮಾರು 20689 ಆಗಬಹುದೆಂದು ಅಂದಾಜಿಸಲಾಗಿದ್ದು, ಅದರಂತೆ ತಲಾ ಪರ್‌ಕ್ಯಾಪಿಟಾ ವೆಚ್ಚವಾದ ರೂ. 2000 ರಂತೆ ತನ್ನ ಪಾಲಿನ ವಂತಿಕೆಯಾಗಿ ನೀಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಒಪ್ಪಿದ ಕಾರಣ ಮಂಡಳಿಯು ಮೇಲೆ ಓದಲಾದ ಕ್ರಮಾಂಕ (3)ರ ಪತ್ರದಲ್ಲಿ ಯೋಜನೆಯ ಅಂದಾಜನ್ನು ರೂ. 5486.00 ಲಕ್ಷಗಳಿಗೆ ಮಿತಿಗೊಳಿಸಿ, ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಿ, ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಕರ್ನಾಟಕ ಸರ್ಕಾರದ ಅನುದಾನ ಶೇ. 50	ರೂ. 2536.11 ಲಕ್ಷಗಳು
ಹಣಕಾಸು ಸಂಸ್ಥೆಗಳಿಂದ ಸಾಲ ಶೇ. 50	ರೂ. 2536.11 ಲಕ್ಷಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಂತಿಕೆ	ರೂ. 413.78 ಲಕ್ಷಗಳು
ಒಟ್ಟು	**ರೂ. 5486.00 ಲಕ್ಷಗಳು**

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಮೇಲೆ ಓದಲಾದ ಕ್ರಮಾಂಕ (4)ರ ಆದೇಶದಲ್ಲಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಸಚಿವ ಸಂಪುಟದ ಅನುಮೋದನೆ ನಿರೀಕ್ಷಿಸಿ ತಾತ್ವಿಕ ಅನುಮೋದನೆ ನೀಡಿದೆ.

ಮಂಡಳಿಯ 2010–11ನೇ ಸಾಲಿನ ಕ್ರಿಯಾ ಯೋಜನೆಯನ್ನು ಒಟ್ಟು ರೂ. 961.06 ಕೋಟಿಗಳಿಗೆ ತಯಾರಿಸಿದ್ದು, ಸದರಿ ಕ್ರಿಯಾ ಯೋಜನೆಯಲ್ಲಿ ಈ ಯೋಜನೆಯನ್ನು ಪ್ರವರ್ಗ 'ಸಿ' ಯಡಿಯಲ್ಲಿ ಸೇರಿಸಿ, ರೂ. 2100.00 ಲಕ್ಷಗಳ ಮೊತ್ತವನ್ನು ಅನುವು ಮಾಡಲಾಗಿದೆ.

ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 18 ಯುಡಬ್ಲ್ಯೂಎಸ್ 2010, ಬೆಂಗಳೂರು, ದಿನಾಂಕ 09.06.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಾಗರ ಪಟ್ಟಣಕ್ಕೆ ಶರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಲಿಂಗನಮಕ್ಕಿ ರಿಸರ್‌ವಾಯರ್ ಹಿನ್ನೀರಿನಿಂದ ನೀರು ಸರಬರಾಜು ಮಾಡುವ ಯೋಜನೆಯನ್ನು ರೂ. 4000.00 ಲಕ್ಷಗಳಿಂದ ಯೋಜನೆಯ ಮಾರ್ಗ ಮಧ್ಯದಲ್ಲಿ ಬರುವ 14 ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಯೋಜನೆಯ ಅಂದಾಜನ್ನು ರೂ. 5486.00 ಲಕ್ಷಗಳಿಗೆ (ರೂ. ಐದು ಸಾವಿರದ ನಾಲ್ಕನ್ನೂರ ಎಂಬತ್ತಾರು ಲಕ್ಷಗಳು ಮಾತ್ರ) ಪರಿಷ್ಕರಿಸಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು **"ನಗರ ನೀರು ಸರಬರಾಜು ಯೋಜನೆಯಡಿ"** ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned CMC. The estimate should be reduced to such extent.
2) ETP & contingencies to be restricted to 5%.
3) Resolution of the Local body to bear the project cost should be sought and if any deviations and extra item works or variations should be taken up only after the consent of the Urban Local Body with a condition for the commitment of the ULB for the extra cost.
4) Adequate provision to be made by the Board in the following Years for timely completion of the Project.
5) Tender premium should be approved with the prior consent of the ULB.
6) Escalation charges should be fully borne by the ULB and estimate should be reduced to such extent if any;
7) Water rates as proposed by KUWS&DB have to be implemented to meet O & M cost.
8) KTPP provisions, quality control and timely completion should be ensured.
9) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
10) ಸದರಿ ಕಾಮಗಾರಿಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD/73/Exp-9:2011, ದಿನಾಂಕ: 7.05.2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ

ಪಿ.ಆರ್. 1538

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿಗಳ ಕರ್ತವ್ಯಗಳನ್ನು ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸುವ ಬಗ್ಗೆ.

ಪ್ರಸ್ತಾವನೆ:

ವೈದ್ಯಕೀಯ ಶಿಕ್ಷಣ ಇಲಾಖೆಯು 1978 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪ್ರತ್ಯೇಕಗೊಂಡ ನಂತರ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಿಕೊಂಡು ಬರುತ್ತಿದೆ. ಈ ಇಲಾಖೆಯಲ್ಲಿ ಆಡಳಿತಾತ್ಮಕ ವಿಷಯಗಳ ನಿರ್ವಹಣೆಗಾಗಿ ಒಬ್ಬ ಕರ್ನಾಟಕ ಆಡಳಿತ ಸೇವೆಯ (ಹಿರಿಯ ಶ್ರೇಣಿ) ಅಧಿಕಾರಿಯನ್ನು ಮುಖ್ಯ ಆಡಳಿತಾಧಿಕಾರಿಯನ್ನಾಗಿ ಸರ್ಕಾರವು ಕಾಲಕಾಲಕ್ಕೆ ನೇಮಿಸುತ್ತಿದೆ. ಇಲಾಖೆಯ ಸುಗಮ ಆಡಳಿತ ಹಿತದೃಷ್ಟಿಯಿಂದ ಮುಖ್ಯ ಆಡಳಿತಾಧಿಕಾರಿಯು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸುವ ಅಗತ್ಯತೆಯನ್ನು ಮನಗಂಡು ಸರ್ಕಾರವು ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 64 ಎಂಎಂಇ 2011, ಬೆಂಗಳೂರು, ದಿನಾಂಕ 04-06-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿಯು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಹಾಗೂ ಜವಾಬ್ದಾರಿಗಳನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ.

1. ನಿರ್ದೇಶನಾಲಯದ ಹಾಗೂ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಛೇರಿಗಳ/ ಕಾಲೇಜುಗಳ/ಶಾಲೆಗಳ/ಸಂಸ್ಥೆಗಳ ಎಲ್ಲಾ ಆಡಳಿತಾತ್ಮಕ/ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ/ಸೇವಾ ವಿಷಯಗಳಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
2. ಪ್ಯಾರಾ ಮೆಡಿಕಲ್ ಬೋರ್ಡ್/ಕರ್ನಾಟಕ ಶುಶ್ರೂಷಾ ಪರಿಷತ್/ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿಯ ವಿಷಯಗಳಿಗೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
3. ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳುವ ಎಲ್ಲಾ ಕಾಮಗಾರಿಗಳ ಆಡಳಿತಾತ್ಮಕ ಅನುಮೋದನೆಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
4. ನಿರ್ದೇಶನಾಲಯದ ಎಲ್ಲಾ ವಾಹನಗಳ ಸಂಪೂರ್ಣ ನಿರ್ವಹಣೆಯ ವಿಷಯಗಳ ಕಡತಗಳನ್ನು ಪರಿಶೀಲಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
5. ನಿರ್ದೇಶನಾಲಯದ ಮತ್ತು ನಿರ್ದೇಶನಾಲಯದ ಆಡಳಿತ ವ್ಯಾಪ್ತಿಯಲ್ಲಿನ ಎಲ್ಲಾ ಆಸ್ಪತ್ರೆಗಳ/ಸಂಸ್ಥೆಗಳ ಅವಶ್ಯಕತೆಗನುಗುಣವಾಗಿ ಉಪಕರಣಗಳ/ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ/1999 ಮತ್ತು ಸಂಬಂಧಿತ ನಿಯಮಗಳು, 2000 ರನ್ವಯ ಪರಿಶೀಲಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
6. ನಿರ್ದೇಶನಾಲಯದ ಯೋಜನಾ ಶಾಖೆಯಲ್ಲಿ ನಿರ್ವಹಿಸಲಾಗುವ ಎಂಎಂಆರ್/ಎಂಪಿಕ್/ಕೆಡಿಪಿ/ವಾರ್ಷಿಕ ವರದಿ/ಕಾರ್ಯ ನಿರ್ವಹಣಾ ಆಯವ್ಯಯ ಇತ್ಯಾದಿ ವಿಷಯಗಳ ಕಡತಗಳನ್ನು ಪರಿಶೀಲಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
7. ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ತಯಾರಿಸತಕ್ಕದ್ದು.
8. ನಿರ್ದೇಶನಾಲಯದ ಸಿಬ್ಬಂದಿಯ ಮಾಸಿಕ ಸಭೆಯನ್ನು ಏರ್ಪಡಿಸುವುದು, ಪ್ರಗತಿ ಪರಿಶೀಲನೆ ನಡೆಸುವುದು, ಬಾಕಿ ಕಡತಗಳ ಮತ್ತು ಪತ್ರಗಳ ವಿಲೇವಾರಿಯ ಪರಾಮರ್ಶೆ ಮಾಡುವುದು ಹಾಗೂ ಅವುಗಳ ತ್ವರಿತ ವಿಲೇವಾರಿಗೆ ಸಂಬಂಧಪಟ್ಟಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
9. ವಿಧಾನ ಮಂಡಲದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಕಡತಗಳನ್ನು ಅಂದರೆ, ಭರವಸೆಗಳು, ಪ್ರಶ್ನೆಗಳಿಗೆ ಉತ್ತರಗಳನ್ನು ಪೂರಕ ಟಿಪ್ಪಣಿಯೊಂದಿಗೆ ತಯಾರಿಸುವುದು. ಇತ್ಯಾದಿಗಳ ಬಗ್ಗೆ ಪರಿಶೀಲಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
10. ಎಲ್ಲಾ ನ್ಯಾಯಾಲಯ ಪ್ರಕರಣಗಳ/ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಪ್ರಕರಣಗಳ ಕಡತಗಳನ್ನು ಪರಿಶೀಲಿಸಿ, ಕಂಡಿಕೆವಾರು ಉತ್ತರಗಳನ್ನು ತಯಾರಿಸಿ ಕಾಲಕಾಲಕ್ಕೆ ಹಿಂಬಾಲಿಕ ಕ್ರಮವನ್ನು ಕೈಗೊಂಡು ನಿರ್ದೇಶಕರಿಗೆ ಮಾಹಿತಿಯನ್ನು ಒದಗಿಸತಕ್ಕದ್ದು.
11. ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕರಿಸಲ್ಪಡುವ/ವರ್ಗಾಯಿಸಲ್ಪಡುವ ಅರ್ಜಿಗಳ ನಿರ್ವಹಣೆ ಮತ್ತು ನಿಗದಿತ ಅವಧಿಯೊಳಗಾಗಿ ಉತ್ತರಗಳನ್ನು ನೀಡಲು ಕ್ರಮ ಕೈಗೊಳ್ಳತಕ್ಕದ್ದು.
12. ಮಾನವ ಹಕ್ಕು ಆಯೋಗದ ವಿಷಯಗಳ ಕಡತಗಳನ್ನು ಪರಿಶೀಲಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.
13. ಮಹಾಲೇಖಪಾಲರ ತಪಾಸಣಾ ವರದಿಗಳಿಗೆ/ಆಡಿಟ್ ವರದಿಗಳಿಗೆ/ಸಿಏಜಿ ವರದಿಗಳಿಗೆ ಕಂಡಿಕೆವಾರು ಉತ್ತರಗಳನ್ನು ತಯಾರಿಸಿ ನಿರ್ದೇಶಕರ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳತಕ್ಕದ್ದು.
14. ಸಚಿವಾಲಯದ ವೈದ್ಯಕೀಯ ಶಿಕ್ಷಣ ಶಾಖೆಯಿಂದ ಕಾಲಕಾಲಕ್ಕೆ ವಹಿಸುವ ಕರ್ತವ್ಯಗಳನ್ನು ನಿರ್ವಹಿಸಿ ವರದಿಯನ್ನು ಸರ್ಕಾರಕ್ಕೆ ನೇರವಾಗಿ ಸಲ್ಲಿಸತಕ್ಕದ್ದು.

2. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಶಾಖೆಗಳ ಸಿಬ್ಬಂದಿ ವರ್ಗದವರು ಹಾಗೂ ತಳ ಹಂತದ ಅಧಿಕಾರಿಗಳು ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಆಯಾ ಶಾಖೆಗಳ ಎಲ್ಲಾ ಕಡತಗಳನ್ನು ಮುಖ್ಯ ಆಡಳಿತಾಧಿಕಾರಿಯವರ ಮುಖಾಂತರವೇ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

3. ನಿರ್ದೇಶನಾಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ತುರ್ತು ಸಂದರ್ಭಗಳಲ್ಲಿ ನಿರ್ದೇಶಕರ ಅನುಪಸ್ಥಿತಿಯಲ್ಲಿ ನಿರ್ದೇಶಕರ ಪರವಾಗಿ ದಿನನಿತ್ಯ ಪತ್ರವ್ಯವಹಾರ ನಡೆಸಲು ಮತ್ತು ಅಂತಹ ಕ್ರಮಕ್ಕೆ ನಿರ್ದೇಶಕರ ಘಟನೋತ್ತರ ಅನುಮೋದನೆ ಪಡೆಯಲು ಮುಖ್ಯ ಆಡಳಿತಾಧಿಕಾರಿಗೆ ಅಧಿಕಾರವನ್ನು ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ಸಾಯಿಬಾಬಾ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ವೈದ್ಯಕೀಯ ಶಿಕ್ಷಣ)

ಪಿ.ಆರ್. 1539

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರ ವಿರುದ್ಧ ದಾಖಲಾದ 'ಅಕ್ರಮ ಆಸ್ತಿ ಹೊಂದಿರುವ' ಪ್ರಕರಣದ ಪರಿಷ್ಕೃತ ಅಭಿಯೋಜನಾ ಆದೇಶ ಕುರಿತು.

ಓದಲಾಗಿದೆ :
1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಎಂ-15/ಸಿಆರ್-5/2008/ಮಂಗಳೂರು, ದಿನಾಂಕ 11.02.2011.
2. ತನಿಖಾಧಿಕಾರಿಯವರ ಅಂತಿಮ ವರದಿ ದಿನಾಂಕ 22-01-2011.
3. ತನಿಖಾ ದಾಖಲೆಗಳಾದ ಪ್ರಥಮ ವರ್ತಮಾನ ವರದಿ, ಶೋಧನಾ ಪಂಚನಾಮೆಗಳು, ಸಾಕ್ಷಿದಾರರ ಹೇಳಿಕೆಗಳು ಮತ್ತು ತನಿಖಾಧಿಕಾರಿಯ ಅಂತಿಮ ವರದಿಯ ಕಡತಗಳು.
4. ಸರ್ಕಾರಿ ಆದೇಶ ಸಂಖ್ಯೆ ; ಆಇ 56 ವಾತೆತ 2008, ದಿನಾಂಕ 02-05-2011.
5. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಎಂ-15/ಸಿಆರ್-5/2008/ಮಂಗಳೂರು, ದಿನಾಂಕ 20.05.2011.

ಪ್ರಸ್ತಾವನೆ :

ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರ ವಿರುದ್ಧ ಗುನ್ನೆ ಸಂಖ್ಯೆ : 05/2008 ರಲ್ಲಿ ಆರಕ್ಷಕ ಅಧೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು, ಇಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರು ತಮ್ಮ ಪತ್ರ ದಿನಾಂಕ 11-02-2011 ರೊಡನೆ ಕಳುಹಿಸುತ್ತಾ, ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಮಂಜೂರಾತಿಗಾಗಿ ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (1)ರ ಪತ್ರದೊಡನೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

I. ಪ್ರಥಮ ವರ್ತಮಾನ ವರದಿ ದಿನಾಂಕ 10-09-2008.

II. ಶೋಧನಾ ಪಂಚನಾಮೆ

1) ಮನೆ ನಂ. 7-4-478/7, 'ಕಾಂತಾಯ' ಮಠದಕಣಿ ರಸ್ತೆ, ಸಿಂಡಿಕೇಟ್ ಬ್ಯಾಂಕಿನ ಹತ್ತಿರ, ಬೋಳೂರು ಗ್ರಾಮ, ಮಂಗಳೂರು ನಗರ, ದಿನಾಂಕ 11-09-2008.

2) ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರ (ಆಡಿಟ್), ಮಂಗಳೂರು, ಕೆಲಸ ನಿರ್ವಹಿಸುತ್ತಿದ್ದ ಕಛೇರಿಯ ಕೊಠಡಿ, ದಿನಾಂಕ 11-09-2008.

3) ಆರೋಪಿತರ ಪತ್ನಿ ಶ್ರೀಮತಿ ಗಾಯತ್ರಿರವರ ಹೆಸರಿನಲ್ಲಿರುವ ಮೂಡಬಿದ್ರೆ ಹೋಬಳಿಯ ಪಡುಕೋಣಾಜೆಯ ಗೌರಿಶಂಕರ ತೋಟದ ಮನೆ. ದಿನಾಂಕ 11-09-2008.

4) ಆರೋಪಿತರ ದೂರದ ಸಂಬಂಧಿ ಶ್ರೀ ದಾಸು ಪೂಜಾರಿರವರು ವಾಸವಾಗಿರುವ ಪಾಲಡ್ಕ ಗ್ರಾಮದ ಮೂಡಾಯಿಬೆಟ್ಟು ಮನೆ. ದಿನಾಂಕ 11-09-2008.

5) ಆರೋಪಿತರಿಗೆ ಸಂಬಂಧಿಸಿದ ಮಂಗಳೂರು ತಾಲ್ಲೂಕು ಮೂಡಬಿದ್ರೆ ಹೋಬಳಿ, ನೆಲ್ಲಿಕಾರು ಗ್ರಾಮ ಡೆಂಜಾರು, ಹೊಸ್ಮಾರು ತೋಟ ಮತ್ತು ತೋಟದ ಮನೆ ದಿನಾಂಕ 11-09-2008.

III. ತನಿಖಾಧಿಕಾರಿಯ ಅಂತಿಮ ವರದಿ ದಿನಾಂಕ 22-01-2011.

IV. ತನಿಖೆಯ ಅಂತಿಮ ವರದಿಯ ಕಡತ.

ಪಂಚ ಸಾಕ್ಷಿದಾರರು :-

1) ಕು. ಕಿರಣ್ ಪ್ರ.ದ.ಸ., ಸರ್ಕಾರಿ ಪದವಿಪೂರ್ವ ಕಾಲೇಜು, ಕಾರ್ ಸ್ಟ್ರೀಟ್ಸ್, ಮಂಗಳೂರು.
2) ಶ್ರೀ ಎಸ್.ಆರ್. ರಾಜಗೋಪಾಲ್, ದ್ವಿ.ದ.ಸ., ತಾಲ್ಲೂಕು ಆಫೀಸ್, ಮಂಗಳೂರು.
3) ಶ್ರೀ ಪಿ. ದೀಪಕ್, ಪ್ರ.ದ.ಸ., ಸರ್ಕಾರಿ ಪ್ರಾಕ್ಟೀಸಿಂಗ್ ಹೈಸ್ಕೂಲ್, ಮಂಗಳೂರು.
4) ಶ್ರೀಮತಿ ಭಾರತಿ, ವ್ಯವಸ್ಥಾಪಕರು, ತಾಲ್ಲೂಕು ಪಂಚಾಯತ್, ಮಂಗಳೂರು.
5) ಶ್ರೀ ರಾಮಕೃಷ್ಣ ನಾಯಕ್, ಪ್ರ.ದ.ಸ., ತಾಲ್ಲೂಕು ಪಂಚಾಯತ್, ಮಂಗಳೂರು.
6) ಶ್ರೀ ವಿಶ್ವನಾಥ್ ಆರ್. ತೋಟದ, ದ್ವಿ.ದ.ಸ., ಸಮೂಹ ಸಹಾಯಕ ಶಿಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು.
7) ಶ್ರೀಮತಿ ಮೀನಾಕ್ಷಿ ಎಂ.ಎಸ್. ಜಿಲ್ಲಾ ಉದ್ಯೋಗ ವಿನಿಮಯಾಧಿಕಾರಿಗಳ ಕಛೇರಿ, ಲಾಲ್‌ಬಾಗ್, ಮಂಗಳೂರು.
8) ಶ್ರೀ ಕೆ. ಸುಧಾಕರ, ಪ್ರ.ದ.ಸ., ತಾಲ್ಲೂಕು ಕಛೇರಿ, ಮಂಗಳೂರು.
9) ಶ್ರೀಮತಿ ಗ್ರೆಟ್ಟಾ ಐರೀನ್ ಮಸ್ಕರೇನಸ್, ದ್ವಿ.ದ.ಸ., ತಾಲ್ಲೂಕು ಕಛೇರಿ, ಮಂಗಳೂರು.
10) ಶ್ರೀ ಕೆ. ಸುಧಾಕರ, ಪ್ರ.ದ.ಸ., ತಾಲ್ಲೂಕು ಕಛೇರಿ, ಮಂಗಳೂರು.

ಪರಿಶೀಲನಾ ಅವಧಿ ದಿನಾಂಕ 03–03–1997 ರಿಂದ 11–09–2008 ರವರೆಗೆ ಆರೋಪಿತರು ಮತ್ತು ಅವರ ಕುಟುಂಬ ವರ್ಗದವರ ಹೆಸರಿನಲ್ಲಿರುವ ಆಸ್ತಿಯ ವಿವರಗಳು

ಕ್ರ. ಸಂ.	ವಿವರ	ಮೊತ್ತ ರೂ.ಗಳಲ್ಲಿ	ಆಸ್ತಿಯು ಯಾರ ಹೆಸರಿನಲ್ಲಿದೆ
1	ಮುಡಾಯಿಬೆಟ್ಟು ಮನೆ, ಪಾಲಡ್ಕ ಗ್ರಾಮ, ದ.ಕ. ಜಿಲ್ಲೆ, ಸರ್ವೆ ನಂ. 5–4 ಪಿ 2 ರಲ್ಲಿ 0–62 ಎಕರೆ, 5–5ಪಿ2 ರಲ್ಲಿ 0–46 ಎಕರೆ, 5–7 ರಲ್ಲಿ 1–17 ಎಕರೆ ಸ.ನಂ. 11–4 ರಲ್ಲಿ 1–31 ಎಕರೆ, 5–6 ಪಿ 4 ರಲ್ಲಿ 4–41 ಎಕರೆ ಒಟ್ಟು 7–96 ಎಕರೆ ಸಾಗುವಳಿ ಜಮೀನು	–	ಆರೋಪಿರವರ ದೂರದ ಸಂಬಂಧಿ ಶ್ರೀ ದಾಸುಪೂಜಾರಿ ರವರ ಅನುಭೋಗದಲ್ಲಿರುತ್ತದೆ.
2	ಮಂಗಳೂರು ನಗರದ ಬೋಳೂರು ಗ್ರಾಮದ ಸರ್ವೆ ನಂ. 237/1 ರಲ್ಲಿನ ಜಾಗದಲ್ಲಿ ಕಟ್ಟಿರುವ ಮೂರು ಅಂತಸ್ತಿನ ಮನೆ.	10,88,209–00	–
3	ಮೇಲಿನ ಮನೆಗೆ ವಿದ್ಯುತ್ ಜೋಡಣೆಯ ಖರ್ಚು	1,11,886–00	–
4	ಮೂಡಬಿದ್ರೆ ಪಡುಕೋಣಾಜೆ ಗ್ರಾಮದಲ್ಲಿ ಖರೀದಿಸಿರುವ 6.87 ಎಕರೆ ತೋಟ	9,24,448–00	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
5	ಪಡುಕೋಣಾಜೆ ಗ್ರಾಮದಲ್ಲಿನ ಸರ್ವೆ ನಂ. 56/3, 56/4ಪಿ2, 56/4ಬಿ2 ರಲ್ಲಿ ಒಟ್ಟು 1.16 ಎಕರೆ ಕೃಷಿ ಭೂಮಿ	92,000–00	
6	ಮೂಡಬಿದ್ರೆ ಪಡುಕೋಣಾಜೆ ಗ್ರಾಮದ ಗೌರಿಶಂಕರ ತೋಟದಲ್ಲಿ ನಿರ್ಮಿಸಿರುವ ಎರಡು ಕಟ್ಟಡಗಳು	9,87,960–00	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
7	ಮೇಲಿನ ಮನೆಗೆ ವಿದ್ಯುತ್ ಜೋಡಣೆಯ ಖರ್ಚು	82,436–00	
8	ಮಂಗಳೂರು ತಾಲ್ಲೂಕು ಪದವಿನಂಗಡಿ ಗ್ರಾಮದ ಸರ್ವೇ ನಂ. 8–1/ಬಿ–1 ರಲ್ಲಿನ 6.50 ಸೆಂಟ್ಸ್ ಸ್ಥಳ ಮೌಲ್ಯ ರೂ.65000/–		ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
9	ಕಾರ್ಪೋರೇಷನ್ ಬ್ಯಾಂಕ್, ಪಾಂಡೇಶ್ವರ, ಮಂಗಳೂರು, ಎಸ್.ಬಿ. ಖಾತೆ ಸಂಖ್ಯೆ : 24907 ನಲ್ಲಿರುವ ಬ್ಯಾಲೆನ್ಸ್ ಮೊತ್ತ	08–00	ಆರೋಪಿತರ ಹೆಸರಿನಲ್ಲಿದೆ
10	ವಿಜಯ ಬ್ಯಾಂಕ್ ಬೊಂದೇಲ್ ಬ್ರಾಂಚ್‌ನಲ್ಲಿ ಖಾತೆ ಸಂಖ್ಯೆ : 10340 ನಲ್ಲಿರುವ ಬ್ಯಾಲೆನ್ಸ್ ಮೊತ್ತ	1,054–00	ಆರೋಪಿತರ ಮಗ ಅದಿತ್ ಡಿ.ಜಿ.ರವರ ಹೆಸರಿನಲ್ಲಿದೆ
11	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಜನತಾ ಬಜಾರ್ ಬ್ರಾಂಚ್, ಮಂಗಳೂರು ಎಸ್.ಬಿ. ಖಾತೆ ಸಂಖ್ಯೆ : 0119005638 ನಲ್ಲಿರುವ ಬ್ಯಾಲೆನ್ಸ್ ಮೊತ್ತ	9,332–00	ಆರೋಪಿತರ ಹೆಸರಿನಲ್ಲಿದೆ
12	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಜನತಾ ಬಜಾರ್ ಬ್ರಾಂಚ್, ಮಂಗಳೂರು ಎಸ್.ಬಿ. ಖಾತೆ ಸಂಖ್ಯೆ : 54038550700 ನಲ್ಲಿರುವ ಬ್ಯಾಲೆನ್ಸ್ ಮೊತ್ತ	2,760–18	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
13	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಂಪನ ಕಟ್ಟೆ, ಮಂಗಳೂರು ಎಸ್.ಬಿ. ಖಾತೆ ಸಂಖ್ಯೆ : 30018569757 ನಲ್ಲಿರುವ ಬ್ಯಾಲೆನ್ಸ್ ಮೊತ್ತ	4,951–00	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
14	ಮಂಗಳೂರು ತಾಲ್ಲೂಕು ಪ್ರಾಥಮಿಕ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ. ಮಂಗಳೂರು ಎಸ್.ಬಿ. ಖಾತೆ ಸಂಖ್ಯೆ : 001336 ನಲ್ಲಿರುವ ಬ್ಯಾಲೆನ್ಸ್ ಮೊತ್ತ	250–00	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
15	ಕಲ್ಲಬೆಟ್ಟು ಸೇವಾ ಬ್ಯಾಂಕ್ ನಿಯಮಿತ ಮೂಡಬಿದ್ರೆ ಖಾತೆ ನಂ. 2176 ರಲ್ಲಿ ಬ್ಯಾಲೆನ್ಸ್ ಮೊತ್ತ	24,855–10	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
16	ಸಿಂಡಿಕೇಟ್ ಬ್ಯಾಂಕ್, ಅಶೋಕನಗರ ಬ್ರಾಂಚ್ ಅಕೌಂಟ್ ನಂ. 01872190000201 ನಲ್ಲಿ ಬ್ಯಾಲೆನ್ಸ್ ಮೊತ್ತ	10,430–33	ಆರೋಪಿತರ ಮಗ ಅದಿತ್ ಡಿ.ಜಿ.ರವರ ಹೆಸರಿನಲ್ಲಿ
17	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಂದರು ರಸ್ತೆ, ಮಂಗಳೂರು ಎಸ್.ಬಿ. ಖಾತೆ ಸಂಖ್ಯೆ : 10981154574 ರಲ್ಲಿ ಬ್ಯಾಲೆನ್ಸ್ ಮೊತ್ತ	2,52,663–76	ಆರೋಪಿತರ ಹೆಸರಿನಲ್ಲಿದೆ
18	ದಿ ಸೌತ್ ಕೆನರಾ ಗವರ್ನ್‌ಮೆಂಟ್ ಆಫೀಸರ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಡೊಂಗರಕೇರಿ, ಮಂಗಳೂರು ಎಸ್.ಬಿ. ಖಾತೆ ಸಂಖ್ಯೆ : 3794 ನಲ್ಲಿರುವ ಬ್ಯಾಲೆನ್ಸ್ ಮೊತ್ತ	1,320–00	
19	ದಿ ಸೌತ್ ಕೆನರಾ ಗವರ್ನ್‌ಮೆಂಟ್ ಆಫೀಸರ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಡೊಂಗರಕೇರಿ, ಮಂಗಳೂರು ಕಡ್ಡಾಯ ಠೇವಣಿ ಖಾತೆ	3,040–00	
20	ಎನ್.ಎಸ್.ಸಿ. ಗಾಗಿ ತೊಡಗಿಸಿರುವ ಮೊತ್ತ	2,60,000–00	ಆರೋಪಿತರ ಹೆಸರಿನಲ್ಲಿ

21	ಸಬ್‌ಪೋಸ್ಟ್ ಕಛೇರಿ, ಕಾರ್‌ಸ್ಟ್ರೀಟ್ ಮಂಗಳೂರು ಆರ್.ಡಿ. ಖಾತೆ ನಂ. 5405777 ರಲ್ಲಿ ತೊಡಗಿಸಿರುವ ಮೊತ್ತ	30,000–00	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
22	ಆರ್.ಡಿ. ಖಾತೆ ನಂ. 5411254 ರಲ್ಲಿ ತೊಡಗಿಸಿರುವ ಮೊತ್ತ	1,000–00	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
23	ಆರ್.ಡಿ. ಖಾತೆ ನಂ. 5404316 ರಲ್ಲಿ ತೊಡಗಿಸಿರುವ ಮೊತ್ತ	6,000–00	ಆರೋಪಿತರ ಮಗ ಮೋಹಿತ್‌ಚಂದ್ರರವರ ಹೆಸರಿನಲ್ಲಿ
24	ಆರ್.ಡಿ. ಖಾತೆ ನಂ. 5410389 ರಲ್ಲಿ ತೊಡಗಿಸಿರುವ ಮೊತ್ತ	7,000–00	ಆರೋಪಿತರ ಮಗ ಅದಿತ್ ಡಿ.ಜಿ.ರವರ ಹೆಸರಿನಲ್ಲಿ
25	ಆರ್.ಡಿ. ಖಾತೆ ನಂ. 5410390 ರಲ್ಲಿ ತೊಡಗಿಸಿರುವ ಮೊತ್ತ	7,000–00	ಆರೋಪಿತರ ಮಗ ಮೋಹಿತ್‌ಚಂದ್ರರವರ ಹೆಸರಿನಲ್ಲಿ
26	ಕ್ಯಾನ್‌ಫಿನ್ ಹೋಮ್ಸ್, ಮಂಗಳೂರು ಆರ್.ಡಿ. ಖಾತೆ ನಂ. ಹೆಚ್‌ಎಲ್‌ಎ–59 ರಲ್ಲಿ ಜಮಾ ಮಾಡಿರುವ ಮೊತ್ತ	89,000–00	ಆರೋಪಿತರ ಹೆಸರಿನಲ್ಲಿ
27	ಕ್ಯಾಪಿಟಲ್ ಗೈನ್ ಟ್ಯಾಕ್ಸ್ ಎಕ್ಸೆಂಪ್ಷನ್ ಬಾಂಡ್	2,80,000–00	ಆರೋಪಿತರ ಹೆಸರಿನಲ್ಲಿ
28	ಕಲ್ಲಬೆಟ್ಟು ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಇದರಲ್ಲಿ ತೊಡಗಿಸಿರುವ ಷೇರು ಮೊತ್ತ	1,000–00	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
29	ದಿ ಸೌತ್ ಕೆನರಾ ಗವರ್ನ್‌ಮೆಂಟ್ ಆಫೀಸರ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಡೊಂಗರಕೇರಿ, ಮಂಗಳೂರು ಇಲ್ಲಿ ಖಾತೆ ನಂ. 13348 ರಲ್ಲಿ ಪಾಲು ಬಂಡವಾಳ	10,000–00	ಆರೋಪಿತರ ಹೆಸರಿನಲ್ಲಿ
30	ಮಂಗಳೂರು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ. ಮಂಗಳೂರು ಇದರಲ್ಲಿ ಹೊಂದಿರುವ ಷೇರು ಮೊತ್ತ	14,200–00	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ
31	ನ್ಯಾಷನಲ್ ಫೆಡರೇಷನ್ ಆಫ್ ಬ್ಲೈಂಡ್‌ಗೆ ಕಟ್ಟಿದ ಹಣ	26,100–00	ಆರೋಪಿತರ ಹೆಸರಿನಲ್ಲಿ
32	ಎಸ್.ಬಿ.ಐ. ಮ್ಯಾಗ್ನಂ ಟ್ಯಾಕ್ಸ್ ಗೈನ್ ಸ್ಕೀಮ್‌ಗೆ ಕಟ್ಟಿದ ಹಣ	20,000–00	ಆರೋಪಿತರ ಹೆಸರಿನಲ್ಲಿ
33	ಸಿಂಡಿಕೇಟ್ ಬ್ಯಾಂಕ್, ಅಶೋಕನಗರ ಬ್ರಾಂಚ್, ಮಂಗಳೂರು, 405–ವಿಕಾಸ್ ಕ್ಯಾಶ್ ಸರ್ಟಿಫಿಕೇಟ್ ಖಾತೆಯಲ್ಲಿ ತೊಡಗಿಸಿದ ಮೊತ್ತ	15,000–00	ಆರೋಪಿತರ ಮಗ ಅದಿತ್ ಡಿ.ಜಿ.ರವರ ಹೆಸರಿನಲ್ಲಿ
34	ಐಸಿಐಸಿಐ ಟ್ಯಾಕ್ಸ್ ಸೇವಿಂಗ್ ಬಾಂಡ್‌ಗೆ ತೊಡಗಿಸಿದ ಮೊತ್ತ	10,000–00	
35	ಕೆಎ 19 ಯು 8989 ಹೊಂಡಾ ಆಕ್ಟಿವಾ ದ್ವಿಚಕ್ರ ವಾಹನ	37,452–00	
36	ಕೆಎ 19 ಪಿ 5989 ಮಾರುತಿ ಆಲ್ಟೋ ಕಾರು	3,04,793–00	
37	ಮನೆ ಶೋಧನೆ ಸಮಯ ದೊರೆತ ಒಟ್ಟು ನಗದು ಹಣ	15,440–00	
38	ಚಿನ್ನಾಭರಣ	2,53,648–00	
39	ಮಹಜರು ಸಮಯ ದೊರೆತ ಬೆಳ್ಳಿ ವಸ್ತುಗಳು (ಸ್ತ್ರೀಧನ ಹಾಗೂ ಉಡುಗೊರೆ) ಒಟ್ಟು 1552.20 ಗ್ರಾಂ.	–	
40	ಮಂಗಳೂರು ಮಠದ ಕಣೆ ರಸ್ತೆಯ ಕಾಂತಾಯಾ ಮನೆಯಲ್ಲಿ ಮಹಜರು ಸಮಯ ದೊರೆತ ವಸ್ತುಗಳು	6,49,174–00	
41	ಕಡುಕೋಣಾಜೆಯಲ್ಲಿರುವ ತೋಟದ ಮನೆಯಲ್ಲಿ ಮಹಜರು ಸಮಯ ದೊರೆತ ವಸ್ತುಗಳು	2,96,244–00	
	ಒಟ್ಟು ರೂ.	**59,30,614–37**	

ಆರೋಪಿತರಾದ ಶ್ರೀ ದಯಾನಂದ ಪೂಜಾರಿ ಮತ್ತು ಅವರ ಕುಟುಂಬದವರ ಹೆಸರಿನಲ್ಲಿರುವ ಆದಾಯದ ವಿವರಗಳು

ಕ್ರಮ ಸಂಖ್ಯೆ	ಆದಾಯದ ಮೂಲಗಳು	ರೂ.ಗಳು
1	ಸಂಬಳದ ಆದಾಯ ಅಂದಾಜು (ನಿವ್ವಳ ವೇತನ)	13,69,262–00
2	ಕೃಷಿ ಆದಾಯ ಮತ್ತು ಇತರೇ ಆದಾಯಗಳು	30,41,247–08
	ಒಟ್ಟು ರೂ.	**44,10,509–08**

ಆರೋಪಿತರಾದ ಶ್ರೀ ದಯಾನಂದ ಪೂಜಾರಿ ಮತ್ತು ಅವರ ಕುಟುಂಬದವರ ಖರ್ಚಿನ ವಿವರಗಳು

ಕ್ರ. ಸಂ.	ಖರ್ಚಿನ ವಿವರಗಳು	ರೂ.ಗಳಲ್ಲಿ
1	ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿರುವ ಜೀವವಿಮಾ ಪಾಲಿಸಿ ಸಂಖ್ಯೆ : 6248104444ರ ಮೇಲೆ ಪಾವತಿಸಿರುವ ಮೊತ್ತ	56,904–00
2	ಆರೋಪಿತರ ಮಗ ಶ್ರೀ ಮೋಹಿತ್‌ಚಂದ್ರರವರ ಹೆಸರಿನಲ್ಲಿ ಇನ್ಸೂರೆನ್ಸ್ ಪಾಲಿಸಿ ಸಂಖ್ಯೆ 624853346ರ ಮೇಲೆ ಪಾವತಿಸಿರುವ ಪ್ರೀಮಿಯಮ್ ಮೊತ್ತ	20,000–00
3	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿರುವ ಇನ್ಸೂರೆನ್ಸ್ ಪಾಲಿಸಿ ಸಂಖ್ಯೆ 622501381ರ ಮೇಲೆ ಪಾವತಿಸಿರುವ ಪ್ರೀಮಿಯಮ್ ಮೊತ್ತ	11,277–00
4	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಂಪನಕಟ್ಟೆ ಬ್ರಾಂಚ್‌ನಲ್ಲಿ ಪಡೆದಿರುವ ಸಾಲಕ್ಕೆ ಎಸ್.ಬಿ.ಐ. ಜೀವವಿಮಾ ಇನ್ಸೂರೆನ್ಸ್ ಪಾಲಿಸಿ ಮೇಲೆ ಕಂತು ಪಾವತಿ	31,517–00
5	ಆರೋಪಿತರು ಐಸಿಐಸಿಐ ಪ್ರೊಡೆನ್ಷಿಯಲ್ ಜೀವವಿಮಾ ಪಾಲಿಸಿ ಸಂಖ್ಯೆ 00321510ಕ್ಕೆ ತೊಡಗಿಸಿದ ಮೊತ್ತ	60,000–00
6	ಆರೋಪಿತರು ಪ್ರತ್ಯೇಕವಾಗಿ ಆದಾಯ ತೆರಿಗೆ ಪಾವತಿಸಿದ ಮೊತ್ತ	4,614–00
7	ಆರೋಪಿತರು ಮನೆ ತೆರಿಗೆ ಸಂಬಂಧ ಪಾವತಿಸಿದ ತೆರಿಗೆ ಮೊತ್ತ	9,604–00
8	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿರುವ ಪಡುಕೋಣಾಜೆ ಗ್ರಾಮದ ಮನೆಯ ಬಾಬ್ತು ಪಾವತಿ ಮಾಡಿದ ತೆರಿಗೆ ಮೊತ್ತ	517–00
9	ಆರೋಪಿತರ ಮನೆ ನೀರಿನ ಬಾಬ್ತು ಬಿಲ್ ಪಾವತಿಸಿದ ಮೊತ್ತ	7,470–00
10	ಕೆಎ –19 ಯು –8989 ಹೊಂಡಾ ಆಕ್ಟಿವಾ ವಾಹನಕ್ಕೆ ವಿಮಾ ಕಂತು ಪಾವತಿಸಿದ ಮೊತ್ತ	1,578–00
11	ಕೆಎ –19 –ಯು –8989 ಹೊಂಡಾ ಆಕ್ಟಿವಾ ನೋಂದಣಿ ಸಮಯ ಪಾವತಿಸಿದ ಮೊತ್ತ	2,944–00
12	ಕೆಎ –19 –ಪಿ 5989 ಮಾರುತಿ ಆಲ್ಟೋ ಕಾರಿನ ನೋಂದಣಿ ಸಮಯ ಪಾವತಿಸಿದ ಒಟ್ಟು ಮೊತ್ತ	30,475–00
13	ಕೆಎ –19 –ಯು –8989 ಹೊಂಡಾ ಆಕ್ಟಿವಾ ವಾಹನದ ನಿರ್ವಹಣಾ ವೆಚ್ಚ	27,400–00
14	ಕೆಎ –19– ಪಿ –5989 ಮಾರುತಿ ಆಲ್ಟೋ ಕಾರಿನ ನಿರ್ವಹಣಾ ವೆಚ್ಚ	87,380–00
15	ಕೆಎ –19– ಪಿ– 5989 ಕಾರನ್ನು ಖಾಸಗಿಯಾಗಿ ದುರಸ್ಥಿ ಮಾಡಿಸಿದ ವೆಚ್ಚ	14,550–00
16	ಕೆಎ –25 ಕ್ಯೂ 90 ದ್ವಿಚಕ್ರ ವಾಹನವನ್ನು ಖಾಸಗಿಯಾಗಿ ದುರಸ್ಥಿ ಮಾಡಿಸಿದ ವೆಚ್ಚ	350–00
17	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿರುವ ಮನೆಗೆ ಹಾಗೂ ಪಂಪ್‌ಸೆಟ್‌ಗಳ ವಿದ್ಯುಚ್ಛಕ್ತಿ ಹಾಗೂ ಮಾಪಕ ಠೇವಣಿ ಮೊತ್ತ	10,390–00
18	ಆರೋಪಿತರ ಅತ್ತೆ ಶ್ರೀಮತಿ ಎಲ್. ಉಮಾದೇವಿರವರ ಹೆಸರಿನಲ್ಲಿರುವ ವಿದ್ಯುಚ್ಛಕ್ತಿ ಸೆಕ್ಯುರಿಟಿ ಮತ್ತು ಮೀಟರ್ ಸೆಕ್ಯುರಿಟಿ ಮೊತ್ತ	8,030–00
19	ಆರೋಪಿತರು ಮಾರ್ಚ್ 1997 ರಿಂದ ದಾಳಿ ದಿನಾಂಕದವರೆಗೆ ಒಟ್ಟು ವಿದ್ಯುತ್ ಉಪಯೋಗಿಸಿದ ಖರ್ಚು	48,000–00
20	ಆರೋಪಿತರು ಮಾರ್ಚ್ 1997 ರಿಂದ ದಾಳಿ ದಿನಾಂಕದವರೆಗೆ ಒಟ್ಟು ಟೆಲಿಫೋನ್ ಬಿಲ್ಲಿನ ಖರ್ಚು	45,050–00
21	ಆರೋಪಿತರ ಇಬ್ಬರು ಗಂಡು ಮಕ್ಕಳ ವಿದ್ಯಾಭ್ಯಾಸದ ಖರ್ಚು	1,24,410–00
22	ಆರೋಪಿತರು ದಿ: 3–3–1997 ರಿಂದ ದಾಳಿ ದಿನಾಂಕ 11–09–2008 ರವರೆಗೆ ಮಾಡಿರುವ ಕೌಟುಂಬಿಕ ಆಹಾರ ಪದಾರ್ಥ ಖರ್ಚು	6,07,387–00
23	ಆರೋಪಿತರ ಹೆಸರಿನಲ್ಲಿ ದಿ ಸೌತ್ ಗವರ್ನಮೆಂಟ್ ಆಫೀಸರ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ. ಡೊಂಗರಕೇರಿ, ಮಂಗಳೂರಿನಲ್ಲಿ ಪಡೆದಿರುವ ಸಾಲ ಮತ್ತು ಬಡ್ಡಿ ಮರುಪಾವತಿ ಒಟ್ಟು ಮೊತ್ತ	1,31,331–00
24	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ ಮಂಗಳೂರು ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತ ಖಾತೆ ನಂ. ಎಂ.ಎಲ್.ಎಸ್.ಪಿ. 000099, ಎಂ.ಪಿ.ಐ.ಎನ್. 000011, ಎಂ.ಡಬ್ಲ್ಯೂ.ಎಸ್.ಟಿ. 000068, ಎಂ.ವೈ.ಎಸ್.ಡಿ. 0000449 ಗೆ ನೀಡಿರುವ ಬಡ್ಡಿ ಪಾವತಿ	9,018–00
25	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಂಪನಕಟ್ಟೆ ಬ್ರಾಂಚ್, ಮಂಗಳೂರು ಸಾಲ ಖಾತೆ ನಂ. 30019325801 ರಲ್ಲಿ ಪಡೆದಿರುವ ಸಾಲಕ್ಕೆ ಅಸಲು ಹಾಗೂ ಬಡ್ಡಿ ಪಾವತಿ	5,94,445–00
26	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ ಮಂಗಳೂರು ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಮಂಗಳೂರಿನಲ್ಲಿ ಸಾಲ ಪಡೆಯುವ ಸಂಬಂಧ ಪಾವತಿಸಿದ ಶುಲ್ಕ	5,410–00
27	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ ಪದವಿನಂಗಡಿ ಜಾಗದಲ್ಲಿ ನಿರ್ಮಿಸಿದ ಬಾವಿಯ ಖರ್ಚು	9,933–00

28	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ ಬೋಳೂರು ಗ್ರಾಮದಲ್ಲಿ ಸರ್ವೆ ನಂ. 237/1 ರ ಜಾಗವನ್ನು ಸೆಟ್ಲಮೆಂಟ್ ಡೀಡ್ ನೋಂದಾವಣೆ ಸಮಯದ ಖರ್ಚು	1,930–00
29	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ ಪಡುಕೋಣಾಜೆ ಗ್ರಾಮದಲ್ಲಿ ಸರ್ವೆ ನಂ. 56/3, 56/4ಪಿ2, 56/4ಬಿ2 ರಲ್ಲಿ ಒಟ್ಟು 1.16 ಎಕರೆ ಕೃಷಿ ಜಾಗದ ನೋಂದಣಿ ಖರ್ಚು.	9,280–00
30	ಆರೋಪಿತರ ಪತ್ನಿ ಶ್ರೀಮತಿ ಗಾಯಿತ್ರಿರವರ ಹೆಸರಿನಲ್ಲಿ ಮೂಡಬಿದ್ರೆ ಪಡುಕೋಣಾಜೆ ಗ್ರಾಮದಲ್ಲಿ ಸರ್ವೆ ನಂ. 90–1ಪಿ, 61–2ಬಿಪಿ1, 61–2ಸಿಪಿ3, 61–6, 61–5, 61–3, 91–1ಪಿ2 ರಲ್ಲಿಯ 6.87 ಎಕರೆ ಜಾಗದ ನೋಂದಾವಣೆ ಸಮಯದ ಖರ್ಚು	53,929–00
31	ಮನೆ ಬಾಡಿಗೆ ಬಗ್ಗೆ ಆರೋಪಿತರು ಭರಿಸಿದ ಖರ್ಚು	1,95,120–00
32	ಆರೋಪಿತರು ಖರೀದಿಸಿದ ಜರ್ಮನ್ ಶಪರ್ಡ್ ನಾಯಿಯ ಮೈಂಟೆನೆನ್ಸ್ ಮತ್ತು ಇತರೇ ಖರ್ಚು	65,000–00
33	ಆರೋಪಿತರು ತಮ್ಮ ಮದುವೆಯ ವಾರ್ಷಿಕ ದಿನಾಚರಣೆಯ ಬಗ್ಗೆ ಚೆಕ್ ಅವಧಿಯಲ್ಲಿ ಮಾಡಿದ ಖರ್ಚು	2,480–00
34	ಮಕ್ಕಳ ಹಾಗೂ ತನ್ನ ಹುಟ್ಟು ಹಬ್ಬದ ಬಗ್ಗೆ ಚೆಕ್ ಅವಧಿಯಲ್ಲಿ ಭರಿಸಿದ ಖರ್ಚು	14,465–00
35	ದಿನಾಂಕ 12–09–2005 ರಂದು ಮನೆಯಲ್ಲಿ ನಡೆಸಿದ ಕಾರ್ಯಕ್ರಮದ ಊಟದ ಖರ್ಚು	4,875–00
36	ಅಡುಗೆ ಅನಿಲ ಬಾಬ್ತು ಠೇವಣಿಯಾಗಿ ಆರೋಪಿತ ಅಧಿಕಾರಿಯ ಪತ್ನಿ ಹೆಸರಿನಲ್ಲಿ ಶ್ರೀ ಗಣೇಶ್ ಗ್ಯಾಸ್ ಏಜೆನ್ಸಿ, ಕರಂಗಲಪಾಡಿ, ಮಂಗಳೂರು ಇವರಿಗೆ ಪಾವತಿಸಿರುವ ಮೊತ್ತ	1,900–00
37	ಅಡುಗೆ ಅನಿಲ ಬಾಬ್ತು ಮಾಡಿದ ಖರ್ಚು	13,570–00
38	ಕೇಬಲ್ ಉಪಯೋಗಿಸಿದ ಬಗ್ಗೆ ಮಾಡಿದ ಖರ್ಚು	19,160–00
39	ಹೂ–ತೋಟದ ಬಗ್ಗೆ ಮಾಡಿದ ಖರ್ಚು	360–00
40	ಪಡುಕೋಣಾಜೆ ಗ್ರಾಮದಲ್ಲಿ ತನ್ನ ಹೆಂಡತಿ ಹೆಸರಿನಲ್ಲಿರುವ ಜಮೀನಿನ ಕೃಷಿ ಅಭಿವೃದ್ಧಿಗಾಗಿ ಮಾಡಿರುವ ಖರ್ಚು	4,29,749–00
41	ಪಾಲಡ್ಕ ಗ್ರಾಮದಲ್ಲಿನ ಜಮೀನಿನ ಕೃಷಿ ಅಭಿವೃದ್ಧಿಗೆ ಮಾಡಿದ ಖರ್ಚು	3,72,000–00
42	ಕಲ್ಲಬೆಟ್ಟುವಿನಲ್ಲಿ ದನ ಸಾಕಾಣಿಕೆಯ ಬಗ್ಗೆ ಮತ್ತು ಪಶು ಆಹಾರ ಖರೀದಿ ಬಗ್ಗೆ ಮಾಡಿರುವ ಖರ್ಚು	65,202–00
43	ಆರೋಪಿತರ ತಾಯಿಯ ವೈದ್ಯಕೀಯ ಚಿಕಿತ್ಸೆ ಬಗ್ಗೆ ಮಾಡಿದ ಖರ್ಚು	1,00,000–00
44	ಆರೋಪಿತರ ಮಗ ಶ್ರೀ ಮೋಹಿತ್‌ಚಂದ್ರ ಇವರ ಚಿಕಿತ್ಸೆ ಬಗ್ಗೆ ಮಾಡಿದ ಖರ್ಚು	2,079–00
45	ಆರೋಪಿತರು ತನ್ನ ಅತ್ತೆ ಶ್ರೀಮತಿ ಎಲ್. ಉಮಾದೇವಿ ಇವರಿಗೆ ನೀಡಿದ ಸಾಲ	1,00,000–00
46	ಫ್ರಿಜ್ ರಿಪೇರಿ ಖರ್ಚು	2,350–00
47	ಇತರೇ ಖರ್ಚು	5,50,000–00
	ಒಟ್ಟು ರೂ.	**39,63,433–00**

ಆರೋಪಿತರಾದ ಶ್ರೀ ದಯಾನಂದ ಪೂಜಾರಿ ತಮ್ಮ ಎಲ್ಲಾ ಬಲ್ಲ ಮೂಲಗಳಿಂದ ಬಂದಿರುವ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಸಂಪಾದಿಸಿರುವ ಬಗ್ಗೆ ಅಂಕಿ ಅಂಶಗಳ ಪಟ್ಟಿ

ಒಟ್ಟು ಆಸ್ತಿ	59,30,614–37
ಒಟ್ಟು ಖರ್ಚು	39,63,433–00
ಒಟ್ಟು ಆಸ್ತಿ ಮತ್ತು ಖರ್ಚು	98,94,047–37
ಒಟ್ಟು ಆದಾಯ	44,10,509–08
ಒಟ್ಟು ಅಕ್ರಮ ಆಸ್ತಿ	54,83,538–29

ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರು ನಿಗದಿತ ಆದಾಯಕ್ಕಿಂತ ಹೆಚ್ಚುವರಿಯಾಗಿ ಆಸ್ತಿ ಪಾಸ್ತಿ ಹೊಂದಿರುವ ಬಗ್ಗೆ ಅವರ ವಿರುದ್ಧ ಮಂಗಳೂರು, ಲೋಕಾಯುಕ್ತ ಠಾಣೆ ಮೊಕದ್ದಮೆ ಸಂಖ್ಯೆ : 05/2008 ರಲ್ಲಿ ದಿನಾಂಕ 10–09–2008 ರಂದು ಕಲಂ 13(1)(ಇ) ಜೊತೆಗೆ 13(2)ರ ರೀತ್ಯ ಪ್ರಕರಣವನ್ನು ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

ಮೇಲ್ಕಂಡ ವಿವರಗಳಿಂದ ಆರೋಪಿ ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರು ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಶೇ. 124.32 ರಷ್ಟು ಅಕ್ರಮ ಆಸ್ತಿ ಹೊಂದಿರುವುದು ಮತ್ತು ಖರ್ಚುಗಳನ್ನು ಮಾಡಿರುವುದು ತನಿಖೆಯಿಂದ ಕಂಡುಬಂದಿದ್ದು, ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಜೊತೆಗೆ 13(2) ರಡಿಯಲ್ಲಿ ಅಪರಾಧವೆಸಗಿರುವುದು ಗೋಚರವಾಗಿರುತ್ತದೆ. ಆಕಾರಣ ಆರೋಪಿತರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಜೊತೆಗೆ 13(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಗಗೊಳಿಸಲು ಸಾಕಷ್ಟು ಸಾಕ್ಷಿ ಪುರಾವೆಗಳು ಲಭ್ಯವಿರುತ್ತದೆ. ಆದ್ದರಿಂದ ಆರೋಪಿ ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರು ಮೇಲ್ಕಂಡ ಕಾಯ್ದೆಯಡಿಯಲ್ಲಿ ಅಭಿಯೋಗಗೊಳಿಸಲು ಅರ್ಹರಿರುತ್ತಾರೆ.

ಆದ್ದರಿಂದ ಲಂಚ ನಿರೋಧ ಕಾಯ್ದೆ 1988 ರ ಕಲಂ 13(1)(ಇ) ಜೊತೆಗೆ 13(2) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ

ಕಲಂ 19(1)(ಬಿ) ರನ್ವಯ ಅನುಮತಿ ನೀಡುವಂತೆ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರು ಕೋರಿರುತ್ತಾರೆ.

ಮೇಲ್ಕಂಡ ವಿವರಗಳಿಂದ ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ರೂ. 124.32 ರಷ್ಟು ಅಕ್ರಮ ಆಸ್ತಿ ಹೊಂದಿರುವುದು ಮತ್ತು ಖರ್ಚುಗಳನ್ನು ಮಾಡಿರುವುದು ತನಿಖೆಯಿಂದ ಕಂಡುಬಂದಿದ್ದು, ಆರೋಪಿತರು ಲಂಚ ನಿರೋಧಕ ಕಾಯ್ದೆ 1988ರ ಕಲಂ 13(1)(ಇ) ಸಹವಾಚನ 13(2) ರಡಿಯಲ್ಲಿ ಅಪರಾಧ ಎಸಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಆದಕಾರಣ, ಲಂಚ ನಿರೋಧಕ ಕಾಯ್ದೆ 1988ರ ಕಲಂ 13(1)(ಇ) ಸಹವಾಚನ 13(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಗಗೊಳಿಸಲು ಸಾಕ್ಷಿ ಪುರಾವೆಗಳು ಲಭ್ಯವಿರುತ್ತದೆಂದು ಲೋಕಾಯುಕ್ತ ಪೊಲೀಸರು ತಿಳಿಸಿರುತ್ತಾರೆ.

ಪರಿಶೀಲನಾ ಅವಧಿಯಲ್ಲಿ ಆರೋಪಿತರ ಹೆಸರಿನಲ್ಲಿ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಇರುವ ಆಸ್ತಿಗಳ ಒಟ್ಟು ಮೌಲ್ಯ ರೂ.59,30,614–37 ಗಳಾಗಿರುತ್ತದೆ. ಈ ಪರಿಶೀಲನಾ ಅವಧಿಯಲ್ಲಿ ಆರೋಪಿತರು ಮತ್ತು ಅವರ ಕುಟುಂಬದ ಸದಸ್ಯರುಗಾಗಿ ಖರ್ಚು ಮಾಡಿರುವ ಒಟ್ಟು ಹಣ ರೂ.39,63,433–00 ಗಳಾಗಿರುತ್ತದೆ. ಆಸ್ತಿಗಳ ಮತ್ತು ಖರ್ಚುಗಳ ಒಟ್ಟು ಮೊತ್ತ ರೂ.98,94,047–37 ಗಳಾಗಿದ್ದು, ಈ ಮೊತ್ತದಿಂದ ಆರೋಪಿತರ ಒಟ್ಟು ಆದಾಯದ ಮೊತ್ತ ರೂ.44,10,509–08 ಗಳನ್ನು ಕಳೆದು ಉಳಿದ ರೂ. 54,83,538–29 ಗಳನ್ನು ಆರೋಪಿತರು ಆದಾಯಕ್ಕಿಂತ ಹೆಚ್ಚಿನ ಅಕ್ರಮ ಆಸ್ತಿಗಳಿಸಿರುವುದು ತನಿಖೆಯಿಂದ ದೃಢಪಟ್ಟಿರುತ್ತದೆ. ಆರೋಪಿತರು ತಮ್ಮ ಎಲ್ಲಾ ಬಲ್ಲ ಮೂಲಗಳಿಂದ ಬಂದ ಆದಾಯಕ್ಕಿಂತ ಶೇಕಡವಾರು 124.32 ರಷ್ಟು ಹೆಚ್ಚಿನ ಆಸ್ತಿಯನ್ನು ಭ್ರಷ್ಟಾಚಾರದ ಮೂಲಕ ಗಳಿಸಿರುವುದು ತನಿಖಾ ಸಮಯದಲ್ಲಿ ದೊರೆತಿರುವ ಸಾಕ್ಷ್ಯಾಧಾರಗಳ ಮೂಲಕ ದೃಢಪಟ್ಟಿರುತ್ತದೆ.

ಆರೋಪಿತರು ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988ರ ಕಲಂ 13(1)(ಇ) ಪ್ರಕಾರ ಅಪರಾಧ ಎಸಗಿರುವುದು ಮೇಲ್ನೋಟಕ್ಕೆ ದೃಢಪಟ್ಟಿರುತ್ತದೆ. ಆರೋಪಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ವಿಫುಲವಾದ ಸಾಕ್ಷ್ಯಾಧಾರಗಳಿರುತ್ತದೆ.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (4)ರ ಸರ್ಕಾರಿ ಆದೇಶದಲ್ಲಿ ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ಇವರ ವಿರುದ್ಧ ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿದೆ. ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಆಇ 56 ವಾತೆತ 2008 ದಿನಾಂಕ 02–05–2011ರ ಮೊದಲ ಪುಟದಲ್ಲಿ ಪ್ರಥಮ ವರ್ತಮಾನ ವರದಿ ದಿನಾಂಕ 30–08–2008 ಎಂದು ತಪ್ಪಾಗಿ ನಮೂದಾಗಿರುತ್ತದೆ. ಇದನ್ನು ಸರಿಪಡಿಸಿ ಹೊಸದಾಗಿ ಅಭಿಯೋಜನಾ ಮಂಜೂರಾತಿ ಆದೇಶ ಹೊರಡಿಸುವಂತೆ ಅಪರ ಪೊಲೀಸ್ ಮಹಾ ನಿರ್ದೇಶಕರು ಕೋರಿರುತ್ತಾರೆ. ಸದರಿಯವರ ಪ್ರಸ್ತಾವನೆಯನ್ನು ಪರಿಶೀಲಿಸಿ ಪರಿಷ್ಕೃತ ಆದೇಶ ಹೊರಡಿಸುವ ಅನಿವಾರ್ಯತೆ ಉಂಟಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 56 ವಾತೆತ 2008, ಬೆಂಗಳೂರು, ದಿನಾಂಕ 4ನೇ ಜೂನ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988ರ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಆರೋಪಿತ ಅಧಿಕಾರಿಯಾದ ಶ್ರೀ ದಯಾನಂದ ಪೂಜಾರಿ, ವಾಣಿಜ್ಯ ತೆರಿಗೆ ಉಪ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಇವರ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 13(1)(ಇ) ಜೊತೆಯಲ್ಲಿ ಓದಲಾದ ಕಲಂ 13(2)ರ ಪ್ರಕಾರ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಹೊರಡಿಸಿದ ದಿನಾಂಕ 02–05–2011ರ ಸರ್ಕಾರಿ ಆದೇಶ ಸಂಖ್ಯೆ : ಆಇ 56 ವಾತೆತ 2008 ನ್ನು ಮಾರ್ಪಡಿಸಿ, ಈ ಮೂಲಕ ಅನುಮತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ–19 ರನ್ವಯ ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ 04–06–2011 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಆರ್. ಚಂದ್ರಶೇಖರಾರಾಧ್ಯ,
ಪೀಠಾಧಿಕಾರಿ,
ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ–2).

ಪಿ.ಆರ್. 1540

LAW, JUSTICE AND HUMAN RIGHTS SECRETARIAT

Sub: Guidelines to indicate the “Drawing Authority” and “Counter signing Authority” with regard to release of funds under 13th Finance Commission Grants-reg.

Read:
1. Government Order No. LAW 231 LAC 2010, dated 20-01-2010.
2. Government Order No. LAW 231 LAC 2010, dated 30-11-2010.
3. Government Order No. LAW 231 LAC 2010, dated 28-01-2011.
4. Letter No. KSLSA, dated 14-02-2011 from the Member Secretary, Karnataka State Legal Service Authority, Bangalore.

Preamble:

In the implementation of the guidelines received from the Government of India, regarding release of grant-in-aid for Improvement of Justice Delivery, it has been recommended by the 13th Finance Commission for the constitution of High Level Monitoring Committee, accordingly a High Level Monitoring Committee was constituted in Government Order read at (1) above. An amount of Rs.22.32 Crores were released for Improvement of Administration Justice in the State in Government Order read at (2) above. For the Training Programme of Public Prosecutor in the State, an amount of Rs. 122 Lakh were released in Government Order read at (3) above. The Member Secretary, State Legal Services Authority, in his letter read at (4) above has requested to indicate the “Drawing Authority” and “Counter signing Authority” for drawing the amount sanctioned in Government Order read at (3)

above. Accordingly, Finance Department was consulted to indicate as to who is the "Drawing Authority" and "Counter Signing Authority" with regard to release of funds under 13th Finance Commission Grants to (1) Morning and Evening Courts, (2) The Lok Adalat and Legal Aid (3) Training of Judicial Officers (4) Heritage Court Buildings (5) A.D.R. Centre and (6) Court Managers.

2. The Finance Department was consulted the above proposal and the following order is issued.

GOVERNMENT ORDER NO.: LAW 231 LAC 2010, BANGALORE, DATED: 06-06-2011

In partial modification of Government Order No. LAW 231 LAC 2010, dated 28-01-2011 the following instructions are issued. In respect of :-

1. **Morning and Evening Courts, 2. Training of Judicial Officers and 3. State Judicial Officers :** The Drawing and Disbursing officers of the Judicial establishment implementing the scheme can be the D.D.O.'s for the 13th Finance Commission Grants. There is need for counter signature of the bills.
2. **The Lok Adalat and Legal Aid including Mega Lok Adalat :** The scheme is being implemented by the Karnataka Legal Services Authority. The 13th Finance Commission Grants can be drawn on the payee's receipt signed by the Member Secretary and Counter signed either by the Registrar General of Karnataka High Court by the Officer of the Law Department, as decided by the Law Department.
3. **Training of Public Prosecutors :** The D.D.O. of the Public Prosecution and Litigation Department is implementing the scheme. The D.D.O.s of the department can be the D.D.O.s for the 13th Finance Commission grants. There is no need for counter signature.
4. **Heritage Court Buildings :** The maintenance, repairs and renovation of the Heritage Court Buildings may be entrusted to the PWD. The D.D.O. of the Karnataka High Court can draw the funds on payee's receipt signed by the D.D.O. of the High Court of Karnataka and countersigned either by the Registrar General of High Court, Karnataka or by the Officer of the Law Department, as decided by the Law Department and the cheque may be drawn in favour of the concerned Executive Engineer (Buildings) and paid to them for taking up the work as "deposit contribution works."
5. **A.D.R. Centre :** The Director, Bangalore Mediation Centre is executing the scheme and he is the existing D.D.O. He can be the D.D.O. to the 13th Finance Commission grants in respect of the expenditure other than the Civil Works. As far as civil works of A.D.R. Centres are concerned, the funds can be drawn on payee's receipt signed by the D.D.O. the Karnataka High Court and Counter signed by the Registrar General of Karnataka, or by the Officer of the Law Department as decided by the Law Department and the cheque may be drawn in favour of concerned Executive Engineer (Buildings) and paid to them for taking up the works as "Deposit Contribution Works."
6. **Court Manager :** The existing D.D.O.s of the concerned Courts can be the D.D.O. to the 13th Finance Commission grants to. There is no need for counter signature of the bills.

2. The expenditure should be limited to the releases made under 13th Finance Commission grants subject to the budget provision.

3. This order is issued with the concurrence of Finance Department vide their U.O. Note No. FD 45 FCC 2010, dated 19-03-2011.

By Order and in the name of the Governor of Karnataka,

SYED ABDUL NAZEER,

Under Secretary to Government,

Department of Law, Justice and Human Rights (Admn-1).

PR No. 1541

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ತಿದ್ದುಪಡಿ ಆದೇಶ

ವಿಷಯ : ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಬೀದರ್ ಜಿಲ್ಲೆ ಇದಕ್ಕೆ ಎನ್.ಸಿ.ಡಿ.ಸಿ. ಯಿಂದ ಮಂಜೂರಾದ ₹ 1200.00 ಲಕ್ಷಗಳ ಅವಧಿ ಸಾಲ ಮರುಪಾವತಿಗೆ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 35 ಸಸಕಾ 2011, ಬೆಂಗಳೂರು, ದಿನಾಂಕ 13ನೇ ಜೂನ್ 2011

ಸರ್ಕಾರಿ ಆದೇಶ ಸಂಖ್ಯೆ ಸಿಎಂಡಬ್ಲ್ಯೂ 89 ಸಸಕಾ 2003 ದಿನಾಂಕ 27–8–2005ರ ಆದೇಶ ಭಾಗದಲ್ಲಿ ನಮೂದಿಸಿರುವ **"ಮಂಜೂರಾದ ಸಾಲಕ್ಕೆ ಶೇ. 1 ರಷ್ಟು ಗ್ಯಾರಂಟಿ ಕಮೀಷನ್" ಎಂಬುದನ್ನು ಶೇ. 1 ರಷ್ಟು ಸಂಭಾವ್ಯ ನಷ್ಟ ಶುಲ್ಕ (ರಿಸ್ಕ್ ಚಾರ್ಜ್)" ಎಂಬುದಾಗಿ** ಓದಿಕೊಳ್ಳತಕ್ಕದ್ದು.

ಮುಂದುವರೆದು ಎನ್.ಸಿ.ಡಿ.ಸಿ.ಯು ವಿಧಿಸಿರುವ ಬಡ್ಡಿ ದರದ ಜೊತೆಗೆ ಹೆಚ್ಚುವರಿ ಸಂಭಾವ್ಯ ನಷ್ಟ ಶುಲ್ಕ (ರಿಸ್ಕ್ ಚಾರ್ಜ್) ವನ್ನು ಲೆಕ್ಕಶೀರ್ಷಿಕೆ 0049–04–195–0–08 Consumer Co-operatives ಅಡಿಯಲ್ಲಿ ಭರಿಸತಕ್ಕದ್ದು.

ಈ ತಿದ್ದುಪಡಿ ಆದೇಶವನ್ನು ಸಂಖ್ಯೆ ಎಫ್‌ಡಿ 168 ವೆಚ್ಚ–2/2011 ದಿನಾಂಕ 24–05–2011ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಮಸ್ವಾಮಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

(ಸಹಕಾರಿ ಸಕ್ಕರೆ)

ಪಿ.ಆರ್. 1542

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ತಿದ್ದುಪಡಿ ಆದೇಶ

ವಿಷಯ : ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಬೆಳಗಾಂ ಜಿಲ್ಲೆ ಇದಕ್ಕೆ ಎನ್.ಸಿ.ಡಿ.ಸಿ ಯಿಂದ ಮಂಜೂರಾದ ₹ 1090.00 ಲಕ್ಷಗಳ ಅವಧಿ ಸಾಲ ಮರುಪಾವತಿಗೆ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸುವ ಬಗ್ಗೆ.

ಸರ್ಕಾರಿ ಆದೇಶ ಸಂಖ್ಯೆ ವಾಕೈ 35 ಸಸಕಾ 2011, ಬೆಂಗಳೂರು, ದಿನಾಂಕ 13–06–2011

ಸರ್ಕಾರಿ ಆದೇಶ ಸಂಖ್ಯೆ ಸಿಎಂಡಬ್ಲ್ಯೂ 46 ಸಸಕಾ 2003 ದಿನಾಂಕ 27–8–2005ರ ಆದೇಶ ಭಾಗದಲ್ಲಿ ನಮೂದಿಸಿರುವ "ಮಂಜೂರಾದ ಸಾಲಕ್ಕೆ ಶೇ.1ರಷ್ಟು ಗ್ಯಾರಂಟಿ ಕಮಿಷನ್" ಎಂದಿರುವುದನ್ನು "ಶೇ 1ರಷ್ಟು ಸಂಭಾವ್ಯ ನಷ್ಟ ಶುಲ್ಕ (ರಿಸ್ಕ್ ಚಾರ್ಜ್)" ಎಂದು ಓದಿಕೊಳ್ಳತಕ್ಕದ್ದು.

ಮುಂದುವರೆದು ಎನ್.ಸಿ.ಡಿ.ಸಿ.ಯು ವಿಧಿಸಿರುವ ಬಡ್ಡಿ ದರದ ಜೊತೆಗೆ ಹೆಚ್ಚುವರಿ ಸಂಭಾವ್ಯ ನಷ್ಟ ಶುಲ್ಕ (ರಿಸ್ಕ್ ಚಾರ್ಜ್) ವನ್ನು ಲೆಕ್ಕ ಶೀರ್ಷಿಕೆ 0049–04–195–0–08 consumer Co- operatrives ಅಡಿಯಲ್ಲಿ ಭರಿಸತಕ್ಕದ್ದು.

ಈ ತಿದ್ದುಪಡಿ ಆದೇಶವನ್ನು ಸಂಖ್ಯೆ ಎಫ್‌ಡಿ 168 ವೆಚ್ಚ–2/2011 ದಿನಾಂಕ 24–05–2011ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ರಾಮಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಹಕಾರಿ ಸಕ್ಕರೆ)

ಪಿ.ಆರ್ 1543

FOREST, ECOLOGY AND ENVIRONMENT SECRETARIAT

Sub :- Diversion of 0.168 ha. of forest land in Karajagi and Yettinahalli for improvement of Water Supply System in favour of the Municipal Commissioner, City Municipal Council, Haveri.

Read:-
1. Letter No. A5 (3) GFL. CR. 51/10-11, dated: 18.04.2011 of Principal Chief Conservator of Forests, Bangalore.
2. Government of India letter No.F.No.11-9/98-FC, dated: 03-01-2005 and 11-09-2009.

PREAMBLE:

The Principal Chief Conservator of Forests, Bangalore vide his letter dated 18.04.2011 read at (1) above has submitted the proposal for diversion of 0.168 ha. of forest land for improvement of Water Supply System-supplying and Laying DI Pumping Main from Karajagi to Heggeri, construction of intake works, strengthening of distribution system and providing and fixing bulk flow meters in Haveri CMC in favour of the Municipal Commissioner, City Municipal Council, Haveri under the Forest (Conservation) Act, 1980, Subject to certain conditions.

This proposal has been examined as per the general approval of Government of India in its letter dated: 03-01-2005 and 11-09-2009 it has been decided to accord sanction for diversion of 0.168 ha. of forest land under the Forest (Conservation) Act, 1980. The proposal has been examined in detail and hence the Order.

The proposal has been examined in detail and hence the following Order:-

GOVERNMENT ORDER NO: FEE 72 FLL 2011, BANGALORE, DATED: 03/06/2011.

In the circumstances explained in the preamble above and in accordance with the general approval given by Government of India in their letters dated: 03-01-2005 and 11-09-2009, Govrenment is Pleased to accord approval under Forest (Conservation) Act, 1980 for diversion of 0.168 ha. of forest land for improvement of Drinking Water Supply System-supplying and Laying DI Pumping Main from Karajagi to Heggeri, construction of intake works, strengthening of distribution system and providing and fixing bulk flow meters in Haveri CMC in favour of the Municipal Commissioner, City Municipal Council, Haveri subject to the following conditions.

1. The legal status of the forest land shall remain unchanged and it shall continue as forest land.
2. The lease tenure is for a period of 30 (Thirty) years.
3. The lessee shall pay lease rent as fixed by the Government from time to time.
4. The leased out area should be used for the purpose for which it is granted. In case the land is not used for the stipulated purpose, the area should be resumed to the Forest Department under Section 82 of Karnataka Forest Act, 1963. The concerned Deputy Conservator of Forests is authorized to take necessary action in this regard.
5. No. residential building shall be permitted in the proposed area.
6. The Karnataka Forest Act 1963 and Rules 1969 and other relevant Acts and Rules will be applicable for any violation.
7. The User Agency has to pay the Next Present Value (;NPV) of forest land diverted under this proposal as per Orders dated 28.3.2008 and 9.5.2008 of the Hon'ble Supreme Court of India.
8. The User Agency shall ensure that there should be no damage to the available fauna and flora.
9. Plantation activities, if the concerned Deputy Conservator of Forest finds it necessary, shall be taken up adjacent to the project site at the project cost immediately. The plantation shall be maintained at the project cost.

10. No labour camp shall be established on the forst lands.
11. No works shall be allowed after sunset.
12. Any damage to forest area due to such works shall be compensated by the User Agency. The extent of damage shall be assessed by the concerned Deputy Conservator of Forests.
13. The User agency shall not sub-lease, mortgage and hypothecate the forest area.
14. The User Agency shall abide by all the conditions imposed upon by the Government of India, the Government of Karnataka and the Principal Chief Conservator of Forest (HoFF).

BY ORDER AND IN THE NAME OF THE GOVERNOR OF KARNATAKA
H.M. Mallikarjuna Swamy
Under Secretary to Government,
Forest, Ecology and Environment Department

P.R. 1544

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಳ್ಳಾರಿಯಲ್ಲಿ ಜಲವಿಜ್ಞಾನ ಯೋಜನೆ ಹಂತ–2ರಡಿ ಪ್ರಾದೇಶಿಕ ಮಾಹಿತಿ ಮತ್ತು ತರಬೇತಿ ಕೇಂದ್ರ ಕಟ್ಟಡ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಕ್ರಮಾಂಕ: ಮುಇಂ / ಸನೀ(ಉ)ವ/ಬಿಜೆಪಿ / ಪಿಬಿ–12 /2011–12 / 3002 ದಿನಾಂಕ: 03.06.2011.

2) ಸರ್ಕಾರದ ಆದೇಶ ಸಂಖ್ಯೆ ಸನೀಇ 3ಅಜಅ 2010 ದಿನಾಂಕ 23.02.2010

ಪ್ರಸ್ತಾವನೆ:

ಬಳ್ಳಾರಿ ನಗರದಲ್ಲಿ ಜಲವಿಜ್ಞಾನ ಯೋಜನೆ ಹಂತ–2ರಡಿ ಪ್ರಾದೇಶಿಕ ಮಾಹಿತಿ ಮತ್ತು ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ ರೂ.170.00 ಲಕ್ಷದ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡರವರು ಕಛೇರಿ ಆದೇಶ ಸಂಖ್ಯೆ 4531 ದಿನಾಂಕ 31.07.2010 ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಸಣ್ಣ ನೀರಾವರಿ ವಿಭಾಗ ಬಳ್ಳಾರಿಯಿಂದ IBRD ಮಾರ್ಗಸೂಚಿಗಳ ಅನ್ವಯ ಸಾಂಪ್ರದಾಯಿಕ ಪದ್ಧತಿಯಂತೆ ಏಕ ಲಕೋಟೆ ಪದ್ಧತಿಯನ್ನು ಅಳವಡಿಸಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	02.04.2011
ಪ್ರಜಾವಾಣಿ ಹಾಗೂ ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆಗಳು	06.04.2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಇಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಅವರ ಟೆಂಡರ್ ತೆರೆದು ಪರಿಶೀಲಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ		ರೂ. 1,34,71,540/–	
ಪ್ರಸಕ್ತ ಸಾಲಿನ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.1,39,14,502/–	
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಹೆಚ್ ಅಮರೇಶ, ಒಂದನೇ ದರ್ಜೆ ಗುತ್ತಿಗೆದಾರರು	1,64,35,167/–	21.999 ಹೆಚ್ಚು	18.115 ಹೆಚ್ಚು
ಎಸ್.ವಿ. ರಮಣಾ ರೆಡ್ಡಿ, ಒಂದನೇ ದರ್ಜೆ ಗುತ್ತಿಗೆದಾರರು	1,70,46,485/–	26.537 ಹೆಚ್ಚು	22.508 ಹೆಚ್ಚು

ಮೇಲ್ಕಂಡಂತೆ ಶ್ರೀ ಹೆಚ್ ಅಮರೇಶ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಹಾಗೂ ಕಡಿಮೆ ದರಗಳನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 18.115 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ(1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರ್‌ನ್ನು ಸರ್ಕಾರದಲ್ಲಿ ಪರಿಶೀಲಿಸಿದ್ದು ಈ ಕಾಮಗಾರಿಯನ್ನು International Bank of Reconstructions & Development ಸಂಸ್ಥೆಯ ಸಹಾಯಧನದೊಂದಿಗೆ ಕೈಗೆತ್ತಿಕೊಳ್ಳಲಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ನಿರ್ದೇಶಕರು, ಅಂತರ್ಜಲ ಇವರಿಂದ ಸ್ವೀಕೃತವಾಗಿರುವ ಟಿಪ್ಪಣಿಯಂತೆ, ವಿಶ್ವ ಬ್ಯಾಂಕ್ ನಿಯಮಗಳಂತೆ ಅನುಮೋದಿಸಬೇಕಾಗುತ್ತದೆ. ಮೇಲಾಗಿ ಪ್ರಸ್ತುತ ಹೋಲಿಕೆಗಾಗಿ ಅಳವಡಿಸಿರುವ ಪ್ರಸಕ್ತ ಸಾಲಿನ

ಲೋಕೋಪಯೋಗಿ ಇಲಾಖೆಯ ದರಗಳು 2011–12ನೇ ಸಾಲಿಗೆ ಮುಂದುವರೆಸಿರುವ 2010–11ನೆ ಸಾಲಿನ ದರಗಳಾಗಿದ್ದು, ಈ ಅವಧಿಯಲ್ಲಿ ಕಟ್ಟಡ ಸಾಮಗ್ರಿಗಳಾದ ಸಿಮೆಂಟು, ಉಕ್ಕುಗಳಲ್ಲದೆ ಮರಳು ಜಲ್ಲಿ ಹಾಗೂ ಕಾರ್ಮಿಕರ ಕೂಲಿ ದರಗಳಲ್ಲಿ ಸಾಕಷ್ಟು ಹೆಚ್ಚಳವಾಗಿರುವುದಾಗಿ ತಿಳಿಸಲಾಗಿದೆ. ಈ ಕಾರಣಗಳಿಂದಾಗಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ.1,39,14,502/–ಗಳ ಮೇಲೆ ಶೇ.18.115 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,64,35,167/–ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 74 ಮಸಾವಿ 2011 (ತಾಂತ್ರಿಕ) ಬೆಂಗಳೂರು ದಿನಾಂಕ: 08/06/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಳ್ಳಾರಿ ನಗರದಲ್ಲಿ ಜಲವಿಜ್ಞಾನ ಯೋಜನೆ ಹಂತ–2ರಡಿ ಪ್ರಾದೇಶಿಕ ಮಾಹಿತಿ ಮತ್ತು ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 1,39,14,502/–ಗಳ ಮೇಲೆ ಶೇ. 18.115 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,64,35,167/–ಗಳಿಗೆ (ಒಂದು ಕೋಟಿ ಅರವತ್ತನಾಲ್ಕು ಲಕ್ಷ ಮೂವತ್ತೈದು ಸಾವಿರದ ಒಂದು ನೂರ ಅರವತ್ತೇಳು ರೂಪಾಯಿಗಳು ಮಾತ್ರ) ಶ್ರೀ ಹೆಚ್ ಅಮರೇಶ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪಿ.ಆರ್ 1545

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಹಾಸನ ತಾಲ್ಲೂಕು ಸಾಲಗಾಮೆ ಹೋಬಳಿ ಕೆಳವತ್ತಿ ಕೆರೆ ಅಭಿವೃದ್ಧಿ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ದಿನಾಂಕ 27.04.2011ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರುರವರ ಪತ್ರ ಸಂಖ್ಯೆ: ಮುಸದ/ತಾಂಸ.2/ ಸ.ಇಂ.5/ ಹಾಸನ/ಸಾಲಗಾಮೆ/2010–11/1884.

ಪ್ರಸ್ತಾವನೆ:

ಹಾಸನ ತಾಲ್ಲೂಕಿನ ಸಾಲಗಾಮೆ ಹೋಬಳಿ ಕೆಳವತ್ತಿ ಕೆರೆಯ ಅಭಿವೃದ್ಧಿ ಕಾಮಗಾರಿಗೆ ಅಂದಾಜನ್ನು 2011–12ನೇ ಸಾಲಿಗೆ ಮುಂದುವರೆದ 2010–12ನೇ ಸಾಲಿನ ದರಪಟ್ಟಿಯಂತೆ ತಯಾರಿಸಲಾದ 310.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರು ಮೇಲೆ ಓದಲಾದ ದಿನಾಂಕ 27.04.2011ರ ಪತ್ರದಲ್ಲಿ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಸದರಿ ಕೆರೆಯು ಬಹಳ ಹಳೆಯ ಕೆರೆಯಾಗಿದ್ದು ಈ ಕೆರೆಯಿಂದ 79.50 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ವಿನ್ಯಾಸಿಸಲಾಗಿದ್ದು ಏರಿಯ ಉದ್ದ 1440ಮಿ. ಆಗಿರುತ್ತದೆ. 2010 ನವೆಂಬರ್‌ನಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಕೆರೆಯ ಏರಿಯಲ್ಲಿ ಒಡಕು ಉಂಟಾಗಿದ್ದು ಆ ಸಮಯದಲ್ಲಿ ಕೆರೆ ತುಂಬಿದ್ದರಿಂದ ಏರಿ ಒಡೆದು ಹೆಚ್ಚಿನ ಹಾನಿ ತಡೆಗಟ್ಟಲು ಎರಡು ಬದಿಯ ಕೋಡಿಗಳನ್ನು ಒಡೆದು ನೀರನ್ನು ಬಿಡಲಾಗಿದೆ. ಮುಖ್ಯ ಇಂಜಿನಿಯರ್ ಇವರು ಸದರಿ ಕೆರೆಯನ್ನು ಪರಿವೀಕ್ಷಿಸಿ ಕೆರೆಯ ಏರಿಯನ್ನು ಸರಿಪಡಿಸಲು ಸ್ಲಿಪ್ ಸರ್ಕಲ್ ಅನ್ಯಾಲಿಸಿಸ್ ಮಾಡಿ ಅವಶ್ಯವಿರುವ ತಳಪಾಯನ್ನು ನಿರ್ಮಿಸಲು ಸೂಚಿಸಿದ್ದು ಅದರಂತೆ ಒಡೆದು ಹೋಗಿರುವ ಏರಿಯ ಭಾಗವನ್ನು ದುರಸ್ಥಿ ಮಾಡಲು ರೂ. 310.00 ಲಕ್ಷ ಮೊತ್ತದ ಅಂದಾಜನ್ನು ತಯಾರಿಸಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯ ರೂ.310.00 ಲಕ್ಷ ಮೊತ್ತ ಅಂದಾಜಿಗೆ ಲೆಕ್ಕ ಶೀರ್ಷಿಕೆ "4702–00–101–1–07–139 ಕೆರೆಗಳ ಆಧುನೀಕರಣ" ಅಡಿ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 20 ಕೆಜಿದು (ತಾಂತ್ರಿಕ) 2011 ಬೆಂಗಳೂರು, ದಿನಾಂಕ 08ನೇ ಜೂನ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ತಾಲ್ಲೂಕು ಸಾಲಗಾಮೆ ಹೋಬಳಿ ಕೆಳವತ್ತಿ ಕೆರೆ ಅಭಿವೃದ್ಧಿ ಕಾಮಗಾರಿಯ 2010–11ನೇ ಸಾಲಿನ ದರಪಟ್ಟಿಯಂತೆ ತಯಾರಿಸಲಾದ 310.00 ಲಕ್ಷ ರೂ.ಗಳ (ಮುನ್ನೂರ ಹತ್ತು ಲಕ್ಷ ರೂ.ಗಳು ಮಾತ್ರ) ಅಂದಾಜು ಪಟ್ಟಿಗೆ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ವೆಚ್ಚವು ಯವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.

2. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.

3. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.

4. ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ತೀರುವಳಿ ಪಡೆಯುವುದು.

5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.

6. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.

7. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು

8. ಈ ಕಾಮಗಾರಿಯನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ಸೂಕ್ತ ಅನುದಾನದೊಂದಿಗೆ ಸೇರಿಸಲು ಕ್ರಮ ಕೈಗೊಳ್ಳತಕ್ಕದ್ದು.

9. ಈ ಕೆರೆಗೆ ನೀರು ಬಳಕೆದಾರರ ಸಂಘಗಳನ್ನು ರಚಿಸಿ ಕೆರೆಯ ಕಾಮಗಾರಿ ಪೂರ್ಣಗೊಂಡ ನಂತರ ಉಸ್ತುವಾರಿಯನ್ನು ಸಂಘಕ್ಕೆ ವಹಿಸುವುದು.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "4702-00-101-1-07-139 ಕೆರೆಗಳ ಆಧುನೀಕರಣ" ಅಡಿ ಭರಿಸುವುದು.

ಈ ಆದೇಶವನ್ನು ಇಲಾಖಾ ಕಾರ್ಯದರ್ಶಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/08ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್ 1546

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಮೈಸೂರು ನಗರದಲ್ಲಿ ಗಣಿ ಮತ್ತು ಭೂವಿಜ್ಞಾನ ಕಛೇರಿಯ ಕಟ್ಟಡ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದಿಸುವ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಕ್ರಮಾಂಕ: ಮುಸ(ದ)ತಾಂ.2/ಸ.ಇಂ.2/ ಮೈಸೂರು/ಗಣಿ ಮತ್ತು ಭೂ ವಿಜ್ಞಾನ/ಕಟ್ಟಡ/ ಟೆಂಡರ್/2011/2290 ದಿನಾಂಕ: 10.06.2011 ಮತ್ತು 2329 ದಿನಾಂಕ 14.06.2011.

2) ಸರ್ಕಾರದ ಆದೇಶ ಸಂಖ್ಯೆ ಸನೀಇ 15 ಅಜಅ 2010 ದಿನಾಂಕ 23.06.2010.

ಪ್ರಸ್ತಾವನೆ:

ಮೈಸೂರು ನಗರದಲ್ಲಿ ಜಲವಿಜ್ಞಾನ ಯೋಜನೆ ಹಂತ-2ರಡಿ ಪ್ರಾದೇಶಿಕ ಮಾಹಿತಿ ಮತ್ತು ತರಬೇತಿ ಕೇಂದ್ರ ಕಟ್ಟಡ ನಿರ್ಮಾಣ ರೂ. 160.00 ಲಕ್ಷದ ಅಂದಾಜಿಗೆ ಉಲ್ಲೇಖ (2)ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಕಛೇರಿ ಸಿಇಆರ್ ಸಂಖ್ಯೆ 21/2011-12 ದಿನಾಂಕ 26.04.2011 ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಸಣ್ಣ ನೀರಾವರಿ ವಿಭಾಗ ಮೈಸೂರು ಇವರಿಂದ ಪ್ರಕಟಣೆ ಸಂಖ್ಯೆ: 02/2011-12 ದಿನಾಂಕ:15.04.2011 ರಲ್ಲಿ IBRD ಮಾರ್ಗಸೂಚಿ ಅನ್ವಯ ಸಾಂಪ್ರದಾಯಿಕ ಪದ್ಧತಿಯಂತೆ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	20.04.2011
ದಿ ಹಿಂದೂ, ಪ್ರಜಾವಾಣಿ ಹಾಗೂ ಕನ್ನಡ ಪ್ರಭ ದಿನಪತ್ರಿಕೆಗಳು	22.04.2011

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು ಈ ಪೈಕಿ ಇಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಅವರ ಟೆಂಡರ್ ತೆರೆದು ಪರಿಶೀಲಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ		ರೂ.1,42,74,404/-	
ಪರಿಷ್ಕೃತ ಉಕ್ಕು ಮತ್ತು ಸಿಮೆಂಟ್ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ		ರೂ. 1,46,99,309/-	
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್ ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಮೆ: ತನಿಸುಜನ್ ಇನ್ಫ್ರಾ ಪ್ರೈ.ಲಿ, ಒಂದನೇ ದರ್ಜೆ ಗುತ್ತಿಗೆದಾರರು, ಮೈಸೂರು	1,82,44,060/-	27.80 ಹೆಚ್ಚು	24.115 ಹೆಚ್ಚು
ಎಸ್. ಗೋಪಾಲರಾಜು, ಒಂದನೇ ದರ್ಜೆ ಗುತ್ತಿಗೆದಾರರು, ಮೈಸೂರು	1,85,71,269/-	30.10 ಹೆಚ್ಚು	26.34 ಹೆಚ್ಚು

ಮೇಲ್ಕಂಡಂತೆ ಮೆ: ತನಿಸುಜನ್ ಇನ್ಫ್ರಾ ಪ್ರೈ.ಲಿ. ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಹಾಗೂ ಕಡಿಮೆ ದರಗಳನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿರುವ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 24.115 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಟೆಂಡರ್‌ನ್ನು ಸರ್ಕಾರದಲ್ಲಿ ಪರಿಶೀಲಿಸಿದ್ದು ಈ ಕಾಮಗಾರಿಯನ್ನು International Bank of Reconstruction & Development ಸಂಸ್ಥೆಯ ಸಹಾಯಧನದೊಂದಿಗೆ ಕೈಗೆತ್ತಿಕೊಳ್ಳಲಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ನಿರ್ದೇಶಕರು, ಅಂತರ್ಜಲ ಇವರಿಂದ ಸ್ವೀಕೃತವಾಗಿರುವ ಟಿಪ್ಪಣಿಯಂತೆ, ವಿಶ್ವ ಬ್ಯಾಂಕ್ ನಿಯಮಗಳಂತೆ ಅನುಮೋದಿಸಬೇಕಾಗುತ್ತದೆ. ಮೇಲಾಗಿ ಪ್ರಸ್ತುತ ಹೋಲಿಕೆಗಾಗಿ ಅಳವಡಿಸಿರುವ ಪ್ರಸಕ್ತ ಸಾಲಿನ ಲೋಕೋಪಯೋಗಿ ಇಲಾಖೆಯ ದರಗಳು 2011–12ನೇ ಸಾಲಿಗೆ ಮುಂದುವರೆಸಿರುವ 2010–11ನೆ ಸಾಲಿನ ದರಗಳಾಗಿದ್ದು, ಈ ಅವಧಿಯಲ್ಲಿ ಕಟ್ಟಡ ಸಾಮಗ್ರಿಗಳಾದ ಸಿಮೆಂಟು, ಉಕ್ಕುಗಳಲ್ಲದೆ ಮರಳು ಜಲ್ಲಿ ಹಾಗೂ ಕಾರ್ಮಿಕರ ಕೂಲಿ ದರಗಳಲ್ಲಿ ಸಾಕಷ್ಟು ಹೆಚ್ಚಳವಾಗಿರುವುದಾಗಿ ತಿಳಿಸಲಾಗಿದೆ. ಈ ಕಾರಣಗಳಿಂದಾಗಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರ್‌ಗಿಟ್ಟ ಪರಿಷ್ಕೃತ ಮೊತ್ತ ರೂ. 1,46,99,309/– ಮೇಲೆ ಶೇ.24.115 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,82,44,060/– ಗಳಿಗೆ ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 80 ಮಸಾವಿ 2011 (ತಾಂತ್ರಿಕ) ಬೆಂಗಳೂರು, ದಿನಾಂಕ: 18/06/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೈಸೂರು ನಗರದಲ್ಲಿ ಗಣಿ ಮತ್ತು ಭೂ ವಿಜ್ಞಾನ ಕಛೇರಿಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಡಲಾದ ಮೊತ್ತ ರೂ. 146,99,309/–ಗಳ ಮೇಲೆ ಶೇ.24.115 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.1,82,44,060/–ಗಳಿಗೆ (ಒಂದು ಕೋಟಿ ಎಂಬತ್ತೆರಡು ಲಕ್ಷ ನಲವತ್ತನಾಲ್ಕು ಸಾವಿರದ ಅರವತ್ತು ರೂಪಾಯಿಗಳು ಮಾತ್ರ) ಮೆ: ತನಿಸುಜನ್ ಇನ್ಫ್ರಾ ಪ್ರೈ.ಲಿ. ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1) ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2) ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್ 1547

WATER RESOURCES SECRETARIAT

Sub :- According Administrative Approval to the Minor Irrigation Projects under Accelerated Irrigation Benefit Programme-Regarding.

Read:- **1.** Letter No. CE/MI (N) Zone/BJP/AIBP/PB-3/2011-12/2613/dt. 18.05.2011 from the Chief Engineer, Minor Irrigation North Zone, Bijapur.

Preamble:

As per the modified guidelines issued by the Government of india, Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category States. 81 taluks in the State are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant will be 90% of the balance estimated cost of the project worked after excluding previous expenditure and considering the cost of the schemes upto Rs 1.5 lakh per Ha. the balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP Finance Department, Government of Karnataka has also approved the proposal of the water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following schemes in DPAP taluks are being considered for according administrative approval.

Head of Account 4702-00-101-1-10-139 AIBP Major Works

Rs. In lakhs

Sl. No	Name of Project	District	Taluka	Estimated cost	Potential planned (in Ha.)	Cost/Ha (Rs. In lakhs)
1	Construction of Anicut at Anantpur Village	Gulbarga	Sedam	75.00	50	1.50
2	Construction of Anicut at Totnalli Village in	Gulbarga	Sedam	80.00	55	1.45
3	Construction of BCB at Hayyal village	Gulbarga	Sedam	150.00	80	1.875
4	Construction of Anicut at Saklaspalli Village	Gulbarga	Sedam	95.00	50	1.90
5	Construction of BCB across Local Nala near Dongaon village	Gulbarga	Chittapur	90.00	75	1.2
	Total			490.00		

GOVERNMENT ORDER NO: SANEEYEE 12 MASAVI 2011 (1) (TECH) BANGALORE, DATED:13.06.2011

In view of the above, Administrative approval is hereby accorded for taking up the above works with an estimated cost totaling to Rs. 490.00 lakhs (Rupees four hundred and ninty lakhs only) subject to the following conditions

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt and State Govt.
4. The Central share is in the form of grant to the state.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the quidelines issued by the GOI.
7. The implementation of the project shall be as per the required technical specifications and finacial specifications as per the approved DPRs
8. Water users association shall be formed for post construction maintenance and the sheme shall be handed over to the same after its construction for the O&M.

This order is issued with the concurrence of Finance Department in note No.PWD-890-FC-1/2009 dated 09.12.2009.

BY ORDER AND IN THE NAME OF THE GOVERNOR OF KARNATAKA

P.R. 1548

Rudramurthy
Ex Officio Under Secretary to Government
Water Resources Department (Minor Irrigation)

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಶ್ರೀ ಹೆಚ್.ಎ. ಕೆಂಪರಾಜ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರಿಗೆ ರಜಾ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರ ಪತ್ರಗಳ ಸಂಖ್ಯೆ ಎ2–ರಜೆ–ಸಿಆರ್–08/2011–12 ದಿನಾಂಕ: 04–05–2011.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 112 ಅಪಸೇ 2011, ಬೆಂಗಳೂರು, ದಿನಾಂಕ: 06–06–2011.

ಶ್ರೀ ಹೆಚ್.ಎ.ಕೆಂಪರಾಜ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರ ಸಕ್ರಮಗೊಳ್ಳದೇ ಇರುವ ದಿನಾಂಕ 01–09–2010 ರಿಂದ 06–02–2011 ರವರೆಗಿನ ಅವಧಿಯನ್ನು ವೈಯಕ್ತಿಕ ಕಾರಣಗಳ ಮೇಲೆ ಈ ಕೆಳಕಂಡಂತೆ ಪರಿಗಣಿಸಿ ಸಕ್ರಮಗೊಳಿಸಲು ಆದೇಶಿಸಿದೆ.

1)	ದಿನಾಂಕ **01–09–2010** ರಿಂದ **29–11–2010** ರವರೆಗೆ	90 ದಿನಗಳ ಪರಿವರ್ತಿತ ರಜೆ –
2)	ದಿನಾಂಕ **30–11–2010** ರಿಂದ **06–02–2011** ರವರೆಗೆ	69 ದಿನಗಳ ಗಳಿಕೆ ರಜೆ –

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್ 1549

ವಡಗಾವೆ ಬಸವರಾಜ್
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
(ಸೇವೆಗಳು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಲಿನಿಕಲ್ ಸೌಲಭ್ಯ ಪಡೆಯುತ್ತಿರುವ ಖಾಸಗಿ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಕುಕ 546 ಎಂಪಿಎಸ್ 2010 ದಿನಾಂಕ 11.11.2010

2) ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ವೈಶಿನಿ/ಎಂಇಪಿ/28/2010–11 ದಿನಾಂಕ 09.03.2011

ಪ್ರಸ್ತಾವನೆ:

ಮೇಲೆ ಓದಲಾದ ಆದೇಶದಲ್ಲಿ ತಾಂತ್ರಿಕ ಕೋರ್ಸ್‌ಗಳನ್ನು ಪ್ರಾರಂಭಿಸಲು ತಾಂತ್ರಿಕ ಅಭಿಪ್ರಾಯ ಪಡೆಯಲು ಇರುವ ತನಿಖಾ ಶುಲ್ಕ ಹಾಗೂ ಸರ್ಕಾರದ ಆಸ್ಪತ್ರೆಗಳಲ್ಲಿ ಎಂ.ಬಿ.ಬಿ.ಎಸ್, ಬಿಡಿಎಸ್ ಹಾಗೂ ಇತರೆ ಕೋರ್ಸುಗಳಿಗೆ ಕ್ಲಿನಿಕಲ್ ಸೌಲಭ್ಯವನ್ನು ಪಡೆಯುತ್ತಿರುವ / ಪಡೆಯುವ ಸಂಸ್ಥೆಗಳಿಗೆ ಕ್ಲಿನಿಕಲ್ ಸೌಲಭ್ಯವನ್ನು ಪರಿಷ್ಕರಿಸಲಾಗಿದೆ.

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹಲವಾರು ಕೋರ್ಸುಗಳಿಗೆ ಕ್ಲಿನಿಕ್ ಸೌಲಭ್ಯವನ್ನು ಪಡೆಯುತ್ತಿರುವ / ಪಡೆಯುವ ಸಂಸ್ಥೆಗಳಿಗೆ ಪರಿಷ್ಕೃತ ಶುಲ್ಕವನ್ನು ನಿಗದಿಪಡಿಸಲಾಗಿದ್ದು ಈ ಆದೇಶದಲ್ಲಿ ಕೆಲವು ಕೋರ್ಸುಗಳಿಗೆ ಕ್ಲಿನಿಕಲ್ ಸೌಲಭ್ಯ ನಿಗಧಿಪಡಿಸಿರುವುದಿಲ್ಲ. ಆದ್ದರಿಂದ ಈ ಕೆಳಕಂಡ ಕೋರ್ಸುಗಳಿಗೆ ಕ್ಲಿನಿಕಲ್ ಶುಲ್ಕವನ್ನು ನಿಗದಿಪಡಿಸಲು ವೈದ್ಯಕೀಯ ಶಿಕ್ಷಣ ನಿರ್ದೇಶಕರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

1.	ಎಂಎಸ್ಸಿ ನರ್ಸಿಂಗ್	–	ರೂ.10,000/–	ಪ್ರತಿ ವರ್ಷ ಪ್ರತಿ ವಿದ್ಯಾರ್ಥಿಗೆ
2.	ಬೇಸಿಕ್ ಬಿಎಸ್ಸಿ ನರ್ಸಿಂಗ್ & ಪಿಸಿ ಬಿಎಸ್ಸಿ ನರ್ಸಿಂಗ್	–	ರೂ.6,000/–	"
3.	ಡಿಪ್ಲೊಮಾ ಇನ್ ನರ್ಸಿಂಗ್ (ಜಿಎನ್‌ಎಂ)	–	ರೂ.3,000/–	"
4.	ಡಿ ಫಾರ್ಮ್ ಪದವಿ	–	ರೂ.10,000/–	"
5.	ಎಂ ಫಾರ್ಮ್ ಪದವಿ	–	ರೂ.10,000/–	"
6.	ಬಿ. ಫಾರ್ಮ್ ಪದವಿ	–	ರೂ.6,000/–	"
7.	ಡಿ. ಫಾರ್ಮ ಕೋರ್ಸ್	–	ರೂ.3,000/–	"
8.	ಎಲ್ಲಾ ಸೂಪರ್ ಸ್ಪೆಷಾಲಿಟಿ ಕೋರ್ಸುಗಳಿಗೆ	–	ರೂ.1,20,000/–	"

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಮೇಲ್ಕಂಡ ಕೋರ್ಸುಗಳಿಗೆ ಕ್ಲಿನಿಕಲ್ ಸೌಲಭ್ಯವನ್ನು ಪಡೆಯುತ್ತಿರುವ/ಪಡೆಯುವ ಸಂಸ್ಥೆಗಳಿಗೆ ಕ್ಲಿನಿಕಲ್ ಶುಲ್ಕವನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 103 ಕೆವಿಎಂ 2011 ಬೆಂಗಳೂರು, ದಿನಾಂಕ 03–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕ್ಲಿನಿಕಲ್ ಸೌಲಭ್ಯವನ್ನು ಪಡೆಯುತ್ತಿರುವ/ಪಡೆಯುವ ಸಂಸ್ಥೆಗಳಿಗೆ ಕ್ಲಿನಿಕಲ್ ಶುಲ್ಕವನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

1.	ಎಂಎಸ್ಸಿ ನರ್ಸಿಂಗ್	–	ರೂ.10,000/–	ಪ್ರತಿ ವರ್ಷ ಪ್ರತಿ ವಿದ್ಯಾರ್ಥಿಗೆ
2.	ಬೇಸಿಕ್ ಬಿಎಸ್ಸಿ ನರ್ಸಿಂಗ್ & ಪಿಸಿ ಬಿಎಸ್ಸಿ ನರ್ಸಿಂಗ್	–	ರೂ.6,000/–	"
3.	ಡಿಪ್ಲೊಮಾ ಇನ್ ನರ್ಸಿಂಗ್ (ಜಿಎನ್‌ಎಂ)	–	ರೂ.3,000/–	"
4.	ಡಿ ಫಾರ್ಮ್ ಪದವಿ	–	ರೂ.10,000/–	"
5.	ಎಂ ಫಾರ್ಮ್ ಪದವಿ	–	ರೂ.10,000/–	"
6.	ಬಿ. ಫಾರ್ಮ್ ಪದವಿ	–	ರೂ.6,000/–	"
7.	ಡಿ. ಫಾರ್ಮ ಕೋರ್ಸ್	–	ರೂ.3,000/–	"
8.	ಎಲ್ಲಾ ಸೂಪರ್ ಸ್ಪೆಷಾಲಿಟಿ ಕೋರ್ಸುಗಳಿಗೆ	–	ರೂ.1,20,000/–	"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಸಾಯಿಬಾಬಾ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್ 1550

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

(ವೈದ್ಯಕೀಯ ಶಿಕ್ಷಣ)

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಕಂಇ 174 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ 14–06–2011

ಸರ್ಕಾರದ ಅದೇಶ ಸಂಖ್ಯೆ ಕಂಇ 174 ಟಿಎನ್‌ಆರ್ 2010, ಬೆಂಗಳೂರು ದಿನಾಂಕ 21–05–2010ರ ಆದೇಶದ ಭಾಗದಲ್ಲಿನ ಎರಡನೆ ಕಂಡಿಕೆಯಲ್ಲಿನ **"ಜಿಲ್ಲಾ ಖಜಾನೆ"** ಎಂಬುದರ ಬದಲಾಗಿ **"ರಾಜ್ಯ ಹುಜೂರ್ ಖಜಾನೆ"** ಎಂದು ತಿದ್ದುಕೊಂಡು ಓದುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಬಾಲಕೃಷ್ಣಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 1551

ಕಂದಾಯ ಇಲಾಖೆ (ವಿ.ನಿ. ಮತ್ತು ಸೇವೆಗಳು–2)

ಕಂದಾಯ ಸಚಿವಾಲಯ

ವಿಷಯ : ಶ್ರೀ ಕುಮಾರಸ್ವಾಮಿ, ಸರ್ವೇಯರ್, ತಹಶೀಲ್ದಾರ್ ಕಛೇರಿ, ಔರಾದ್ ಇವರನ್ನು ಸೇವೆಯಿಂದ ಅಮಾನತುಗೊಳಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 99 ಭೂದಾಸೇ (3) 2011 (ಭಾಗ), ಬೆಂಗಳೂರು, ದಿನಾಂಕ : 13–06–2011

ಶ್ರೀ ಕುಮಾರಸ್ವಾಮಿ, ಸರ್ವೇಯರ್, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಹಾಲಿ ತಾಲ್ಲೂಕು ಕಛೇರಿ , ಔರಾದ್ ಇವರು ಈ ಹಿಂದೆ 2006 ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ಕಛೇರಿಯಲ್ಲಿ ಭೂಮಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಸೋಮನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಜಮೀನು ಭೂಕಬಳಿಕೆಯಾಗಲು ಅನುಕೂಲ ಆಗುವ ರೀತಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗಳೊಂದಿಗೆ ಶಾಮೀಲಾಗಿ, ಕಾನೂನುಬಾಹಿರವಾಗಿ ನಕ್ಷೆ ಮತ್ತು ಸ್ಕೆಚ್‌ಗಳನ್ನು ತಯಾರಿಸಿಕೊಟ್ಟಿದ್ದಾರೆಂಬ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದಲೂ.

ಈ ಭೂಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನಪರಿಷತ್ತಿನ ಅರ್ಜಿಗಳ ಸಮಿತಿಗೆ ದೂರು ಅರ್ಜಿ ಸಂಖ್ಯೆ : 67/2010 ದಾಖಲಾಗಿದ್ದು, ಸಮಿತಿಯು ಈ ಬಗ್ಗೆ ವಿಚಾರಣೆ ನಡೆಸಿ, ಸಂಬಂಧಪಟ್ಟ ನೌಕರರ ವಿರುದ್ಧ ವಿಚಾರಣೆಯನ್ನು ಬಾಕಿ ಇಟ್ಟು ಅಮಾನತ್ತಿನಲ್ಲಿಡಲು ನಿರ್ದೇಶನ ನೀಡಿರುವುದರಿಂದಲೂ,

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಾಮಾವಳಿ 1957 ರ ನಿಯಮ 10(1) (ಡಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಶ್ರೀ ಕುಮಾರಸ್ವಾಮಿ, ಸರ್ವೇಯರ್, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಹಾಲಿ ತಾಲ್ಲೂಕು ಕಛೇರಿ , ಔರಾದ್ ಇವರ ವಿರುದ್ಧ ಶಿಸ್ತುಕ್ರಮವನ್ನು ಕಾಯ್ದಿಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ

ಅಮಾನತ್ತಿನ ಅವಧಿಯಲ್ಲಿ ಶ್ರೀ ಕುಮಾರಸ್ವಾಮಿ, ಸರ್ವೇಯರ್, ಇವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 98ರ ನಿಯಮದನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಈ ನೌಕರರು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ. ಚೌಕೀಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1552 ಕಂದಾಯ ಇಲಾಖೆ (ಭೂಮಾಪನ)

ಸಿಬ್ಬಂದಿ ಆಡಳಿತ ಮತ್ತು ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಕೆ.ಬಿ. ಚಿಕ್ಕಬೆಟ್ಟಯ್ಯ, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು, ಇವರ ವಿರುದ್ಧ ಲಂಚ ನಿರೋಧ ಕಾಯ್ದೆ. 1988 ಮತ್ತು ಭಾರತೀಯ ದಂಡ ಸಂಹಿತೆ, 1860 ರಡಿ ದಾಖಲಾದ ಪ್ರಕರಣದ ಅಭಿಯೋಜನಾ ಮಂಜೂರಾತಿ ಆದೇಶ.

ಓದಲಾಗಿದೆ :

1. ಅರಕ್ಷಕ ನಿರೀಕ್ಷಕರು ಹಾಗೂ ತನಿಖಾಧಿಕಾರಿಗಳು ನಗರ ವಿಭಾಗ, ಬೆಂಗಳೂರು, ಕರ್ನಾಟಕ ಲೋಕಾಯುಕ್ತ ಇವರ ವರದಿ ದಿನಾಂಕ: 15-03-2011
2. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ: 07-04-2011 ರ ಪತ್ರ ಮತ್ತು ಅಂತಿಮ ವರದಿ ಸಂಖ್ಯೆ: Lok/INV(G)/City/Crime-44/2010 (2 ಪ್ರಸ್ತಾವನೆಗಳು)

ಪ್ರಸ್ತಾವನೆ :

ಶ್ರೀ ಕೆ.ಬಿ. ಚಿಕ್ಕಬೆಟ್ಟಯ್ಯ, ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರ ವಿರುದ್ಧ ಮೊಕ್ಕದಮೆ ಸಂಖ್ಯೆ: 44/2010 ರಲ್ಲಿ ಅರಕ್ಷಕ ನಿರೀಕ್ಷಕರು, ಬೆಂಗಳೂರು, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ ಪೊಲೀಸು ಠಾಣೆಯಲ್ಲಿ ದಾಖಲಿಸಿರುವ, ಪ್ರಕರಣದ ತನಿಖಾಧಿಕಾರಿಯು ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: 2 ರ ಪತ್ರದೊಂದಿಗೆ ಕಳುಹಿಸುತ್ತಾ, ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988 ರ 19 ಕಲಂನಡಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಮೇಲೆ ಓದಲಾದ ಕ್ರಮ ಸಂಖ್ಯೆ: 2 ರ ಪತ್ರ ಸಂಖ್ಯೆ : Lok/INV(G)/City/Crime-44/2010 ದಿನಾಂಕ : 07-04-11 ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ ಕೆ.ಸಿ. ಲಕ್ಷ್ಮೀನಾರಾಯಣ ಪೊಲೀಸ್ ಇನ್‌ಸ್ಪೆಕ್ಟರ್ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಇವರ ಫಿರ್ಯಾದಿ ದಿನಾಂಕ: 21-09-10.
2. ಪ್ರಥಮ ವರ್ತಮಾನ ವರದಿ ಬೆಂಗಳೂರು ನಗರ ವಿಭಾಗ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ. ಸಂಖ್ಯೆ: 44/2010, ದಿನಾಂಕ: 21-09-10.
3. Proceedings of the Suprintendent of Police Karnataka Lokayukta, Bangalore, No. Lok/INV(G)/City/Crime-44/2010, dt: 21-09-2010
4. Warrant to search after information of a particular offence issued by Addl. City Civil and Sessions Judge, Bangalore dt: 21-09-2010 (Form No. 10)
5. ಪಂಚನಾಮೆ ದಿನಾಂಕ: 22-09-10.
6. ಶ್ರೀ ಹೆಚ್ ರಾಮಾಂಜನೇಯ, ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು, ಜಿಲ್ಲೆ ಇವರ ಪತ್ರ ಸಂಖ್ಯೆ: ಆರ್‌ಆರ್‌ಟಿ/ಜಿ/ಸಿಆರ್/03/09-10, ದಿನಾಂಕ: 28-10-2010 ಮತ್ತು 10-11-2010 ರ ವರದಿ.
7. ಕಂದಾಯ ಇಲಾಖೆಯ ತಜ್ಞರುಗಳು ನೀಡಿರುವ ವರದಿ.
8. ಶ್ರೀ ವೆಂಕಟೇಶ್, ತಹಶೀಲ್ದಾರ್ ರವರ ಕಾರ್ಯಾಲಯ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ/ಎನ್‌ಎಸಿಆರ್/653 and 700/2010-11, ದಿನಾಂಕ: 18-11-10 ರ ವರದಿ.

9. ಶ್ರೀ ರಂಗನಾಥ, ವಿಶೇಷ ತಹಶೀಲ್ದಾರ್ ರವರ ಕಾರ್ಯಲಯ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ರವರ ಪತ್ರ ಸಂಖ್ಯೆ: ಆರ್ ಆರ್ ಟಿ ಸಿ ಆರ್ 801/10–11, ದಿನಾಂಕ: 27–11–2010 ರ ವರದಿ.
10. ಶ್ರೀ ತಿಮ್ಮರಾಯಪ್ಪ ಬಿನ್ ಚಿಕ್ಕತಾಯಪ್ಪ ರವರ ಹೇಳಿಕೆ ಮತ್ತು ಸಂಬಂಧಿಸಿದ ಪಹಣಿಗಳು, ದಿನಾಂಕ: 17–12–2005 ರ ಜನರಲ್ ಫವರ್ ಆಫ್ ಅಟಾರ್ನಿ ಪ್ರತಿ.
11. ಬಿ.ಕೆ. ಪಾಳ್ಯ ಗ್ರಾಮಸ್ಥರಾದ ಶ್ರೀ ಕೃಷ್ಣಪ್ಪ, ಶ್ರೀ ದಿನೇಶ್‌ಕುಮಾರ್, ಶ್ರೀ ಮುನಿಯಪ್ಪ, ಶ್ರೀ ನರಸಿಂಹಮೂರ್ತಿ ರವರ ಹೇಳಿಕೆಗಳು.
12. ಶ್ರೀ ಬೈರಪ್ಪ ರವರಿಗೆ ಪರಿಹಾರ ಪಾವತಿಸಿರುವ ಬಗ್ಗೆ ಅಮಾನತ್ತುಪಡಿಸಿರುವ ಮೂಲಕ ಕಡತ (ಕೆ ಐ ಎ ಡಿ ಬಿ ಕಡತ)
13. ಬಿ.ಕೆ. ಪಾಳ್ಯದ ಸರ್ವೆ ನಂ. 7 ರಲ್ಲಿನ 04–00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶ್ರೀಮತಿ ಸವಿತಾ ಕೋಂ ರಘು ರವರಿಗೆ ಪರಿಹಾರ ಪಾವತಿಸಿರುವ ಅಸಲು ಕಡತ.
14. ಶ್ರೀಮತಿ ಲಕ್ಷ್ಮಿ, ಮ್ಯಾನೇಜರ್ ರವರ ವರದಿ.
15. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರ ಪತ್ರ ಸಂಖ್ಯೆ: ಕಕೈಪ್ರಅಮಂ/ಕೇಕ /ವಿಜಿ 4583/2009–10, ದಿನಾಂಕ: 27–07–2009 (ಪರಿಹಾರಧನ ವಿತರಿಸುವ ಮೊದಲು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲು ಸೂಚನೆ)
16. ವಿಶೇಷ ಜಿಲ್ಲಾಧಿಕಾರಿಗಳು, (ಜಾರಿದಳ) ಅನಧಿಕೃತ ನಿರ್ಮಾಣಗಳ ತಡೆ ಸೆಲ್, ಜಿಲ್ಲಾಧಿಕಾರಿಗಳ ಕಛೇರಿ, ಕೆ.ಜಿ.ರಸ್ತೆ, ಬೆಂಗಳೂರು–9 ರವರು ಮಂಜೂರಿ, ಅನಧಿಕೃತ/ಒತ್ತುವರಿ/ಖಾಲಿ ಇವರು ಜಮೀನಿನ ವಿವರವನ್ನು ನೀಡಿರುವ ಮಾಹಿತಿ.
17. ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಪತ್ರ ಸಂಖ್ಯೆ: ಆರ್ ಆರ್ ಟಿ/ಸಿಆರ್/156/09–10, ದಿನಾಂಕ: 25–09–09.
18. ತಹಶೀಲ್ದಾರ್ ರವರ ಕಾರ್ಯಾಲಯ, ಬೆಂಗಳೂರು (ಅಪರ) ತಾಲ್ಲೂಕು ರವರ ಪತ್ರ ಸಂಖ್ಯೆ: ಎಲ್ ಎನ್ ಡಿ/ಸಿಆರ್/30/09–10, ದಿನಾಂಕ: 27–05–09.
19. (1) ಶ್ರೀ ಬಿ ಎಂ ನಾಗಭೂಷಣ್, ವಿಷಯ ನಿರ್ವಾಹಕರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (2) ಶ್ರೀ ಬಸವರಾಜು, ಉತ್ತನಹಳ್ಳಿ (3) ಶ್ರೀ ನರಸಿಂಹಮೂರ್ತಿ, ಬಂಡಿಕೊಡಿಗೇಹಳ್ಳಿ (4) ಶ್ರೀ ಹೊನ್ನಶ್ಯಾಮೇಗೌಡ, ಶಿರಸ್ತೇದಾರ್ (5) ಶ್ರೀ ಕೆ.ಪಿ. ಸೋಮಸುಂದರಬಾಬು, ನಿವೃತ್ತ ತಹಶೀಲ್ದಾರ್ ಇವರ ಹೇಳಿಕೆ.
20. ಸರ್ವೆ ತಜ್ಞರು ತಮ್ಮ ಸ್ಥಳ ಪರಿಶೀಲನೆ ಮಾಡಿ ಸರ್ವೆ ತಂಡದವರು ನೀಡಿರುವ ವರದಿ.
21. ಶ್ರೀ ಶ್ರೀಧರಮೂರ್ತಿ, ಶಿರಸ್ತೇದಾರ್, ಕೆ.ಐ.ಎ.ಡಿ.ಬಿ. ಅಧಿಕಾರಿ ಶ್ರೀ ದೊರೆಸ್ವಾಮಿ ರವರ ವರದಿ ಮತ್ತು ಹೇಳಿಕೆ.
22. ಶ್ರೀ ರಂಗರಾಜು, ಶಿರಸ್ತೇದಾರ್, ದೇವನಹಳ್ಳಿ ಇವರ ಹೇಳಿಕೆ ಮತ್ತು ಮಾಹಿತಿ.
23. ಬೆಂಗಳೂರು ಅಂಕಾಲಜಿ ರವರು ನೀಡಿರುವ ವರದಿ ಮತ್ತು ದಾಖಲಾತಿ.
24. ಎಸ್.ವಿ.ಎನ್. ಹೈಸ್ಕೂಲ್, ಶ್ರೀರಾಮಪುರ ರವರು ನೀಡಿರುವ ದಾಖಲಾತಿ.
25. ಶ್ರೀ ಅಬ್ದುಲ್ ಖಯ್ಯೂಂ, ವಿಶೇಷ ಜಿಲ್ಲಾಧಿಕಾರಿಗಳು, ಕೆ.ಐ.ಎ.ಡಿ.ಬಿ. ರವರು ನೀಡಿರುವ ವರದಿ.

3. ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಏರೋಸ್ಪೇಸ್, ಐ.ಟಿ. ಪಾರ್ಕ್, ಹಾರ್ಡ್‌ವೇರ್ ಪಾರ್ಕ್ ಯೋಜನೆಗಳಿಗಾಗಿ ದುಮ್ಮನಹಳ್ಳಿ ಸಿಂಗಹಳ್ಳಿ, ಉಣಸೂರು, ಜೊನ್ನಹಳ್ಳಿ, ಬಾಲದಿಮ್ಮನಹಳ್ಳಿ, ಕವಡದಾಸನಹಳ್ಳಿ, ಭಟ್ರಮಾರನಹಳ್ಳಿ, ಬಂಡಿಕೊಡಗೇಹಳ್ಳಿಪಾಳ್ಯ, ಅರೆಬಿನ್ನಮಂಗಲ, ಗೊಲ್ಲಹಳ್ಳಿ, ಬಂಡಿಕೊಡಿಗೇಹಳ್ಳಿ, ಬಾಗಲೂರು, ಹೂವಿನನಾಯಕನಹಳ್ಳಿ ಮತ್ತು ಮಹದೇವಕೊಡಿಗೇಹಳ್ಳಿ ಹಳ್ಳಿಗಳ ವಿವಿಧ ಸರ್ವೆ ನಂಬರುಗಳಲ್ಲಿ ಒಟ್ಟು 3266–10 1/4 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಪೈಕಿ ಒಟ್ಟು 591–001/2 ಎಕರೆ ಜಮೀನಿಗೆ ದಿನಾಂಕ : 03–07–2009 ರಿಂದ 11–11–2009 ರ ಅವಧಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭೀವೃದ್ಧಿ ಮಂಡಳಿಯಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಶ್ರೀ ಕೆ.ಬಿ. ಚಿಕ್ಕಬೆಟ್ಟಯ್ಯ ರವರು ಪರಿಹಾರ ಪಾವತಿಸಿರುತ್ತಾರೆ. ಈ ಪೈಕಿ ಕಾನೂನುಗಳನ್ನು ಉಲ್ಲಂಘನೆ ಮಾಡಿ ಅಂದಾಜು 10–04 ಎಕರೆ ಜಮೀನಿಗೆ ಒಟ್ಟು ರೂ. 5.24 ಕೋಟಿಗಳ ಪರಿಹಾರವನ್ನು ವಿತರಿಸಿರುತ್ತಾರೆಂಬ ಮಾಹಿತಿಯ ವರದಿಯನ್ನು ಶ್ರೀ ಲಕ್ಷ್ಮೀನಾರಾಯಣ,, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಈ ವರದಿಯನ್ನು ಆಧರಿಸಿ, ಶ್ರೀ ಚಿಕ್ಕಬೆಟ್ಟಯ್ಯ ಹಾಗೂ ಇತರರ ವಿರುದ್ಧ ದಿನಾಂಕ: 21–09–2010 ರಂದು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಮೊಕದ್ದಮೆ ಸಂಖ್ಯೆ: 44/2010 ರಲ್ಲಿ ಕಲಂ 7 13(1)(ಡಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ, 1988 ಮತ್ತು ಕಲಂ 465, 468, 471, 420, 120ಬಿ Indian Penal Code ರೀತ್ಯಾ ಪ್ರಕರಣವನ್ನು ದಾಖಲಿಸಲಾಗಿದೆ.

4. ನಂತರ, ಸಕ್ಷಮ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆದು, ದಿನಾಂಕ: 22–09–2010 ರಂದು ಶ್ರೀ ಚಿಕ್ಕಬೆಟ್ಟಯ್ಯ ರವರು ವಾಸದ ಮನೆ ನಂ. 589, 1ನೇ ಕ್ರಾಸ್, ಕೆ.ಜಿ. ಬಡಾವಣೆ, 3ನೇ ಹಂತ, 3ನೇ ಬ್ಲಾಕ್, ಬನಶಂಕರಿ, ಬೆಂಗಳೂರು–85 ಅನ್ನು ಪಂಚರ ಸಮಕ್ಷಮ ಶೋಧನೆ ನಡೆಸಿ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಶೋಧನಾ ಕಾಲದಲ್ಲಿ ಶ್ರೀ ಚಿಕ್ಕಬೆಟ್ಟಯ್ಯ ರವರು ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಆದಾಯ/ ಅಕ್ರಮ ಆಸ್ತಿಗಳಿರುವುದು ಕಂಡುಬಂದಿರುತ್ತದೆ.

5. ದಿನಾಂಕ: 25–09–10 ರಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮತ್ತು ದಿನಾಂಕ : 29–09–10 ರಂದು ಶ್ರೀ ಲಕ್ಷ್ಮೀನಾರಾಯಣ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ ಇವರಿಂದ ಸಂಬಂಧಿಸಿದ ಕಡತಗಳನ್ನು ಪಂಚರ ಸಮಕ್ಷಮ ತನಿಖಾಧಿಕಾರಿಯಾದ ಶ್ರೀ ಕೆ. ರವಿಶಂಕರ್ ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರು ವಶಪಡಿಸಿಕೊಂಡಿರುತ್ತಾರೆ.

6. ಬಿ.ಕೆ. ಪಾಳ್ಯ ಗ್ರಾಮದ ಸರ್ವೆ ನಂ 7ರ ಪೈಕಿ 06–00 ಎಕರೆ ಜಮೀನನ್ನು ಹೆಣ್ಣೂರು ಗ್ರಾಮದ ನಿವಾಸಿಯಾದ ಚಿಕ್ಕತಾಯಪ್ಪನವರ ಮಕ್ಕಳಾದ ಶ್ರೀ ತಿಮ್ಮರಾಯಪ್ಪ ಮತ್ತು ಶ್ರೀ ರಮೇಶ್ ಎಂಬುವವರು 1972 ರಿಂದ ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡಿರುತ್ತಾರೆ. 1972 ರಿಂದ 1988 ನೇ ಸಾಲುಗಳವರೆಗೆ ಇವರುಗಳ ಹೆಸರು ಪಹಣಿ ಪತ್ರಿಕೆಯಲ್ಲಿ ಬಂದಿರುತ್ತದೆ. ಇವರು ದಿನಾಂಕ: 26–03–1999 ರಂದು ಈ

ಜಮೀನನ್ನು ಸಕ್ರಮಗೊಳಿಸುವಂತೆ ಸಂಬಂಧಿಸಿದವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಈ ರೀತಿ ಇರುವಾಗ, ಶ್ರೀ ರಘು ಮತ್ತು ಶ್ರೀ ಸೂರ್ಯಕಾಂತ ಎಂಬುವವರು 2005 ನೇ ಸಾಲಿನಲ್ಲಿ ಸದರಿ ಜಮೀನಿನ ದಾಖಲಾತಿಗಳನ್ನು ಮಾಡಿಸಿಕೊಡುವುದಾಗಿ ತಿಳಿಸಿ, ಶ್ರೀ ತಿಮ್ಮರಾಯಪ್ಪ ಮತ್ತು ಶ್ರೀ ರಮೇಶ್ ರವರಿಂದ ತಮ್ಮ ಹೆಸರಿಗೆ ಜಿ ಪಿ ಎ ಮಾಡಿಸಿಕೊಂಡು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುತ್ತಾರೆ. ನಂತರ ಈ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆ ಐ ಎ ಡಿ ಬಿ ಸಂಸ್ಥೆಯು ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಆದರೆ ಈ ಅಧಿಸೂಚನೆಯಲ್ಲಿ ಇವರುಗಳ ಹೆಸರು ಇರುವುದಿಲ್ಲ. ಭೂ ಪರಿಹಾರ ಹಣವನ್ನು ಅಕ್ರಮವಾಗಿ ಪಡೆಯುವ ದುರುದ್ದೇಶದಿಂದ ಶ್ರೀ ರಘು ಮತ್ತು ಶ್ರೀ ಸೂರ್ಯಕಾಂತ ರವರು ತಮ್ಮ ತಂದೆ ಶ್ರೀ ಭೈರಪ್ಪ ರವರ ಹೆಸರಿಗೆ ಸದರಿ ಜಮೀನಿನ ಪೈಕಿ 04-00 ಎಕರೆ ಮಂಜೂರಾಗಿದೆಯೆಂಬಂತೆ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ದಿನಾಂಕ: 27-01-2007 ರಲ್ಲಿ ಶ್ರೀ ಭೈರಪ್ಪ ರವರ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಸರ್ಕಾರಿ ಗೋಮಾಳ ಜಮೀನಿಗೆ ಪರಿಹಾರ ಪಾವತಿಸುವ ಮುನ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ವಿಶೇಷ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆಯಬೇಕಾಗಿದ್ದು, ದಿನಾಂಕ: 07-08-09 ರ ಸೂಚನಾ ಪತ್ರದಂತೆ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಕಛೇರಿಯಿಂದ ಭೂ ಕಂದಾಯ ಕಾಯ್ದೆ ಕಲಂ 136(3) ವರದಿಯನ್ನು ಪಡೆದು ಬೂ ಪರಿಹಾರಕ್ಕೆ ಶಿಫಾರಸ್ಸು ಮಾಡಲು ಆದೇಶವಾಗಿದ್ದರೂ ಸಹ ಇದನ್ನು ಪರಿಗಣಿಸದೇ ಶ್ರೀ ಚಿಕ್ಕಬೆಟ್ಟಯ್ಯ ರವರು ಪರಿಹಾರ ವಿತರಿಸಿರುತ್ತಾರೆಂದೂ. ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರುಗಳ ವರದಿಗಳನ್ನು ಸರಿಯಾಗಿ ಪರಿಶೀಲಿಸದೆ ಆರೋಪಿತ ಫಲಾನುಭವಿ ಶ್ರೀ ಬೈರಪ್ಪ ರವರಿಗೆ ಪರಿಹಾರ ಮಂಜೂರು ಮಾಡಿದ ನಂತರ ಸದರಿ ಜಮೀನನ್ನು ಜಿಲ್ಲಾಧಿಕಾರಿಗಳು ಕಲಂ 136(3) ರಡಿ ಪ್ರಕರಣ ದಾಖಲಿಸಿ ಮುಟ್ಟುಗೋಲು ಹಾಕಿಕೊಂಡಿರುತ್ತಾರೆಂದೂ. ತನಿಖಾ ಸಮಯದಲ್ಲಿ ಸಂಗ್ರಹಿಸಿದ ದಾಖಲೆಗಳು, ಸಾಕ್ಷಿದಾರರ ಹೇಳಿಕೆಗಳು ಇತ್ಯಾದಿಗಳಿಂದ ಸದರಿ ಜಮೀನನ್ನು ಶ್ರೀ ತಿಮ್ಮರಾಯಪ್ಪ ರವರು ಸುಮಾರು 35 ವರ್ಷಗಳಿಂದ ಅನಧಿಕೃತ ಉಳುಮೆ ಮಾಡುತ್ತಿದ್ದು, ಈ ಜಮೀನನ್ನು ಸ್ವಾಧೀನಕ್ಕೆ ಪಡೆಯಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಅಕ್ರಮ ಪರಿಹಾರ ಪಡೆಯುವ ದುರುದ್ದೇಶದಿಂದ ಇತರೇ ಆರೋಪಿಗಳು ಸೃಷ್ಟಿಸಿ ಸಲ್ಲಿಸಿದ ನಕಲಿ ದಾಖಲಾತಿಗಳನ್ನು ಒಪ್ಪಿಕೊಂಡು, ಇದು ಗೋಮಾಳ ಜಮೀನೆಂದು ಗೊತ್ತಿದ್ದರೂ, ಮೂಲ ಮಂಜೂರಾತಿ ಕಡತ ಇತ್ಯಾದಿ ದಾಖಲಾತಿಗಳನ್ನು ಪರಿಶೀಲಿಸದೇ ಶ್ರೀ ಚಿಕ್ಕಬೆಟ್ಟಯ್ಯ ರವರು ರೂ. 2.48 ಕೋಟಿ ಗಳ ಪರಿಹಾರ ಹಣವನ್ನು ಶ್ರೀ ಬೈರಪ್ಪ ರವರಿಗೆ ಮಂಜೂರು ಮಾಡುವ ಮೂಲಕ ಮಂಡಳಿ/ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿ ಮೋಸವೆಸಗಿರುತ್ತಾರೆಂದೂ, ತನ್ನ ಕರ್ತವ್ಯದಲ್ಲಿ ದುರ್ನಡತೆ ಎಸಗಿರುತ್ತಾರೆಂದೂ ಇತ್ಯಾದಿ ವಿದ್ಯಮಾನಗಳನ್ನು ತನಿಖಾಧಿಖಾರಿಗಳು ತಮ್ಮ ತನಿಖಾ ವರದಿಯಲ್ಲಿ ಸಾಕ್ಷ್ಯಾಧಾರಗಳ ಸಹಿತ ವಿವರಿಸಿರುತ್ತಾರೆ.

7. ಬಿ.ಕೆ. ಪಾಳ್ಯ ಗ್ರಾಮದ ಸರ್ವೇ ನಂ 7 ರ ಪೈಕಿ 06-00 ಎಕರೆ ಜಮೀನನ್ನು ಹೆಣ್ಣೂರು ಗ್ರಾಮದ ನಿವಾಸಿಯಾದ ಚಿಕ್ಕತಾಯಪ್ಪನವರ ಮಕ್ಕಳಾದ ಶ್ರೀ ತಿಮ್ಮರಾಯಪ್ಪ ಮತ್ತು ಶ್ರೀ ರಮೇಶ್ ಎಂಬುವವರು 1972 ರಿಂದ ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡಿರುತ್ತಾರೆ. 1972 ರಿಂದ 1988 ನೇ ಸಾಲುಗಳವರೆಗೆ ಇವರುಗಳ ಹೆಸರು ಪಹಣಿ ಪತ್ರಿಕೆಯಲ್ಲಿ ಬಂದಿರುತ್ತದೆ. ಇವರು ದಿನಾಂಕ 26-03-1999 ರಂದು ಈ ಜಮೀನನ್ನು ಸಕ್ರಮಗೊಳಿಸುವಂತೆ ಸಂಬಂಧಿಸಿದವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಈ ರೀತಿ ಇರುವಾಗ ಶ್ರೀ ರಘು ಮತ್ತು ಶ್ರೀ ಸೂರ್ಯಕಾಂತ ಎಂಬುವವರು 2005 ನೇ ಸಾಲಿನಲ್ಲಿ ಸದರಿ ಜಮೀನಿನ ದಾಖಲಾತಿಗಳನ್ನು ಮಾಡಿಸಿಕೊಡುವುದಾಗಿ ತಿಳಿಸಿ, ಶ್ರೀ ತಿಮ್ಮರಾಯಪ್ಪ ಮತ್ತು ಶ್ರೀ ರಮೇಶ್ ರವರಿಂದ ತಮ್ಮ ಹೆಸರಿಗೆ ಜಿಪಿಎ ಮಾಡಿಸಿಕೊಂಡು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುತ್ತಾರೆ. ನಂತರ ಈ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆಐಎಡಿಬಿ ಸಂಸ್ಥೆಯು ಸ್ವಾಧಿನ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಆದರೆ ಈ ಅಧಿಸೂಚನೆಯಲ್ಲಿ ಇವರುಗಳ ಹೆಸರು ಇರುವುದಿಲ್ಲ. ಭೂ ಪರಿಹಾರ ಹಣವನ್ನು ಅಕ್ರಮವಾಗಿ ಪಡೆಯುವ ದುರುದ್ದೇಶದಿಂದ ಶ್ರೀ ರಘು ರವರ ಪತ್ನಿ ಶ್ರೀಮತಿ ಸವಿತಾ ರವರ ತಂದೆ ಶ್ರೀ ಕೃಷ್ಣಸ್ವಾಮಿ ರವರ ಹೆಸರಿಗೆ ಸದರಿ ಜಮೀನಿನ ಪೈಕಿ 04-00 ಎಕರೆ ಮಂಜೂರಾಗಿದೆಯೆಂಬಂತೆ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ದಿನಾಂಕ : 27-01-2007 ರಲ್ಲಿ ಶ್ರೀ ಕೃಷ್ಣಸ್ವಾಮಿ ರವರ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಸರ್ಕಾರಿ ಗೋಮಾಳ ಜಮೀನಿಗೆ ಪರಿಹಾರ ಪಾವತಿಸುವ ಮುನ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ವಿಶೇಷ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆಯಬೇಕಾಗಿದ್ದು, ದಿನಾಂಕ : 07-08-09 ರ ಸೂಚನಾ ಪತ್ರದಂತೆ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಕಛೇರಿಯಿಂದ ಭೂ ಕಂದಾಯ ಕಾಯ್ದೆ ಕಲಂ 136(3) ವರದಿಯನ್ನು ಪಡೆದು ಭೂ ಪರಿಹಾರಕ್ಕೆ ಶಿಫಾರಸ್ಸು ಮಾಡಲು ಅದೇಶವಾಗಿದ್ದರೂ ಸಹ ಇದನ್ನು ಪರಿಗಣಿಸದೇ ಶ್ರೀ ಚಿಕ್ಕಬೆಟ್ಟಯ್ಯ ರವರು ಪರಿಹಾರ ವಿತರಿಸಿರುತ್ತಾರೆಂದೂ, ಸಂಭಂಧಿಸಿದ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರುಗಳ ವರದಿಗಳನ್ನು ಸರಿಯಾಗಿ ಪರಿಶೀಲಿಸದೆ ಆರೋಪಿತ ಫಲಾನುಭವಿ ಶ್ರೀಮತಿ ಸವಿತಾ ರವರ ತಂದೆ ಶ್ರೀ ಕೃಷ್ಣಸ್ವಾಮಿ ಬಿನ್ ಪೆರುಮಾಳ್ ರವರಿಗೆ ಪರಿಹಾರ ಮಂಜೂರು ಮಾಡಿದ ನಂತರ ಸದರಿ ಜಮೀನನ್ನು ಜಿಲ್ಲಾಧಿಕಾರಿಗಳು ಕಲಂ 136(3) ರಡಿ ಪ್ರಕರಣ ದಾಖಲಿಸಿ ಮುಟ್ಟುಗೋಲು ಹಾಕಿಕೊಂಡಿರುತ್ತಾರೆಂದೂ, ತನಿಖಾ ಸಮಯದಲ್ಲಿ ಸಂಗ್ರಹಿಸಿದ ದಾಖಲೆಗಳು, ಸಾಕ್ಷಿದಾರರ ಹೇಳಿಕೆಗಳು ಇತ್ಯಾದಿಗಳಿಂದ ಸದರಿ ಜಮೀನನ್ನು ಶ್ರೀ ತಿಮ್ಮರಾಯಪ್ಪ ರವರು ಸುಮಾರು 35 ವರ್ಷಗಳಿಂದ ಅನಧಿಕೃತ ಉಳುಮೆ ಮಾಡುತ್ತಿದ್ದು, ಈ ಜಮೀನನ್ನು ಸ್ವಾಧೀನಕ್ಕೆ ಪಡೆಯಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಅಕ್ರಮ ಪರಿಹಾರ ಪಡೆಯುವ ದುರುದ್ದೇಶದಿಂದ ಇತರೇ ಆರೋಪಿಗಳು ಸೃಷ್ಟಸಿ ಸಲ್ಲಿಸಿದ ನಕಲಿ ದಾಖಲಾತಿಗಳನ್ನು ಒಪ್ಪಿಕೊಂಡು. ಇದು ಗೋಮಾಳ ಜಮೀನೆಂದು ಗೊತ್ತಿದ್ದರೂ ಮೂಲ ಮಂಜೂರಾತಿ ಕಡತ ಇತ್ಯಾದಿ ದಾಖಲಾತಿಗಳನ್ನು ಪರಿಶೀಲಿಸದೇ ಶ್ರೀ ಚಿಕ್ಕಬೆಟ್ಟಯ್ಯ ರವರು ರೂ. 2.48 ಕೋಟಿ ಗಳ ಪರಿಹಾರ ಹಣವನ್ನು ಶ್ರೀಮತಿ ಸವಿತಾ ರವರಿಗೆ ಮಂಜೂರು ಮಾಡುವ ಮೂಲಕ ಮಂಡಳಿ/ ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿ ಮೋಸವೆಸಗಿರುತ್ತಾರೆಂದೂ, ತನ್ನ ಕರ್ತವ್ಯದಲ್ಲಿ ದುರ್ನಡತೆ ಎಸಗಿರುತ್ತಾರೆಂದೂ ಇತ್ಯಾದಿ ವಿದ್ಯಮಾನಗಳನ್ನು ತನಿಖಾಧಿಕಾರಿಗಳು ತಮ್ಮ ತನಿಖಾ ವರದಿಯಲ್ಲಿ ಸಾಕ್ಷಾಧಾರಗಳ ಸಹಿತ ವಿವರಿಸಿರುತ್ತಾರೆ.

8 ಮೇಲ್ಕಂಡ ಎರಡೂ ಪ್ರಕರಣಗಳಲ್ಲಿ, ಶ್ರೀ ಕೆ.ಬಿ. ಚಿಕ್ಕಬೆಟ್ಟಯ್ಯ , ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರು ಭಾರತೀಯ ದಂಡ ಸಂಹಿತ ಕಲಂ 120(ಬಿ) ಮತ್ತು 420 ಹಾಗೂ ಲಂಚ ನಿರೋಧ ಕಾಯ್ದೆ. 1988 ರ ಕಲಂ 13(1)(ಡಿ) ಸಹವಾಚ 13(2) ರ ಪ್ರಕಾರ ಶಿಕ್ಷಾರ್ಹ ಅಪರಾಧವೆಸಗಿರುವುದು ಸಾಕ್ಷ್ಯಾಧಾರಗಳಿಂದ ದೃಡಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ತನಿಖಾ ವರದಿಗಳನ್ನು ಸಕ್ಷಮ ಪ್ರಾಧಿಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಜಮೀನುಗಳ ಸರ್ಕಾರಿ ಗೋಮಾಳವಾಗಿದ್ದರೂ ಸಹ, ಮೋಸ ಮಾಡುವ ದುರುದ್ದೇಶದಿಂದ ಪರಿಹಾರ ಹಣವನ್ನು ಅಕ್ರಮವಾಗಿ ಪಾವತಿಸಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಆರ್ಥಿಕ

ನಷ್ಟವುಂಟು ಮಾಡುವ ಮೂಲಕ ಕರ್ತವ್ಯದಲ್ಲಿ ದುರ್ನಡತೆ ಎಸಗಿರುವುದು ತನಿಖಾ ವರದಿ ಹಾಗೂ ಸಾಕ್ಷ್ಯಾಧಾರಗಳನ್ನು ತನಿಖಾಧಿಕಾರಿಯು ಸಲ್ಲಿಸಿರುವುದನ್ನು ಪರಿಶೀಲಿಸಿ, ಅಕ್ರಮ ಲಾಭಗಳಿಸುವ ಸಂಚಿನಲ್ಲಿ ಆರೋಪಿತ ಅಧಿಕಾರಿ ಶ್ರೀ ಚಿಕ್ಕಬೆಟ್ಟಯ್ಯ ರವರು ಫಲಾನುಭವಿ ಆರೋಪಿಗಳು ಮತ್ತು ಇತರೇ ಆರೋಪಿಗಳೊಂದಿಗೆ ಒಳಸಂಚು ನಡೆಸಿ, ಷಾಮೀಲಾಗಿರುವುದು ದೃಢಪಡುವ ಕಾರಣ, ಕಂಡಿಕೆ 2 ರಲ್ಲಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿದ ನಂತರ ಆರೋಪಿತ ಅಧಿಕಾರಿ ಶ್ರೀ ಚಿಕ್ಕಬೆಟ್ಟಯ್ಯ ರವರನ್ನು ಲಂಚ ನಿರೋಧಕ ಕಾಯ್ದೆಯಡಿ ಅಭಿಯೋಜನೆಗೆ ಒಳಪಡಿಸಲು ಸಮರ್ಥನೀಯ ಕಾರಣಗಳು ಇರುವುದನ್ನು ಮನಗಂಡು ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಮೇಲ್ಕಂಡ ಆರೋಪಿತರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಹಾಗೂ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 017 ಕೆಇವಿ 11 ಬೆಂಗಳೂರು, ದಿನಾಂಕ : 21–06–2011

ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಶ್ರೀ ಕೆ.ಬಿ. ಚಿಕ್ಕಬೆಟ್ಟಯ್ಯ ರವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಹಾಗೂ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿದ್ದು, ಆರೋಪಿಯಾದ ಶ್ರೀ ಕೆ.ಬಿ. ಚಿಕ್ಕಬೆಟ್ಟಯ್ಯ, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಹಾಲಿ ಅಮಾನತ್ತಿನಲ್ಲಿರುವ ಇವರನ್ನು ಲಂಚ ನಿರೋಧಕ ಕಾಯ್ದೆ 1988 ರ ಕಲಂ 13(1)(ಡಿ) ಜೊತೆಯಲ್ಲಿ ಓದಲಾದ 13(2) ರ ಪ್ರಕಾರ ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 420 ಮತ್ತು 120(ಬಿ) ರಡಿಯಲ್ಲಿ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅಭೀಯೋಜನೆಗೊಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977 ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿ ಅಡಿಯಲ್ಲಿ ದಿನಾಂಕ: 21–06–11 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಪಿ. ಮೋಹನ್, ರಾಜ್
ಸರ್ಕಾರದ ಉಪ ಕಾರ್ಯದರ್ಶಿ
ಪಿ.ಆರ್. 1553 ಸಿಆಸುಇ (ಸೇವೆಗಳು)

ಸಿಬ್ಬಂದಿ ಆಡಳಿತ ಮತ್ತು ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಜಿ.ಸಿ. ಅನಿಲ್‌ಕುಮಾರ್, ಕೆಎಎಸ್ (ಹಿರಿಯ ಶ್ರೇಣಿ), ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಇವರ ವಿರುದ್ದ ಲಂಚ ನಿರೋಧಕ ಕಾಯ್ದೆ, 1988 ಮತ್ತು ಭಾರತೀಯ ದಂಡ ಸಂಹಿತೆ, 1860 ರಡಿ ದಾಖಲಾದ ಪ್ರಕರಣದ ಅಭೀಯೋಜನಾ ಮಂಜೂರಾತಿ ಆದೇಶ.

ಓದಲಾಗಿದೆ :

1. ಆರಕ್ಷಕ ಉಪ ಅಧೀಕ್ಷಕರು–1, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ತನಿಖಾ ವರದಿ ದಿನಾಂಕ: 14–02–11.
2. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ: 07–04–2011 ರ ಪತ್ರ ಸಂಖ್ಯೆ: Lok/INV(g)/City/Crime-42/2010 (ಫಲಾನುಭವಿ ಶ್ರೀಮತಿ ರತ್ನಮ್ಮ ಪ್ರಕರಣದ ಪ್ರಸ್ತಾವನೆ)

ಪ್ರಸ್ತಾವನೆ :

ಶ್ರೀ ಜಿ.ಸಿ. ಅನಿಲ್‌ಕುಮಾರ್, ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರ ವಿರುದ್ಧ ಮೊಕ್ಕದಮೆ ಸಂಖ್ಯೆ: 42/2010 ರಲ್ಲಿ ಆರಕ್ಷಕ ಉಪ ಅಧೀಕ್ಷಕರು–1, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. ಕರ್ನಾಟಕ ಲೋಕಾಯುಕ್ತ ಪೊಲೀಸು ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಪತ್ರದೊಂದಿಗೆ ಕಳುಹಿಸುತ್ತಾ, ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988 ರ 19 ಕಲಂನಡಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಪತ್ರ ಸಂಖ್ಯೆ : Lok/INV(G)/City/Crime-42/2010 ದಿನಾಂಕ : 07–04–11 (ಫನಾನುಭವಿ ಶ್ರೀಮತಿ ರತ್ನಮ್ಮ ಪ್ರಕರಣದ ಪ್ರಸ್ತಾವನೆ) ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

a) ಫಲಾನುಭವಿ ಆರೋಪಿ ಶ್ರೀಮತಿ ರತ್ನಮ್ಮ ರವರ ಪ್ರಕರಣದಲ್ಲಿನ ದಾಖಾಲಾತಿಗಳು ಮತ್ತು ಸಾಕ್ಷ್ಯಾಧಾರಗಳು.

1. ಶ್ರೀ ಕೆ.ಸಿ. ಲಕ್ಷ್ಮೀನಾರಾಯಣ ಪೊಲೀಸ್ ಇನ್ಸ್‌ಪೆಕ್ಟರ್ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಇವರ ಫಿರ್ಯಾದಿ ದಿನಾಂಕ: 21–09–10.
2. ಪ್ರಥಮ ವರ್ತಮಾನ ವರದಿ ಬೆಂಗಳೂರು ನಗರ ವಿಭಾಗ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 42/2010, ದಿನಾಂಕ: 21–09–10.
3. ಶ್ರೀ ಜಿ.ಸಿ. ಅನಿಲ್ ಕುಮಾರ್, ಹಿಂದಿನ ಎಸ್ ಎಲ್ ಎ ಓ–2, ಕೆ ಐ ಎ ಡಿ ಬಿ ಗಾಂಧಿನಗರ, ಬೆಂಗಳೂರು ಇವರ ಮನೆ ನಂ 257, 1ನೇ ಕ್ರಾಸ್, 2ನೇ ಬ್ಲಾಕ್, ಬಿಎಸ್‌ಕೆ 3ನೇ ಹಂತ, ಬೆಂಗಳೂರು–85 ಇದರ ಶೋಧನಾ ಮಹಜರು ದಿನಾಂಕ: 22–09–10.
4. ಶ್ರೀ ಜಿ.ಸಿ. ಅನಿಲ್ ಕುಮಾರ್ ರವರ ಹೇಳಿಕೆ ದಿನಾಂಕ: 22–09–2010.

5. Warrant to search after information of a particular offence issued by Addl. City Civil and Sessions Judge, Bangalore dt: 21-09-2010, 05-10-2010 and 5/10/2010 (Form No. 10)
6. ಕಡತಗಳನ್ನು ಅಮಾನತ್ತು ಪಡಿಸಿದ ಮಹಜರು ದಿನಾಂಕ : 27-09-2010.
7. ಬೆಂಗಳೂರು ಗಾಂಧೀನಗರ ಕೃಷ್ಣ ಟವರ್ಸ್‌ನ 3ನೇ ಮಹಡಿಯಲ್ಲಿರುವ ಶ್ರೀ ಚಲಪತಿ ಮತ್ತು ಶ್ರೀ ಶ್ರೀನಿವಾಸ, ವಕೀಲರು ಇವರ ಕಛೇರಿಯ ಮಹಜರು, ದಿನಾಂಕ: 13-10-10.
8. ಶ್ರೀ ಕೆ. ಮಧುಕರ ಶೆಟ್ಟಿ, ಆರಕ್ಷಕ ಅಧೀಕ್ಷಕರು, ನಗರ ವಿಭಾಗ, ಪೊಲೀಸ್ ವಿಭಾಗ ಕರ್ನಾಟಕ ಲೋಕಾಯುಕ್ತ ಇವರ ಜ್ಞಾಪನ ದಿನಾಂಕ: 22-09-2010.
9. ಖಾಸಗೀ ಆರೋಪಿಗಳಾದ ಶ್ರೀ ಪ್ರತಾಪ ಸಿಂಹ, ಶ್ರೀ ಎಸ್. ವೆಂಕಟೇಶ್ ಮತ್ತು ಶ್ರೀ ಅಪ್ರೋಜ್ ರವರ ಹೇಳಿಕೆಗಳು.
10. ಶ್ರೀಮತಿ ರತ್ನಮ್ಮ, ಸಿಂಗಹಳ್ಳಿ ಗ್ರಾಮ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಇವರ ಹೇಳಿಕೆ.
11. ಕುಮಾರ: ಮದನಕುಮಾರ್ ಬಿನ್ ಲೇಟ್ ನಾರಾಯಣಸ್ವಾಮಿ (ತಾಯಿ ಶ್ರೀಮತಿ ರತ್ನಮ್ಮ), ಸಿಂಗಹಳ್ಳಿ ಗ್ರಾಮ, ಜಾಲ ಹೋಬಳಿ ಇವರ ಹೇಳಿಕೆ.
12. ಕೆ ಐ ಎ ಡಿ ಬಿ ಕಛೇರಿಯಿಂದ ವಶಪಡಿಸಿಕೊಂಡಿರುವ ಕಡತ ಮತ್ತು ಅದರಲ್ಲಿರುವ ಟಿಪ್ಪಣಿಗಳು ಮತ್ತು ದಾಖಲಾತಿಗಳು . ಈ ದಾಖಲಾತಿಗಳಲ್ಲಿ ಭೂ ಪರಿಹಾರ ಧನ ಪಡೆದ ರಸೀದಿ ದಿನಾಂಕ: 20-05-2009 ರಲ್ಲಿ ಭೂ ಮಾಲೀಕರನ್ನು ಗುರುತಿಸಿದೆ ಎಂಬ ತಲೆಬರಹದಡಿಯಲ್ಲಿ ಖಾಸಗೀ ಆರೋಪಿಗಳಾದ ಶ್ರೀ ಎಂ ಆರ್. ಪ್ರತಾಪ ಸಿಂಹ ಮತ್ತು ಶ್ರೀ ಎಸ್ ವೆಂಕಟೇಶ್ ರವರು ಸಹಿ ಮಾಡಿರುವುದು.
13. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹೊಸಕೋಟೆ ಶಾಖೆಯಿಂದ ಪಡೆದ ಶ್ರೀಮತಿ ರತ್ನಮ್ಮ ರವರ ಖಾತೆಯ ಲೆಡ್ಜರ್ ಎಕ್ಸ್‌ಟ್ರಾಕ್ಟ್‌ಗಳು ಮತ್ತು ಅಸಲು ಇನ್ಸ್‌ಟ್ರುಮೆಂಟ್‌ಗಳು ಒಟ್ಟು 10 ಚೆಕ್ಕುಗಳನ್ನು ಖಾಸಗೀ ಆರೋಪಿ ಶ್ರೀ ಎಸ್ ವೆಂಕಟೇಶ್ ರವರ ಹೆಸರಿಗೆ ಶ್ರೀಮತಿ ರತ್ನಮ್ಮ ರವರ ನೀಡಿದ್ದು. ಇವುಗಳ ಒಟ್ಟು ಮೌಲ್ಯ ರೂ. 9853900-00 ಆಗಿರುತ್ತದೆ ಅರ್ಜಿ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಮತ್ತು ಅಸಲು ಚೆಕ್ಕುಗಳು ಮತ್ತು ಚಲನ್‌ಗಳು.
14. ಶ್ರೀ ಎಂ. ಎಸ್. ರಾಮಚಂದ್ರ, ವಿಷಯ ನಿರ್ವಾಹಕರು, ಕೆ ಐ ಎ ಡಿ ಬಿ ಕಛೇರಿ ಗಾಂಧೀನಗರ, ಬೆಂಗಳೂರು ಇವರಿಂದ ಪಡೆದಿರುವ ಪಶ್ನಿತ ಕಡತದ ಪರಿಶೀಲನಾ ವರದಿ.
15. ಶ್ರೀ ಟಿ. ಶ್ಯಾಮಭಟ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆ ಐ ಎ ಡಿ ಬಿ ರವರು ಆಪಾದಿತ ಸರ್ಕಾರಿ ನೌಕರ ಶ್ರೀ ಜಿ. ಸಿ. ಅನಿಲ್ ಕುಮಾರ್ ವಿ ಭೂ ಅ ರವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಬರೆದ ಪತ್ರ ದಿನಾಂಕ: 05-10-2009.
16. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 397 ಎಸ್‌ಪಿಕ್ಯು 2007, ದಿನಾಂಕ: 25-09-2008, ಇದರಲ್ಲಿ ಶ್ರೀಮತಿ ರತ್ನಮ್ಮ ರವರ ಹೆಸರು ನಮೂದಿಸಿರುವುದಿಲ್ಲ.
17. ಪರಿಹಾರ ಪಾವತಿಸಿದ ಅಸಲು ಚೆಕ್ಕು ಸಂಖ್ಯೆ: 935829, ದಿನಾಂಕ: 20-05-2009 ಅನ್ನು ಕಾರ್ಪೋರೇಷನ್ ಬ್ಯಾಂಕ್, ಎನ್ ಟಿ. ರಸ್ತೆ ಶಾಖೆ, ಬೆಂಗಳೂರು ಇಲ್ಲಿಂದ ಪಡೆದಿದೆ.
18. ಶ್ರೀ ಅಬ್ದುಲ್ ಖಯ್ಯೂಂ, ವಿಶೇಷ ಜಿಲ್ಲಾಧಿಕಾರಿಗಳು, ಕೆ ಐ ಎ ಡಿ ಬಿ, ಬೆಂಗಳೂರು ರವರ ವರದಿ ದಿನಾಂಕ: 24-02-2011 ರ ಪ್ರಕಾರ ಎಸ್ ಎಲ್ ಎ ಒ ಶ್ರೀ ಜಿ.ಸಿ. ಅನಿಲ್ ಕುಮಾರ್ ರವರು ಫಲಾನುಭವಿ ಶ್ರೀಮತಿ ರತ್ನಮ್ಮ ರವರ ಸ್ವಾಧೀನಾನುಭವದಲ್ಲಿ ಕೇವಲ 00-30 ಎಕರೆ ಜಮೀನು ಎಂಬುದು ಜೆ. ಎಂ.ಸಿ ಪ್ರಕಾರ ತಿಳಿದುಬರುತ್ತದೆಂದು ಅಲ್ಲದೇ ಪ್ರಶ್ನಿತ ಜಮೀನು ಸ್ವಾಧೀನಪಡಿಸಿದ ಪ್ರದೇಶದ ವ್ಯಾಪ್ತಿಯೊಳಗೆ ಬರುತ್ತದೆಯೇ ಅಥವಾ ಇಲ್ಲದೇ ಎಂಬುದನ್ನು ದೃಢಪಡಿಸಿಕೊಂಡಿಲ್ಲದಿರುವುದು ಅಕ್ರಮವಾಗಿರುವುದಾಗಿ ತಿಳಿಸಿರುವುದು.
19. ಫಲಾನುಭವಿ ಶ್ರೀಮತಿ ರತ್ನಮ್ಮ ರವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹೊಸಕೋಟೆ ಶಾಖೆ ಇಲ್ಲಿ ಉಳಿತಾಯ ಖಾತೆ ಸಂಖ್ಯೆ : 64042568717 ನ್ನು ತೆರೆಯಲು ಬ್ಯಾಂಕಿಗೆ ಸಲ್ಲಿಸಿರುವ ಅಕೌಂಟ್ ಓಪನಿಂಗ್ ಫಾರಂ ನಲ್ಲಿ ಖಾಸಗೀ ಆರೋಪಿ ಇಂಟ್ರಡ್ಯೂಸರ್ ಎಂದು ಸಹಿ ಮಾಡಿರುವುದು.
20. ಶ್ರೀಮತಿ ರತ್ನಮ್ಮ ರವರ ಬ್ಯಾಂಕ್ ಖಾತೆಯಿಂದ ಖಾಸಗಿ ಆರೋಪಿ ಶ್ರೀ ಎಸ್ ವೆಂಕಟೇಶ್ ರವರ ಹೆಸರಿಗೆ ರೂ. 9853900-00 ಮೌಲ್ಯದ ಒಟ್ಟು 10 ಚೆಕ್ಕುಗಳನ್ನು ನೀಡಲಾಗಿದೆ.
21. ಭೂ ಮಾಪಕರ ವರದಿ ದಿನಾಂಕ:20-01-2011.
22. ಇತರೇ ದಾಖಲಾತಿಗಳು.

3. ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಏರೋಸ್ಪೇಸ್, ಐ.ಟಿ. ಪಾರ್ಕ್, ಹಾರ್ಡ್‌ವೇರ್ ಪಾರ್ಕ್ ಯೋಜನೆಗಳಿಗಾಗಿ ದುಮ್ಮನಹಳ್ಳಿ ಸಿಂಗಹಳ್ಳಿ, ಉಣಸೂರು, ಜೊನ್ನಹಳ್ಳಿ, ಬಾಲದಿಮ್ಮನಹಳ್ಳಿ ಕವಡದಾಸನಹಳ್ಳಿ, ಛತ್ರಮಾರನಹಳ್ಳಿ, ಬಂಡಿಕೊಡಗೇಹಳ್ಳಿಪಾಳ್ಯ, ಅರೆಬಿನ್ನಮಂಗಲ, ಗೊಲ್ಲಹಳ್ಳಿ, ಬಂಡಿಕೊಡಿಗೇಹಳ್ಳಿ, ಬಾಗಲೂರು, ಹೂವಿನನಾಯಕನಹಳ್ಳಿ ಮತ್ತು ಮಹದೇವಕೊಡಿಗೇಹಳ್ಳಿ ಹಳ್ಳಿಗಳ ವಿವಿಧ ಸರ್ವೆ ನಂಬರುಗಳಲ್ಲಿ ಒಟ್ಟು 3266-10 1/4 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಪೈಕಿ ಒಟ್ಟು 90-38 1/2 ಎಕರೆ ಜಮೀನಿಗೆ ದಿನಾಂಕ : 26-03-2009 ರಿಂದ 15-06-2009 ರ ಅವಧಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಶ್ರೀ ಜಿ.ಸಿ. ಅನಿಲ್ ಕುಮಾರ್ ರವರು ಪರಿಹಾರ ಪಾವತಿಸಿರುತ್ತಾರೆ. ಈ ಪೈಕಿ ಕಾನೂನುಗಳನ್ನು ಉಲ್ಲಂಘನೆ ಮಾಡಿ ಒಟ್ಟು 90-38 1/2 ಎಕರೆ ಜಮೀನಿಗೆ ಒಟ್ಟು ರೂ. 56,12,22,500-00 ಗಳ ಪರಿಹಾರವನ್ನು ವಿತರಿಸಿರುತ್ತಾರೆಂಬ ಮಾಹಿತಿಯ ವರದಿಯನ್ನು ಶ್ರೀ ಲಕ್ಷ್ಮೀನಾರಾಯಣ,, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ತಯಾರಿಸಿ ಮೇಲಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಈ ವರದಿಯನ್ನು ಆಧರಿಸಿ, ಶ್ರೀ ಅನಿಲ್ ಕುಮಾರ್ ಹಾಗೂ ಇತರರ ವಿರುದ್ಧ ದಿನಾಂಕ: 21-09-2010

ರಂದು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ಮೊಕದ್ದಮೆ ಸಂಖ್ಯೆ: 42/2010 ರಲ್ಲಿ ಕಲಂ 7 13(1)(ಡಿ) ಜೊತಗೆ 13(2) ಲಂಚ ನಿರೋಧ ಕಾಯ್ದೆ, 1988 ಮತ್ತು ಕಲಂ 465, 468, 471, 420, 120ಬಿ Indian Penal Code ರೀತ್ಯಾ ಪ್ರಕರಣವನ್ನು ದಾಖಲಿಸಲಾಗಿದೆ.

4. ನಂತರ, ಸಕ್ಷಮ ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆದು, ದಿನಾಂಕ: 22-09-2010 ರಂದು ಶ್ರೀ ಅನಿಲ್ ಕುಮಾರ್ ರವರ ವಾಸದ ಮನೆ ನಂ. 257, 1ನೇ ಕ್ರಾಸ್, 2ನೇ ಬ್ಲಾಕ್, ಬಿಎಸ್‌ಕೆ 3ನೇ ಹಂತ, ಬೆಂಗಳೂರು-85 ಅನ್ನು ಪಂಚರ ಸಮಕ್ಷಮ ಶೋಧನೆ ನಡೆಸಿ ದಾಖಲಾತಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಶೋಧನಾ ಕಾಲದಲ್ಲಿ ಶ್ರೀ ಅನಿಲ್ ಕುಮಾರ್ ರವರ ಲಿಖಿತ ಹೇಳಿಕೆಯನ್ನು ಪಡೆಯಲಾಗಿದೆ.

5. ದಿನಾಂಕ: 27-09-10 ರಂದು ಮೊಕ್ಕದ್ದಮೆ ಸಂಖ್ಯೆ: 24/2010ರ ಸಂಬಂಧ ಶ್ರೀ ಲಕ್ಷ್ಮೀನಾರಾಯಣ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ ಇವರಿಂದ ಪ್ರಕರಣಕ್ಕೆ ಸಂಬಂಧಿಸಿದ 8 ಕಡತಗಳನ್ನು ಪಂಚರ ಸಮಕ್ಷಮ ತನಿಖಾಧಿಕಾರಿಯಾದ ಶ್ರೀ ಹೆಚ್.ಎಸ್. ಮಂಜುನಾಥ್, ಅರಕ್ಷಕ ಉಪ ಅಧೀಕ್ಷಕರು-1, ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ವಶಪಡಿಸಿಕೊಂಡಿರುತ್ತಾರೆ.

6. ಶ್ರೀ ಅನಿಲ್ ಕುಮಾರ್ ರವರು, ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಹುದ್ದೆಯಲ್ಲಿ ಕಾರ್ಯಭಾರ ಹೊಂದಿದ್ದ ಸಮಯದಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಸ್ವಾಧೀನಕ್ಕೆ ಒಳಪಟ್ಟ ಜಮೀನುಗಳಿಗೆ ಪರಿಹಾರ ಪಾವತಿಸುವ ಮೊದಲು, ಕಂದಾಯ ಇಲಾಖೆಯ ಸಹಯೋಗದೊಂದಿಗೆ ಸ್ವಾಧೀನಕ್ಕೆ ಒಳಪಟ್ಟ ಸರ್ಕಾರಿ ಜಮೀನನ್ನು ಸಮಗ್ರವಾಗಿ ಅಳತೆ ಮಾಡಿಸಿ, ಮಂಜೂರಾತಿ ವಿವರಗಳನ್ನು ಖಚಿತಪಡಿಸಿಕೊಂಡ ನಂತರ ಪರಿಹಾರ ಪಾವತಿಸಲು ಕ್ರಮವಹಿಸಬೇಕಾಗಿತ್ತು. ಆದರೆ ಇವರು ಫಲಾನುಭವಿ ಶ್ರೀಮತಿ ರತ್ನಮ್ಮ ರವರ ಪ್ರಕರಣದಲ್ಲಿ ಈ ಕ್ರಮ ಅನುಸರಿಸದೇ ದುರುದ್ದೇಶದಿಂದ ಪರಿಹಾರ ಪಾವತಿಸುವ ಮೂಲಕ ಅಕ್ರಮವೆಸಗಿರುತ್ತಾರೆಂದು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(4) ರಡಿ ಅಧಿಸೂಚನೆ ಹೊರಡಿಸುವ ಮುನ್ನ ಕೈಗೊಳ್ಳಲಾದ ಜೆ ಎಂ ಸಿ ಯಲ್ಲೂ ಸಹ ಪ್ರಶ್ನಿತ ಜಮೀನು ಸ್ವಾಧೀನಕ್ಕೆ ಒಳಪಟ್ಟ ಬಗ್ಗೆ ಮಾಹಿತಿ ಇಲ್ಲದಿದ್ದರೂ, ಒಂದು ವೇಳೆ ಪ್ರಶ್ನಿತ ಜಮೀನು ಭೂ ಸ್ವಾಧೀನ ಪ್ರದೇಶದೊಳಗೆ ಭೌತಿಕವಾಗಿ ಇದ್ದು, ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟು ಹೋಗಿರುವುದಾಗಿ ಇವರಿಗೆ ಮನವರಿಕೆಯಾಗಿದ್ದಲ್ಲಿ ಅಂತಹ ಜಮೀನನ್ನು ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಲು ವಿಧಿ 28(4) ರಡಿ ಹೊರಡಿಸಲಾದ ಅಧಿಸೂಚನೆಗೆ ಸೂಕ್ತ ತಿದ್ದುಪಡಿ ತಂದು ಪರಿಹಾರ ಪಾವತಿಸಲು ಕ್ರಮವಹಿಸಬಹುದಾಗಿತ್ತು ಆದರೆ ಇವರು ಈ ಕ್ರಮವನ್ನು ಅನುಸರಿಸಿಲ್ಲವೆಂದು, ಪ್ರಶ್ನಿತ ಜಮೀನು ಭೂ ಸ್ವಾಧೀನ ಪ್ರದೇಶದ ವ್ಯಾಪ್ತಿಯೊಳಗೆ ಬಂದಿರುವುಕ್ಕೆ ಕಂದಾಯ ಇಲಾಖೆಯ ಸಹಯೋಗದೊಂದಿಗೆ ಇವರು ಯಾವುದೇ ಕ್ರಮವನ್ನು ಅನುಸರಿಸದೇ ಅನರ್ಹ ಫಲಾನುಭವಿ ಶ್ರೀಮತಿ ರತ್ನಮ್ಮ ರವರಿಗೆ ರೂ. 2,51,10,000-00 ಗಳ ಪರಿಹಾರವನ್ನು ಅಕ್ರಮವಾಗಿ ಪಾವತಿಸಿರುತ್ತಾರೆಂದು ತನಿಖಾ ವರದಿಯ ಸಾರಾಂಶವಾಗಿರುತ್ತದೆ.

7. ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಜಾಲ ಹೋಬಳಿ, ಸಿಂಗಹಳ್ಳಿ ಗ್ರಾಮದ ಸರ್ವೆ ನಂ 6/ಪಿ1 ರ 04-02 ಎಕರೆ ಜಮೀನಿನ ಮಾಲೀಕರು ಶ್ರೀಮತಿ ರತ್ನಮ್ಮ ಕೋಂ ಲೇಟ್ ನಾರಾಯಣಸ್ವಾಮಿ ರವರಾಗಿದ್ದು,ಇವರ ಜಮೀನು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ಕಲಂ 28(4) ರಡಿ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಐ 397 ಎಸ್‌ಪಿಕ್ಯೂ 2007, ದಿನಾಂಕ: 25-09-2008 ರಲ್ಲಿ ಸೇರ್ಪಡೆಗೊಂಡಿಲ್ಲದಿದ್ದರೂ, ಅಂದರೆ ಇವರ ಜಮೀನು ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಡದಿದ್ದರೂ ಅನಕ್ಷರಸ್ಥರಾದ ಇವರಿಗೆ ಈ ಜಮೀನಿನ ಸಂಬಂಧ ಭೂ ಪರಿಹಾರ ಹಣ ಕೊಡಿಸುವುದಾಗಿ ಕೆಲವು ಖಾಸಗಿ ವ್ಯಕ್ತಿಗಳು/ ಆರೋಪಿತರು ಇವರನ್ನು ನಂಬಿಸಿ, ಭೂ ಪರಿಹಾರ ಹಣ ಪಡೆಯಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಅರ್ಜಿ ಹಾಕಿಸಿ, ಮಂಡಳಿಯ ವತಿಯಿಂದ ರೂ. 2,51,10,000-00 ಗಳ ಪರಿಹಾರ ಮೊತ್ತದ ಚೆಕ್ಕನ್ನು ಫಲಾನುಭವಿ ಆರೋಪಿ ಶ್ರೀಮತಿ ರತ್ನಮ್ಮ ರವರಿಗೆ ಕೊಡಿಸಿರುತ್ತಾರೆ. ಪರಿಹಾರ ಪಾವತಿ ನಿರ್ವಹಣೆಯ ಕಡತವನ್ನು ಭೂ ಮಾಪಕರು ಪರಿಶೀಲಿಸಿ ನೀಡಿದ ವರದಿಯಂತೆ ಮೂಲತಃ ಸಿಂಗಹಳ್ಳಿ ಗ್ರಾಮದ ರೀ ಸರ್ವೆ ನಂ 6 ಸರ್ಕಾರಿ ಗೋಮಾಳವಾಗಿದ್ದು, ಈ ಪೈಕಿ ಸರ್ವೆ ನಂ 128 ಎಂದು ದಿನಾಂಕ: 16-03-2005 ರಂದು ದುರಸ್ತಿ ಪೋಡಿಯಾಗಿರುತ್ತದೆ. ಆದರೆ ಪರಿಹಾರ ಕೋರಿ ಸಲ್ಲಿಸಿದ ನಕ್ಷೆಯಲ್ಲಿ ದುರಸ್ತಾದ ನಂಬರುಗಳ ಗಡಿಗಳನ್ನು ಗುರುತಿಸಿಕೊಳ್ಳದೆ ಮಂಜೂರಿ ನಕ್ಷೆಯನ್ನು ಆಧಾರವಾಗಿಟ್ಟುಕೊಂಡು ವಿಸ್ತೀರ್ಣ ನಮೂದಿಸಿರುವುದು ಕ್ರಮಬದ್ಧವಾಗಿರುವುದಿಲ್ಲವೆಂದು ಭೂ ಮಾಪಕರು ಅಭಿಪ್ರಾಯ ನೀಡಿರುತ್ತಾರೆ. ಈ ಎಲ್ಲ ನ್ಯೂನತೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಮತ್ತು ಮಂಡಳಿಯ ವ್ಯವಸ್ಥಾಪರಾದ ಶ್ರೀ ಟಿ. ಶಂಕರಪ್ಪ ರವರು ಅಧಿಸೂಚನೆ ಮತ್ತು ತಿದ್ದುಪಡಿ ಅಧಿಸೂಚನೆಗೆ ಒಳಪಡದ ಈ ಜಮೀನು ಭೂ ಸ್ವಾಧೀನಪಡಿಸಿದೆ ಎಂದು ಅಕ್ರಮ ಸಕ್ರಮದಡಿ ಭೂಮಂಜೂರಾತಿ ಆಗಿದ್ದು, ನೈಜತೆಯಿಂದ ಇರುತ್ತದೆಂದು ರೂ. 2,51,10,000-00 ಗಳ ಪರಿಹಾರ ಪಾವತಿಸಬಹುದೆಂದು ಸುಳ್ಳು ಮಾಹಿತಿಯನ್ನು ಕಡತದ ಟಿಪ್ಪಣಿ ಹಾಳೆಯಲ್ಲಿ ನಮೂದಿಸಿರುವ ಆಧಾರ ರಹಿತ ಅನುಮೋದನೆಯನ್ನು ಪರಿಗಣಿಸಿ ಕರ್ತವ್ಯ ಲೋಪವೆಸಗಿ, ಅಧಿಕಾರ ದುರುಪಯೋಗಪಡಿಸಿ ಶ್ರೀ ಜಿ ಸಿ ಅನಿಲ್ ಕುಮಾರ್ ರವರು ಪರಿಹಾರ ಕೋರಿ ಸಲ್ಲಿಸಲಾಗಿದ್ದ ಅರ್ಜಿಯ ದಾಖಲಾತಿಗಳ ಸತ್ಯಾಸತ್ಯತೆಯನ್ನು ಕೂಲಂಕಷವಾಗಿ ಪರಾಮರ್ಶನೆ ಮಾಡದೇ, ತಿರಸ್ಕರಿಸಬೇಕಾಗಿದ್ದ ಅರ್ಜಿಯನ್ನು ಮಾನ್ಯ ಮಾಡಿ ಕಾನೂನುಬಾಹಿರವಾಗಿ ಖಾಸಗಿ ಆರೋಪಿತರುಗಳೊಂದಿಗೆ ಷಾಮೀಲಾಗಿ ಪರಿಹಾರ ಹಣವನ್ನು ಮಂಜೂರು ಮಾಡಿರುತ್ತಾರೆ. ಸದರಿ ಅಕ್ರಮ ಮಂಜೂರಾತಿ ಹಣವನ್ನು ಪಡೆಯುವ ನಿಟ್ಟಿನಲ್ಲಿ, ಖಾಸಗಿ ಆರೋಪಿತರು ಫಲಾನುಭವಿ ಆರೋಪಿ ಶ್ರೀಮತಿ ರತ್ನಮ್ಮ ರವರನ್ನು ಕೆ ಐ ಎ ಡಿ ಬಿ ಕಛೇರಿಗೆ ಕರೆದುಕೊಂಡು ಹೋಗಿ ಪರಿಹಾರದ ಅರ್ಜಿ ಹಾಕಿಸಿರುವುದು, ಪರಿಹಾರ ಮೊತ್ತದ ಪೈಕಿ ಹೆಚ್ಚಿನ ಮೊತ್ತವನ್ನು ಸ್ವಂತ ಲಾಭಕ್ಕಾಗಿ ಖಾಸಗಿ ಆರೋಪಿಯು ಶ್ರೀಮತಿ ರತ್ನಮ್ಮ ರವರಿಂದ ಚೆಕ್ಕುಗಳ ಮೂಲಕ ಪಡೆದಿರುವುದು, ಲಂಚದ ಹಣಕ್ಕಾಗಿ ಶ್ರೀ ಅನಿಲ್ ಕುಮಾರ್ ರವರು ಬೇಡಿಕೆ ಇಟ್ಟಿರುವುದು ಮತ್ತು ಇದನ್ನು ಪಡೆದ ರೀತಿ ಇತ್ಯಾದಿ ವಿದ್ಯಮಾನಗಳನ್ನು ತನಿಖಾಧಿಕಾರಿಗಳು ತಮ್ಮ ತನಿಖಾ ವರದಿಯಲ್ಲಿ ಸಾಕ್ಷ್ಯಾಧಾರಗಳ ಸಹಿತ ವಿವರಿಸಿರುತ್ತಾರೆ.

8. ಮೇಲ್ಕಂಡ ಪ್ರಕರಣದಲ್ಲಿ ಶ್ರೀ ಜಿ.ಸಿ. ಅನಿಲ್ ಕುಮಾರ್ ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರು ಭಾರತೀಯ ದಂಡ ಸಂಹಿತೆ ಕಲಂ 120(ಬಿ) ಮತ್ತು 420 ಹಾಗೂ ಲಂಚ ನಿರೋಧ ಕಾಯ್ದೆ,1988 ರ ಕಲಂ 7, 13(1)(ಡಿ) ಸಹವಾಚ 13(2)ಪ್ರಕಾರ ಶಿಕ್ಷಾರ್ಹ ಅಪರಾಧವೆಸಗಿರುವುದು ಸಾಕ್ಷ್ಯಾಧಾರಗಳಿದ ದೃಢಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ತನಿಖಾ ವರದಿಯನ್ನು ಸಕ್ಷಮ ಪ್ರಾಧಿಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಜಮೀನು ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಡದಿದ್ದರೂ ಸಹ, ಮೋಸ ಮಾಡುವ ದುರುದ್ದೇಶದಿಂದ ಪರಿಹಾರ ಹಣವನ್ನು ಅಕ್ರಮವಾಗಿ ಪಾವತಿಸಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಆರ್ಥಿಕ ನಷ್ಟವುಂಟು ಮಾಡುವ ಮೂಲಕ ಕರ್ತವ್ಯದಲ್ಲಿ ದುರ್ನಡತೆ ಎಸಗಿರುವುದು ತನಿಖಾ ವರದಿ ಹಾಗೂ ಸಾಕ್ಷ್ಯಾಧಾರಗಳನ್ನು ತನಿಖಾಧಿಕಾರಿಯು ಸಲ್ಲಿಸಿರುವುದನ್ನು ಪರಿಶೀಲಿಸಿ, ಅಕ್ರಮ ಲಾಭಗಳಿಸುವ ಸಂಚಿನಲ್ಲಿ ಆರೋಪಿತ ಅಧಿಕಾರಿ ಶ್ರೀ ಅನಿಲ್ ಕುಮಾರ್ ರವರು ಫಲಾನುಭವಿ ಮತ್ತು ಇತರೇ ಆರೋಪಿಗಳೊಂದಿಗೆ

ಒಳಸಂಚು ನಡೆಸಿ, ಷಾಮೀಲಾಗಿರುವುದು ದೃಢಪಡುವ ಕಾರಣ, ಕಂಡಿಕೆ 2 ರಲ್ಲಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿದ ನಂತರ ಆರೋಪಿಯಾದ ಶ್ರೀ ಜಿ ಸಿ ಅನಿಲ್ ಕುಮಾರ್ ರವರನ್ನು ಲಂಚ ನಿರೋಧಕ ಕಾಯ್ದೆಯಡಿ ಅಭಿಯೋಜನೆಗೆ ಒಳಪಡಿಸಲು ಸಮರ್ಥನೀಯ ಕಾರಣಗಳು ಇರುವುದನ್ನು ಮನಗಂಡು ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಮೇಲ್ಕಂಡ ಆರೋಪಿತರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಹಾಗೂ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 022 ಕೆಇವಿ 11 (3) ಬೆಂಗಳೂರು, ದಿನಾಂಕ : 21–06–2011

ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಶ್ರೀ ಜಿ ಸಿ ಅನಿಲ್ ಕುಮಾರ್ ರವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಹಾಗೂ ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿದ್ದು, ಆರೋಪಿಯಾದ ಶ್ರೀ ಜಿ ಸಿ ಅನಿಲ್ ಕುಮಾರ್, ಕೆಎಎಸ್ (ಹಿರಿಯ ಶ್ರೇಣಿ), ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಗಾಂಧಿನಗರ, ಬೆಂಗಳೂರು ಹಾಲಿ ಅಮಾನತ್ತಿನಲ್ಲಿರುವ ಇವರನ್ನು ಲಂಚ ನಿರೋಧಕ ಕಾಯ್ದೆ 1988 ರ ಕಲಂ 7 13(1)(ಡಿ) ಜೊತೆಯಲ್ಲಿ ಓದಲಾದ 13(2) ರ ಪ್ರಕಾರ ಹಾಗೂ ಭಾರತೀಯ ದಂಡ ಸಂಹಿತೆಯ ಕಲಂ 420 ಮತ್ತು 120(ಬಿ) ರಡಿಯಲ್ಲಿ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೊಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಈ ಮೂಲಕ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977 ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿ ಅಡಿಯಲ್ಲಿ ದಿನಾಂಕ: 21–06–11 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಕೆ.ಪಿ. ಮೋಹನ್, ರಾಜ್)
ಸರ್ಕಾರದ ಉಪ ಕಾರ್ಯದರ್ಶಿ
ಸಿಆಸುಇ (ಸೇವೆಗಳು)

ಪಿ.ಆರ್. 1554

PERSONNEL AND ADMINISTRATIVE REFORMS SECRETARIAT
ADDENDUM

No. DPAR 594 SGO 2010, Bangalore, Dated ; 17-06-2011.

The terms and conditions of contract appointment of Prof S. Madeswaran, special officer (evaluatiion) planning, programme monitoring & statistics department issued in government order No. DPAR 442 SGO 2010, dated 11-1-2011. The following para has been added.

(13) **For journeys undertaken in public interest, he shall be entitled to receive T.A. & D.A. available to equivalent level officer as per the State rules under State Government.**

By Order and in the name of the Governor of Karnataka
A.R. Vijayananda Sharma
Under Secretary to Government
Department of Personnel and
Administrative Reforms (Services-3)

PR No. 1555

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಆರ್ಥಿಕ ಇಲಾಖೆಯ ನಿಯಂತ್ರಕರು (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿನ ಲೆಕ್ಕಾಧೀಕ್ಷಕರ ಹುದ್ದೆಯನ್ನು ತಾತ್ಕಾಲಿಕವಾಗಿ ಮುಂದುವರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 460 ಸಅಸೇ 2007, ದಿನಾಂಕ 25–02–2008
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 26 ಸಿಶಾಸೇ 2008, ದಿನಾಂಕ 23–05–2008
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 45 ಸಿಶಾಸೇ 2009, ದಿನಾಂಕ 25–04–2009
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 69 ಸಆಸೇ 2010, ದಿನಾಂಕ 17–09–2010
5. ಆರ್ಥಿಕ ಇಲಾಖೆಯ ಕಡತ ಸಂಖ್ಯೆ: ಆಇ 76 ಸಮಯ 2011

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಆರ್ಥಿಕ ಇಲಾಖೆಯ ನಿಯಂತ್ರಕರು (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿ ಒಂದು ಲೆಕ್ಕಾಧೀಕ್ಷಕರ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2) ಮತ್ತು (3)ರಲ್ಲಿ ಓದಲಾದ ಆದೇಶದಲ್ಲಿ ಆರ್ಥಿಕ ಇಲಾಖೆಯ ನಿಯಂತ್ರಕರು (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿನ ಲೆಕ್ಕಾಧಿಕಾರಿ ಹುದ್ದೆಯನ್ನು ಲೆಕ್ಕಪರಿಶೋಧನಾಧಿಕಾರಿ ಹುದ್ದೆಯನ್ನಾಗಿ ಉನ್ನತೀಕರಿಸಿ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಆದೇಶದಲ್ಲಿ ಆರ್ಥಿಕ ಇಲಾಖೆಯಲ್ಲಿನ ನಿಯಂತ್ರಕರು (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿನ ಲೆಕ್ಕಪರಿಶೋಧನಾಧಿಕಾರಿ ಹುದ್ದೆಯನ್ನು ದಿನಾಂಕ 25–02–2009 ರಿಂದ 24–02–2011 ರವರೆಗೆ ಮತ್ತು ಲೆಕ್ಕಾಧೀಕ್ಷಕರ ಹುದ್ದೆಯನ್ನು ದಿನಾಂಕ 25–05–2010 ರಿಂದ 24–05–2011 ರವರೆಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿತ್ತು. ಮೇಲೆ (5)ರಲ್ಲಿ ಓದಲಾದ ಕಡತದಲ್ಲಿ ಆರ್ಥಿಕ ಇಲಾಖೆಯಲ್ಲಿನ ಲೆಕ್ಕಪತ್ರ ನಿರ್ವಹಣೆ ಶಾಖೆಯ "ಲೆಕ್ಕಾಧೀಕ್ಷಕರ" ಹುದ್ದೆಯನ್ನು ದಿನಾಂಕ 25–05–2011 ರಿಂದ ಮತ್ತೆ ಒಂದು ವರ್ಷದ ಅವಧಿಗೆ ಮುಂದುವರೆಸುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 293 ಸಅಸೇ 2011, ಬೆಂಗಳೂರು, ದಿನಾಂಕ : 16-6-2011

ಕರ್ನಾಟಕ ಸರ್ಕಾರ ಸಚಿವಾಲಯದ ಆರ್ಥಿಕ ಇಲಾಖೆಯ ಕಂಟ್ರೋಲರ್ (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿನ ಲೆಕ್ಕಾಧೀಕ್ಷಕರ ಹುದ್ದೆಯನ್ನು ದಿನಾಂಕ 25-5-2011 ರಿಂದ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮುಂದುವರಿಸಿ ಆದೇಶಿಸಿದೆ.

ಈ ಅದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿ ಎಫ್‌ಪಿ 1996, ದಿನಾಂಕ 10-07-1996ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ. ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1556 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಕಾರ್ಮಿಕ ಇಲಾಖೆಯಲ್ಲಿನ ಬಾಲ ಕಾರ್ಮಿಕರ ಕೋಶವನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 100 ಸಸಿವಿ 1997, ದಿನಾಂಕ 17-06-1997
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 19 ಸಸಿವಿ 2004, ದಿನಾಂಕ 19-11-2004
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 343 ಸಅಸೇ 2009, ದಿನಾಂಕ 10-07-2009
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 280 ಸಅಸೇ 2010, ದಿನಾಂಕ 7-6-2010
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 458 ಸಅಸೇ 2008, ದಿನಾಂಕ 25-2-2011
6. ಕಾರ್ಮಿಕ ಇಲಾಖೆಯ ಕಡತ ಸಂಖ್ಯೆ: ಕಾಇ 46 ಸಿಎಲ್‌ಸಿ 2009

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ಬಾಲ ಕಾರ್ಮಿಕ ಕೋಶವನ್ನು ಸೃಜಿಸಿ ಕಾಲಕಾಲಕ್ಕೆ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ 18-06-2010 ರಿಂದ ಒಂದು ವರ್ಷದ ಅವಧಿಗೆ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕಾರ್ಮಿಕ ಇಲಾಖೆಯ (ಬಾಲ ಕಾರ್ಮಿಕ ಕೋಶ) ದಲ್ಲಿನ ವಿಶೇಷಾಧಿಕಾರಿ ಮತ್ತು ಸರ್ಕಾರದ ಉಪ ಕಾರ್ಯದರ್ಶಿ ಹುದ್ದೆಯನ್ನು ಸರ್ಕಾರದ ಜಂಟಿ ಕಾರ್ಯದರ್ಶಿ ವೃಂದಕ್ಕೆ ಉನ್ನತೀಕರಿಸಲಾಗಿದೆ.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ವಿಶೇಷಾಧಿಕಾರಿ (ವೇತನ ಶ್ರೇಣಿ ರಹಿತ ಹುದ್ದೆ)	1 ಹುದ್ದೆ
2	ಉಪ ವಿಶೇಷಾಧಿಕಾರಿ (ವೇತನ ಶ್ರೇಣಿ ರಹಿತ ಹುದ್ದೆ)	1 ಹುದ್ದೆ
3	ಸಹಾಯಕರು	2 ಹುದ್ದೆಗಳು
4	ಶೀಘ್ರಲಿಪಿಗಾರರು	1 ಹುದ್ದೆ
5	ವಾಹನ ಚಾಲಕರು	1 ಹುದ್ದೆ
6	ಗ್ರೂಪ್-ಡಿ	1 ಹುದ್ದೆ

ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಕಾರ್ಮಿಕ ಇಲಾಖೆಯ ಕಡತದಲ್ಲಿ ಬಾಲ ಕಾರ್ಮಿಕ ಕೋಶ ಹಾಗೂ ಹುದ್ದೆಗಳನ್ನು ಮತ್ತೆ ಒಂದು ವರ್ಷದ ಅವಧಿಗೆ ಮುಂದುವರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 284 ಸಅಸೇ 2011, ಬೆಂಗಳೂರು, ದಿನಾಂಕ : 16-6-2011

ಕರ್ನಾಟಕ ಸರ್ಕಾರ ಸಚಿವಾಲಯದ ಕಾರ್ಮಿಕ ಇಲಾಖೆಯಲ್ಲಿ ಸೃಜಿಸಲಾಗಿರುವ ಬಾಲ ಕಾರ್ಮಿಕ ಕೋಶವನ್ನು ಈ ಕೆಳಕಂಡ ಹುದ್ದೆಗಳೊಂದಿಗೆ ದಿನಾಂಕ 18-06-2011 ರಿಂದ ಒಂದು ವರ್ಷ ಅವಧಿಗೆ ತಾತ್ಕಾಲಿವಾಗಿ ಮುಂದುವರಿಸಲಾಗಿದೆ.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ವಿಶೇಷಾಧಿಕಾರಿ ಮತ್ತು ಸರ್ಕಾರದ ಉಪ/ಜಂಟಿ ಕಾರ್ಯದರ್ಶಿ ಕಾರ್ಮಿಕ ಇಲಾಖೆ (ಬಾಲ ಕಾರ್ಮಿಕ ಕೋಶ)	1 ಹುದ್ದೆ
2	ಉಪ ವಿಶೇಷಾಧಿಕಾರಿ (ವೇತನ ಶ್ರೇಣಿ ರಹಿತ ಹುದ್ದೆ)	1 ಹುದ್ದೆ
3	ಸಹಾಯಕರು	2 ಹುದ್ದೆಗಳು
4	ಶೀಘ್ರಲಿಪಿಗಾರರು	1 ಹುದ್ದೆ
5	ವಾಹನ ಚಾಲಕರು	1 ಹುದ್ದೆ
6	ಗ್ರೂಪ್-ಡಿ	1 ಹುದ್ದೆ

ಈ ಆದೇಶವನ್ನು ಸರ್ಕಾರದ ಅದೇಶ ಸಂಖ್ಯೆ: ಎಫ್‌ಡಿ 1 ಟಿ ಎಫ್‌ಪಿ 96, ದಿನಾಂಕ 10-07-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ. ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1557 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

EDUCATION SECRETARIAT

Sub : Seat sharing and fee structure for MBA, MCA and M.E./M.Tech courses in Karnataka for the academic year 2011-12.

Read : (1) G.O. No. ED 49 TEC 2005 dated 22-3-2005 read with Corrigendum dated 13-4-2005.
(2) Notification No. ED 101 TEC 2005, dated 21-5-2005
(3) Government Order No. ED 38 TEC 2009, dated 30-3-2009 and Addendum No. ED 71 TEC 2009, dated 19-9-2009.
(4) Government Notification No. ED 8 TGL 2010, dated 01-06-2010
(5) Notification No. ED 205 TEC 2010(I) dated 20-4-2010
(6) Notification No. ED 205 TEC 2010(II) dated 20-4-2010

Preamble:

In the G.O. read at (1) above, a committee was constituted to look after the process of selection of candidates and to supervise the selection process for selection of candidates for government seats of MBA, MCA, M.E. and M.Tech courses in the management colleges and engineering colleges in the state:-

Karnataka selection of candidates for admission to MBA and MCA courses rules, 2005 were published vide notification read at (2) above.

In the orders read at (3) above, the seat sharing and fee structure for admission to MBA, MCA, M.E. and M.Tech courses in Karnataka for the academic year 2009-10 has been published.

In the notification read at (4) above, for admission of candidates to M.E./M.Tech (both full time and part time) the state government has amended the Karnataka selection of candidates for admission to ME/M.Tech courses rules, 2010 with a provision to reserve such percentage of seats to the private management as notified by government.

In the notifications read at (5) and (6) above, the Karnataka selection of candidates for admission to MBA, MCA, M.E. and M.Tech courses (amendment) rules, 2011 have been issued.

It is therefore, considered necessary to adopt seat sharing and fee structure same as in the previous year. Hence the order.

Government Order No. ED 93 TEC 2011, Bangalore, dated 16-06-2011

Government is pleased to order that the seat sharing and fee structure for admission to MBA, MCA, M.E. and M.Tech courses in Karnataka for the academic year 2011-12 will be as follows:

1) Category-A:

(a) 50% of the total intake in MBA and MCA courses in all private unaided institutions shall be filled on the basis of merit (in the PGCET examination) through centralized counseling by the Karnataka Examination Authority. The tuition fee payable will be Rs. 50,000/- p.a.+University fees.

(b) 80% of the total intake in ME and M.Tech courses in all private unaided institutions and private aided institutions unaided courses shall be filled on the basis of merit secured in GATE of PGCET (in the PGCET examination) through centralized counseling by the Karnataka Examination Authority. The tuition fee payable will be Rs. 60,000/-p.a.+ University fees.

2) Category-B:

(a) 50% of the total intake in MBA and MCA courses in all private unaided institutions shall be filled by the institutions concerned based on merit either in the K-MAT or PGCET examination or in any one National Level eligibility test. The institution concerned can admit students who have taken any of these tests. The tuition fee payable will be Rs. 50,000/-p.a.+ University fees.

(b) 20% of the total intake in ME and M.Tech courses in all private unaided institutions and private aided institutions unaided courses shall be filled on the basis of merit secured in GATE or PGCET or rank list prepared after conducting common entrance test by association of private educational institutions in accordance with merit list subject to eligibility as per prescribed by the corresponding universities. The institution concerned can admit students who have taken any of these tests. The tuition fee payable will be Rs. 60,000/-p.a.+ University fees.

3) The institutions concerned will not be obliged to provide for any reservation to SC/ST and OBC candidates in their quota of seats and also in the fee structure.

4) The Government of Karnataka has not mandated a centralized counseling process for the private/unaided institutions for the current academic year. The institutions concerned shall ensure that admissions are made in a fair and transparent manner. The students should be guided properly by the association about the procedures to be adopted by the colleges and also to decide the option specifically in selecting the tests like K.MAT/GATE/PGCET/MAT/CAT/JMET and XAT or common entrance test conducted by association of private educational institutions. A monitoring committee shall be constituted by the government which shall meet as often as required to ensure proper implementation of the norms prescribed in this order.

5) A grievance cell shall be setup by the Karnataka Private Post Graduate Colleges' Association in Bangalore to look into the grievances if any received from any candidate/institution. The government may choose to intervene if the association does not act in the bonafide interest of the students.

By Order and in the name of the Governor of Karnataka
B. N. Jagadeesh
Under Secretary to Government
Education Department (Technical Education)

PR No. 1558

ಶಿಕ್ಷಣ ಸಚಿವಾಲಯ

ವಿಷಯ : ದಿ॥ ನರಸಿಂಹಚಾರ್ ಪುರೋಹಿತ, ಮಾಜಿ ಅರೆಕಾಲಿಕ ದೈಹಿಕ ಶಿಕ್ಷಣ ಶಿಕ್ಷಕ, ವಿದ್ಯಾನಂದ ಗುರುಕುಲ ಪದವಿ ಪೂರ್ವ ಕಾಲೇಜು, ಕೊಪ್ಪಳ ರವರ ಕುಟುಂಬಕ್ಕೆ ಕುಟುಂಬ ವಿಶ್ರಾಂತಿ ವೇತನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1. ದಿನಾಂಕ 18–01–2005ರ ಸರ್ಕಾರದ ಆದೇಶ ಸಂಖ್ಯೆ: ಇಡಿ 63 ಟಿವಿಇ 2004,
2. ದಿನಾಂಕ 04–10–2007ರ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲಕರ ಕಛೇರಿ ಇವರ ಪತ್ರ ಸಂಖ್ಯೆ: ಪಿವಿ.5/ಆರ್2/ಡಿ.31961/2007–08/535–539.
3. ದಿನಾಂಕ 05–11–2007ರ ವೃತ್ತಿ ಶಿಕ್ಷಣ ಇಲಾಖೆ ನಿರ್ದೇಶಕರ ಪತ್ರ ಸಂಖ್ಯೆ: ಡಿವಿಇ/ಆವಿ5/15/ಸಿಬ್ಬಂದಿ/2005–06.
4. ದಿನಾಂಕ 27–05–2008ರ ಶ್ರೀ ಕೆ. ಶ್ಯಾಮಸುಂದರ್, ವಕೀಲರು ರವರ ಪತ್ರ
5. ದಿನಾಂಕ 18–12–2009ರ ಶ್ರೀಮತಿ ಕೆ. ರೇಣುಕಾಬಾಯಿ ಅಲಿಯಾಸ್ ಪರಿಮಳಾ ಬಾಯಿ ಕೋಂ ದಿ॥ ನರಸಿಂಹಚಾರ್ ಪುರೋಹಿತ ರವರ ಮನವಿ.
6. ದಿನಾಂಕ 17–05–2010ರ ಮಹಾಲೇಖಪಾಲರ ಪತ್ರ ಸಂಖ್ಯೆ: ಪಿವಿ5/ಆರ್2/ಡಿ31961/101.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 18–01–2005ರ ಆದೇಶದಲ್ಲಿ ದಿ॥ ನರಸಿಂಹಚಾರ್ ರವರ ಸೇವೆಯನ್ನು ದಿನಾಂಕ 10–01–2000 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸಕ್ರಮಗೊಳಿಸಿ ಆದೇಶಿಸಲಾಗಿದೆ ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಮಹಾಲೇಖಪಾಲರು ಪ್ರಸ್ತುತ ಪ್ರಕರಣವನ್ನು ಪುನರ್ ಪರಿಶೀಲಿಸಿ ಸದರಿ ನೌಕರರ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ ಇಡಿ 13 ಡಿಜಿಡಿ 1995, ದಿನಾಂಕ 10–01–2000 ರಲ್ಲಿ 19 ಅಧಿಕಾರಿ/ನೌಕರರನ್ನು ದಿನಾಂಕ 01–07–1994 ರಿಂದ ಸಕ್ರಮಗೊಳಿಸಿರುವುದರಿಂದ ಶ್ರೀಯುತರ ಸೇವೆಯನ್ನು ಸಹ ದಿನಾಂಕ 01–07–1994 ರಿಂದ ನೌಕರರು ಮೃತರಾದ ದಿನಾಂಕ 10–12–1998 ರವರೆಗೆ ಸಕ್ರಮಗೊಳಿಸಿ ಸದರಿ ಆದೇಶವನ್ನು ಸೂಕ್ತವಾಗಿ ಸರಿಪಡಿಸಿ ಮರು ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಮೇಲೆ (3)ರಲ್ಲಿ ಓದಲಾದ ಪ್ರಸ್ತಾವನೆಯನ್ನು ವೃತ್ತಿ ಶಿಕ್ಷಣ ಇಲಾಖೆಯ ನಿರ್ದೇಶಕರು ದಿನಾಂಕ 18–01–2005ರ ಆದೇಶವನ್ನು ಮರು ಪರಿಶೀಲನೆ ಮಾಡಿ ಸದರಿ ಮೃತ ನೌಕರರ ಸೇವೆಯನ್ನು ದಿನಾಂಕ 01–07–1994 ರಿಂದ ದಿನಾಂಕ 10–12–1998 ರವರೆಗೆ ಸಕ್ರಮಗೊಳಿಸುವಂತೆ ಕೋರಿದ್ದಾರೆ. ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಅರ್ಜಿದಾರರ ಪರವಾಗಿ ವಕೀಲರ ಮನವಿಯಲ್ಲಿ ಪ್ರಸ್ತುತ ಪ್ರಕರಣದಲ್ಲಿ ಮಹಾಲೇಖಪಾಲರ ಸೂಚನೆಯಂತೆ ತಿದ್ದುಪಡಿ ಹೊರಡಿಸುವಂತೆ ಕೋರಲಾಗಿದೆ. ಮೇಲೆ (5)ರಲ್ಲಿ ಓದಲಾದ ಮನವಿಯಲ್ಲಿ ಮೃತ ನೌಕರರ ಪತ್ನಿಯು ಮಹಾಲೇಖಪಾಲರು ಸೂಚನೆಯಂತೆ ತಿದ್ದುಪಡಿ ಆದೇಶ ಹೊರಡಿಸಿ ಕುಟುಂಬ ಪಿಂಚಣಿ ಮಂಜೂರು ಮಾಡುವಂತೆ ಕೋರಿದ್ದಾರೆ. ಮೇಲೆ (6)ರಲ್ಲಿ ಓದಲಾದ ದಿನಾಂಕ 17–05–2010ರ ಪತ್ರದಲ್ಲಿ ಮಹಾಲೇಖಪಾಲರು ಇದೇ ರೀತಿಯ ಇತರೆ ಪ್ರಕಣಗಳನ್ನು ಪರಿಗಣಿಸಿರುವಂತೆ ಪ್ರಸ್ತುತ ಪ್ರಕರಣವನ್ನು ಸಹ ಸೂಕ್ತವಾಗಿ ಇತ್ಯರ್ಥಪಡಿಸುವಂತೆ ಕೋರಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 9 ಟಿವಿಇ 2011, ಬೆಂಗಳೂರು, ದಿನಾಂಕ : 17–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ದಿ॥ ನರಸಿಂಹಚಾರ್ ಪುರೋಹಿತ, ಅರೆಕಾಲಿಕ ದೈಹಿಕ ಶಿಕ್ಷಣ ಶಿಕ್ಷಕ, ವಿದ್ಯಾನಂದ ಗುರುಕುಲ ಪದವಿ ಪೂರ್ವ ಕಾಲೇಜು, ಕೊಪ್ಪಳ ರವರ ಕುಟುಂಬಕ್ಕೆ ಪಿಂಚಣಿ ಸೌಲಭ್ಯಗಳನ್ನು ಪರಿಗಣಿಸುವಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 63 ಟಿವಿಇ 2004, ದಿನಾಂಕ 18–01–2005 ರ ಆದೇಶದಲ್ಲಿ ಸದರಿಯವರ ಸೇವೆಯನ್ನು ದಿನಾಂಕ 10–01–2000 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸಕ್ರಮಗೊಳಿಸಿ ಆದೇಶಿಸಿದೆ ಎಂಬ ಭಾಗವನ್ನು ಹಿಂತೆಗೆದುಕೊಂಡು ಈ ಕೆಳಗಿನಂತೆ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿದೆ.

> "ಶ್ರೀ ನರಸಿಂಹಚಾರ್ ಪುರೋಹಿತ್ ಇವರು ದಿನಾಂಕ 01–07–1984ರ ಪೂರ್ವದಲ್ಲಿ ನೇಮಕಹೊಂದಿದ್ದು ದಿನಾಂಕ 01–07–1994 ರಂದು ಹತ್ತು ವರ್ಷಗಳ ಸೇವೆಯನ್ನು ಪೂರೈಸಿ ಸೇವೆಯಲ್ಲಿ ಮುಂದುವರೆದು ದಿನಾಂಕ 10–12–1998 ರಂದು ನಿಧನವಾಗಿರುವ ಅಂಶವನ್ನು ಪರಿಗಣಿಸಿ ಮೃತರ ಕುಟುಂಬವು ಕುಟುಂಬ ವೇತನ ಸೌಲಭ್ಯವನ್ನು ಪಡೆಯಲು ಅನುವಾಗಲು, ಈ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಇವರ ಸೇವೆಯನ್ನು ದಿನಾಂಕ 01–07–1994 ರಿಂದ ಸಕ್ರಮಗೊಳಿಸಿ ಸದರಿಯವರು ಸಲ್ಲಿಸಿರುವ ಸೇವಾ ಅವಧಿಗೆ ಅನುಗುಣವಾಗಿ ಲಭ್ಯವಾಗಬಹುದಾದ ವೇತನ ನಿಗಧಿಪಡಿಸಿ ಅದರಂತೆ ಅವರ ಕುಟುಂಬದ ಅರ್ಹ ಸದಸ್ಯರಿಗೆ ಕುಟುಂಬ ಪಿಂಚಣಿ ಹಾಗೂ ಇತರೆ ಆರ್ಥಿಕ ಸೌಲಭ್ಯಗಳನ್ನು ನೀಡಲು ಆದೇಶಿಸಲಾಗಿದೆ."

ಈ ಅದೇಶವನ್ನು ದಿನಾಂಕ 26–04–2011ರ ಅರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 184 ವೆಚ್ಚ–8 2011ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)
ಶಿಕ್ಷಣ ಇಲಾಖೆ

ಪಿ.ಆರ್. 1559

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಎಲ್. ರಂಗಪ್ಪ, ಹಿಂದಿನ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ, ಇವರ ವಿರುದ್ಧ ದಾಖಲಾದ ಅಕ್ರಮ ಆಸ್ತಿ ಹೊಂದಿರುವ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

ಓದಲಾಗಿದೆ : ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಸಿಟಿಎಲ್-32/ಸಿಆರ್-8/2008, ಚಿತ್ರದುರ್ಗ, ದಿನಾಂಕ 06-04-2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರ ದಿನಾಂಕ 06-04-2011ರಲ್ಲಿ ಶ್ರೀ ಎಲ್. ರಂಗಪ್ಪ, ಹಿಂದಿನ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ ಇವರು ತಮ್ಮ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದ ಆಸ್ತಿಯನ್ನು ಹೊಂದಿರುವರೆಂದು ತಿಳಿದು ಬಂದ ವಿಶ್ವಾಸಾರ್ಹ ಮಾಹಿತಿಯನ್ವಯ ಸದರಿ ಆರೋಪಿತರ ವಿರುದ್ಧ ಚಿತ್ರದುರ್ಗ ಲೋಕಾಯುಕ್ತ ಠಾಣೆ ಮೊ ನಂ. 8/2008 ರಲ್ಲಿ ದಿನಾಂಕ 04-11-2008 ರಂದು ಕಲಂ 13(1)(ಇ) ಜೊತೆಗೆ 13(2) ರೀತ್ಯ ಪ್ರಕರಣವನ್ನು ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ. ನಂತರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು, ಚಿತ್ರದುರ್ಗ ಜಿಲ್ಲೆ ರವರಿಂದ ದಿನಾಂಕ 04-11-2008 ರಂದು ಶೋಧನಾ ಆದೇಶವನ್ನು (ಸರ್ಚ್ ವಾರೆಂಟ್) ಪಡೆದುಕೊಂಡು ದಿನಾಂಕ 05-11-2008 ರಂದು ಸದರಿ ಆರೋಪಿತ ಸರ್ಕಾರಿ ಅಧಿಕಾರಿಗೆ ಸೇರಿದ (1) ಚಿತ್ರದುರ್ಗದ ಪ್ರಶಾಂತ ನಗರದ 3ನೇ ತಿರುವಿನಲ್ಲಿರುವ ನಿವೇಶನ ಸಂಖ್ಯೆ 38 ರಲ್ಲಿರುವ ಆರೋಪಿತರ ಮನೆ, (2) ಚಿತ್ರದುರ್ಗ ಜಿಲ್ಲೆ ಹೊಸದುರ್ಗ, ತಾಲ್ಲೂಕು ಕೆಂಕೆರೆ ಗ್ರಾಮದ ಸರ್ವೆ ನಂ 61/ಪಿ2 ರಲ್ಲಿರುವ ಆರೋಪಿತರ ಪತ್ನಿಯ ಹೆಸರಿನಲ್ಲಿರುವ ತೋಟದ ಮನೆ, (3) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಬೆಲಗೂರು ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ, (4) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಅಲಗಟ್ಟಿ ಗ್ರಾಮದ ಶ್ರೀ ರವಿರಂಗನಾಥ ಸ್ವಾಮಿ ಪ್ರೌಢ ಶಾಲೆ, (5) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಲಂಬಾಣಿಹಟ್ಟಿ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ, (6) ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು ಗವಿರಂಗಾಪುರ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ, (7) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ಪಟ್ಟಣದಕೋಟೆ ಬಡಾವಣೆಯಲ್ಲಿರುವ ಶ್ರೀ ಗವಿರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ, (8) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ದೊಡ್ಡಘಟ್ಟ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಪದವಿ ಪೂರ್ವ ಕಾಲೇಜು, (9) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಅತ್ತಿಮಗ್ಗೆ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಪ್ರೌಢ ಶಾಲೆ, (10) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಅತ್ತಿಮಗ್ಗೆ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಪ್ರಾಥಮಿಕ ಶಾಲೆ, (11) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಕೃಷ್ಣಾಪುರ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಪ್ರಾಥಮಿಕ ಶಾಲೆ, (12) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಭೋವಿಹಟ್ಟಿ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ, (13) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಗುಡ್ಡದ ನೇರಳೆಕೆರೆ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ವಿದ್ಯಾ ಸಂಸ್ಥೆ, (14) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಗಿರಿಯಾಪುರ ಗ್ರಾಮದಲ್ಲಿರುವ ಆರೋಪಿತರಿಗೆ ಸೇರಿದ ಶಾಲಾ ಕಟ್ಟಡ, (15) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಕಾಳನಾಯ್ಕನ ಹಟ್ಟಿ ಗ್ರಾಮದ ಶ್ರೀ ಗವಿರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ, (16) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ಪಟ್ಟಣದ ಕೋಟೆ ಬಡಾವಣೆಯಲ್ಲಿರುವ ಶ್ರೀ ಗವಿರಂಗನಾಥ ಸ್ವಾಮಿ ಸಹಕಾರ ವಿದ್ಯಾಸಂಸ್ಥೆ ಪ್ರೌಢ ಶಾಲೆ ಮತ್ತು (17) ಆರೋಪಿತರು ಕರ್ತವ್ಯ ನಿರ್ವಹಿಸುವ ಚಿತ್ರದುರ್ಗ ನಗರದ ಡಿಡಿಪಿಐ ಕಛೇರಿಯ ಆರೋಪಿತರು ಕರ್ತವ್ಯ ನಿರ್ವಹಿಸುವ ಕೊಠಡಿ, ಈ ಸ್ಥಳಗಳನ್ನು ಶೋಧನೆ ಮಾಡಿದ್ದು, ಶೋಧನಾ ಕಾಲದಲ್ಲಿ ಕಂಡು ಬಂದ ಚರ ಮತ್ತು ಸ್ಥಿರಾಸ್ತಿ ಅಂದರೆ ಗೃಹೋಪಯೋಗಿ ಉಪಕರಣಗಳು, ಚಿನ್ನ ಮತ್ತು ಬೆಳ್ಳಿ, ಬ್ಯಾಂಕ್ ಡಿಪಾಸಿಟ್ ನಗದು ಹಣ, ಎಲೆಕ್ಟ್ರಾನಿಕ್ ವಸ್ತುಗಳು, ನಿವೇಶನಗಳು ಹಾಗೂ ಜಮೀನುಗಳು, ಇವುಗಳಿಗೆ ಸಂಬಂಧಿಸಿದ ದಾಖಲಾತಿಗಳು ಸೇರಿದಂತೆ ವಿವರವಾದ ಪಂಚನಾಮೆಗಳನ್ನು ಮಾಡಲಾಗಿದೆ.

ತನಿಖೆಯ ಉದ್ದೇಶಕ್ಕಾಗಿ ಚೆಕ್ ಅವಧಿಯನ್ನು ದಿನಾಂಕ 04-12-1978 ರಿಂದ ದಿನಾಂಕ 05-11-2008 ರವರೆಗೆ ನಿಗಧಿಪಡಿಸಲಾಗಿದೆ. ತನಿಖೆಯು ಪೂರ್ಣಗೊಂಡ ನಂತರ ಆರೋಪಿತರ ವಶದಲ್ಲಿದ್ದ ಒಟ್ಟು ಆಸ್ತಿ ಖರ್ಚು ಮತ್ತು ಆದಾಯಗಳ ಒಟ್ಟು ಮೊತ್ತವು ಈ ಕೆಳಗಿನಂತೆ ಇರುತ್ತದೆ.

1	ಚೆಕ್ ಅವಧಿಯಲ್ಲಿರುವ ಆಸ್ತಿಗಳು	1,72,39,652-00
2	ಚೆಕ್ ಅವಧಿಯಲ್ಲಿನ ಖರ್ಚಿನ ವಿವರ	61,21,355-00
3	ಆಸ್ತಿ ಮತ್ತು ಖರ್ಚು (1+2)	2,33,61,007-00
4	ಚೆಕ್ ಅವಧಿಯಲ್ಲಿ ಗಳಿಸಿದ ಆದಾಯ	45,59,220-00
5	ಅಸಮತೋಲನ ಆಸ್ತಿ (3-4)	1,91,01,787-00
6	ಶೇಕಡಾವಾರು ಅಸಮತೋಲನ ಆಸ್ತಿ	448.48%

ಮೇಲ್ಕಂಡ ವಿವರಗಳಿಂದ ಆರೋಪಿ ಶ್ರೀ ಎಲ್. ರಂಗಪ್ಪ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ ಇವರು ತಮ್ಮ ಎಲ್ಲ ಬಲ್ಲ ಮೂಲಗಳ ಆದಾಯಕ್ಕಿಂತ ರೂ. 1,91,01,787-00 ರಷ್ಟು ಅಸಮತೋಲನ ಆಸ್ತಿಯನ್ನು ಹೊಂದಿರುತ್ತಾರೆ. ಅಂದರೆ ಶೇಕಡ 448.48% ರಷ್ಟು ಅಕ್ರಮ ಆಸ್ತಿ ಹೊಂದಿರುವುದು ತನಿಖೆಯಿಂದ ಕಂಡು ಬಂದಿದ್ದು, ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಜೊತೆಗೆ 13(2)ರ ಅಡಿಯಲ್ಲಿ ಅಪರಾಧವೆಸಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ ಎಂದು ತಿಳಿಸಿರುತ್ತಾರೆ.

ಆದಕಾರಣ ಆರೋಪಿತರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಜೊತೆಗೆ 13(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಗಗೊಳಿಸಲು ಸಾಕಷ್ಟು ಸಾಕ್ಷಿ ಪುರಾವೆಗಳು ಲಭ್ಯವಿರುತ್ತವೆ. ಆದ್ದರಿಂದ ಆರೋಪಿ ಶ್ರೀ ಎಲ್. ರಂಗಪ್ಪ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ ಇವರು ಮೇಲ್ಕಂಡ ಕಾಯ್ದೆಯಡಿಯಲ್ಲಿ ಅಭಿಯೋಗಗೊಳಿಸಲು ಅರ್ಹರಿರುತ್ತಾರೆ ಎಂದು ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

ಆದ್ದರಿಂದ ಲಂಚ ನಿರೋಧ ಕಾಯ್ದೆ 1988 ರ ಕಲಂ 19(1)(ಬಿ)ರಲ್ಲಿ ಪ್ರದತ್ತವಾದ ಅಧಿಕಾರದ ಪ್ರಕಾರ ಆರೋಪಿತ ಶ್ರೀ ಎಲ್. ರಂಗಪ್ಪ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ, ಇವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು ನೀಡುವಂತೆ ಕೋರಲಾಗಿದೆ. ಈ ಪತ್ರದೊಂದಿಗೆ ತನಿಖಾಧಿಕಾರಿಯವರ ಅಂತಿಮ ವರದಿಯ ಪ್ರತಿಯನ್ನು ಅದರ ಅಡಕಗಳಾದ ಪ್ರಥಮ

ವರ್ತಮಾನ ವರದಿ, ಶೋಧನ ಪಂಚನಾಮೆಗಳು ಮತ್ತು ತನಿಖಾ ದಾಖಲಾತಿಗಳ ನಕಲುಗಳನ್ನು ತಮ್ಮ ಪರಿಶೀಲನೆಗಾಗಿ ಕಳುಹಿಸಿ ಅಭಿಯೋಜನಾ ಮಂಜೂರಾತಿ ಆದೇಶವನ್ನು ಹೊರಡಿಸುವಂತೆ ಮಾನ್ಯ ಲೋಕಾಯುಕ್ತರು ಕೋರಿರುತ್ತಾರೆ. ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಉಲ್ಲೇಖಿತ ಪತ್ರದ ಜೊತೆಯಲ್ಲಿ ಕಳುಹಿಸಿ ಕೊಟ್ಟಿರುವ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1) ಪ್ರಥಮ ವರ್ತಮಾನ ವರದಿ ದಿನಾಂಕ 04–11–2008
2) ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಠಾಣೆ ಗುನ್ನ ನಂ: 08/08 ಕಲಂ 13(1)(ಇ) ಆಧಾರ 13(2) ಲಂಚ ಪ್ರತಿ ಬಂಧ ಕಾಯ್ದೆ–1988ರ ಅಂತಿಮ ತನಿಖಾ ವರದಿ ಭಾಗ–1.
3) ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಠಾಣೆ ಗುನ್ನ ನಂ: 08/08 ಕಲಂ 13(1)(ಇ) ಆಧಾರ 13(2) ಲಂಚ ಪ್ರತಿ ಬಂಧ ಕಾಯ್ದೆ–1988ರ ಅಂತಿಮ ವರದಿ ಭಾಗ–2.
4) ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಠಾಣೆ ಗುನ್ನ ನಂ: 08/08 ಕಲಂ 13(1)(ಇ) ಆಧಾರ 13(2) ಲಂಚ ಪ್ರತಿ ಬಂಧ ಕಾಯ್ದೆ–1988ರ ಅಂತಿಮ ವರದಿ ಭಾಗ–3.
5) ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಠಾಣೆ ಗುನ್ನ ನಂ: 08/08 ಕಲಂ 13(1)(ಇ) ಆಧಾರ 13(2) ಲಂಚ ಪ್ರತಿ ಬಂಧ ಕಾಯ್ದೆ–1988ರ ಅಂತಿಮ ವರದಿ ಭಾಗ–4.
6) ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಠಾಣೆ ಗುನ್ನ ನಂ: 08/08 ಕಲಂ 13(1)(ಇ) ಆಧಾರ 13(2) ಲಂಚ ಪ್ರತಿ ಬಂಧ ಕಾಯ್ದೆ–1988ರ ಅಂತಿಮ ವರದಿ ಭಾಗ–5.
7) ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಠಾಣೆ ಗುನ್ನ ನಂ: 08/08 ಕಲಂ 13(1)(ಇ) ಆಧಾರ 13(2) ಲಂಚ ಪ್ರತಿ ಬಂಧ ಕಾಯ್ದೆ–1988ರ ಅಂತಿಮ ವರದಿ ಭಾಗ–6.
8) ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಠಾಣೆ ಮೊಕದ್ದಮೆ ನಂ: 08/08 ಕಲಂ 13(1)(ಇ) ಆಧಾರ 13(2) ಲಂಚ ಪ್ರತಿ ಬಂಧ ಕಾಯ್ದೆ–1988ರ ಅಂತಿಮ ವರದಿ ಭಾಗ–7.
9) ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಠಾಣೆ ಮೊಕದ್ದಮೆ ನಂ: 08/08 ಕಲಂ 13(1)(ಇ) ಆಧಾರ 13(2) ಲಂಚ ಪ್ರತಿ ಬಂಧ ಕಾಯ್ದೆ–1988ರ ಎ.ಬಿ.ಸಿ.ಡಿ. ಸ್ಟೇಟ್‌ಮೆಂಟ್.

ಈ ಪ್ರಕರಣದಲ್ಲಿ ಸದರಿ ಅಧಿಕಾರಿಯು ತಮ್ಮ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಕ್ರಮ ಆಸ್ತಿ ಹೊಂದಿರುವ ಬಗ್ಗೆ ಸಲ್ಲಿಸಿರುವ ವರದಿಯಲ್ಲಿ, ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸದರಿಯವರು ಲಂಚ ನಿರೋಧ ಕಾಯ್ದೆ 1988ರ ಕಲಂ–13(1)(ಇ) ಜೊತೆಗೆ ಕಲಂ–13(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುವುದು ಸ್ಪಷ್ಟವಾಗಿ ಹಾಗೂ ಸಂಪೂರ್ಣವಾಗಿ ಸರ್ಕಾರಕ್ಕೆ ಮನವರಿಕೆಯಾಗಿದೆ, ಆದುದರಿಂದ ಸದರಿಯವರನ್ನು ಅಭಿಯೋಜನೆಗೆ ಒಳಪಡಿಸುವುದು ಅವಶ್ಯವೆಂದು ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆರೋಪಿತ ಅಧಿಕಾರಿಯನ್ನು ಸರ್ಕಾರಿ ಹುದ್ದೆಯಿಂದ ತೆಗೆದು ಹಾಕುವ ಅಧಿಕಾರ ಹೊಂದಿದ್ದು, ಲಂಚ ನಿರೋಧ ಕಾಯ್ದೆ 1988ರ ಕಲಂ–19(1)(ಬಿ) ರಡಿಯಲ್ಲಿ ಆರೋಪಿತ ಅಧಿಕಾರಿ ಶ್ರೀ ಎಲ್. ರಂಗಪ್ಪ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು, ಇವರನ್ನು ಲಂಚ ನಿರೋಧ ಕಾಯ್ದೆ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಹೊಂದಿದೆ. ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 76 ಡಿಜಿಪಿ 2009, ಬೆಂಗಳೂರು, ದಿನಾಂಕ : 16–06–2011

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ, ಸರ್ಕಾರವು ಶ್ರೀ ಎಲ್. ರಂಗಪ್ಪ, ಹಿಂದಿನ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ (ಪ್ರಸ್ತುತ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು, ಇವರನ್ನು ಸರ್ಕಾರಿ ಹುದ್ದೆಯಿಂದ ತೆಗೆದು ಹಾಕುವ ವಜಾ ಮಾಡುವ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಸದರಿಯವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 13(1)(ಇ) ಜೊತೆಗೆ 13(2) ಹಾಗೂ ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಶಿಕ್ಷಾರ್ಹ ಅಪರಾದಕ್ಕಾಗಿ ಅಭಿಯೋಗಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿಗಳು 1977ರ ಅನ್ವಯ ಮೇಲ್ಕಂಡ ಅಭಿಯೋಜನಾ ಮಂಜೂರಾತಿ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ 16–06–2011 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಆಡಳಿತ)

ಪಿ.ಆರ್. 1560

ಶಿಕ್ಷಣ ಸಚಿವಾಲಯ

ವಿಷಯ : 2010–11ನೇ ಸಾಲಿಗೆ ಖಾಸಗಿ ಅನುದಾನರಹಿತ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ರೂ. 15.000/– ಶುಲ್ಕದಡಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ರೂ. 10,000/–ಗಳ ಸಹಾಯಧನವನ್ನು ಸರ್ಕಾರ ಮರುಪಾವತಿಸುವ ಬಗ್ಗೆ.

ಪ್ರಸ್ತಾವನೆ :

ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ಅಧಿನಿಯಮ, 2006 ದಿನಾಂಕ 1–7–2006 ರಿಂದ ಜಾರಿಗೆ ಬಂದಿದ್ದು ಅದರಂತೆ 2010–11ನೇ ಸಾಲಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಕುರಿತಂತೆ ಕರ್ನಾಟಕ ಸರ್ಕಾರ ಮತ್ತು Consortium of Medical, Engineering and Dental Colleges of Karnataka (Comed-K) ಮತ್ತು The Karnataka Religious and Linguistic Minority Professional Colleges Association ನಡುವೆ ಆದ ಒಮ್ಮತಾಭಿಪ್ರಾಯದ ಒಪ್ಪಂದದಂತೆ ಕರ್ನಾಟಕದಲ್ಲಿರುವ ಖಾಸಗಿ ಅನುದಾನರಹಿತ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜಗಳಲ್ಲಿ ಸರ್ಕಾರದ ಪಾಲಿನ ಒಟ್ಟು ಸೀಟುಗಳ ಪೈಕಿ ಶೇಕಡಾ 50ರಷ್ಟು ಸೀಟುಗಳನ್ನು ಪ್ರತಿ ಕಾಲೇಜಿನಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ 20,000 ವರೆಗೆ ರ್‍ಯಾಂಕ್ ಪಡೆದ ಹಾಗೂ ವಾರ್ಷಿಕ ಆದಾಯ ಮಿತಿ ರೂ. 2.00 ಲಕ್ಷದೊಳಗಿರುವ ಮತ್ತು ರೂ. 15,000/–ಗಳ ಶುಲ್ಕದಡಿ ಪ್ರವೇಶಾತಿ ಪಡೆದಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಪ್ರತಿ ವಿದ್ಯಾರ್ಥಿಗೆ ರೂ. 10,000/–ಸಹಾಯಧನವನ್ನು ಪ್ರತಿ ವರ್ಷ ಕೋರ್ಸು ಮುಗಿಯುವವರೆಗೆ ಅಂದರೆ ನಾಲ್ಕು ವರ್ಷಗಳವರೆಗೆ ಸರ್ಕಾರವು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳಿಗೆ ಬಿಡುಗಡೆ ಮಾಡಲು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಇಡಿ 238 ಟಿಇಸಿ 2010, ಬೆಂಗಳೂರು, ದಿನಾಂಕ : 15–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2010–11ನೇ ಸಾಲಿನಲ್ಲಿ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಇಂಜಿನಿಯರಿಂಗ್/ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ಹಾಗೂ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಅನುದಾನರಹಿತ ಕೋರ್ಸುಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ 20,000 ವರೆಗೆ ರ್‍ಯಾಂಕ್ ಪಡೆದಿರುವ ಹಾಗೂ ವಾರ್ಷಿಕ ಆದಾಯ ಮಿತಿ ರೂ. 2.00 ಲಕ್ಷದೊಳಗಿರುವ ಮತ್ತು ರೂ. 15,000/–ಗಳ ಶುಲ್ಕದಡಿ ಪ್ರವೇಶಾತಿ ಪಡೆದಂತಹ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಪ್ರತಿ ವಿದ್ಯಾರ್ಥಿಗೆ ರೂ. 10,000/–ದಂತೆ ಸಹಾಯಧನವನ್ನು ಪ್ರತಿ ವರ್ಷ ಕೋರ್ಸು ಮುಗಿಯುವವರೆಗೆ ಅಂದರೆ ನಾಲ್ಕು ವರ್ಷಗಳವರೆಗೆ ಸರ್ಕಾರವು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಸಂಬಂಧ ತಗಲುವ ವೆಚ್ಚವನ್ನು 2010–11ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಒಟ್ಟು 2989 ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ರೂ. 298.90 ಲಕ್ಷಗಳಂತೆ ಒಟ್ಟು ನಾಲ್ಕು ವರ್ಷಗಳಿಗೆ ತಗಲುವ ಒಟ್ಟು ವೆಚ್ಚ ರೂ. 1195.60 ಲಕ್ಷಗಳ ಸಹಾಯಧನವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಲಭ್ಯವಿರುವ ಅನುದಾನದಿಂದ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 316 ವೆಚ್ಚ–8/2011, ದಿನಾಂಕ 26–4–2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ. ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್. 1561 ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ವಿ. ಸದಾಶಿವಮೂರ್ತಿ, ನಿವೃತ್ತ ಉಪ ನಿರ್ದೇಶಕರು ಮತ್ತು ಇತರರು ಸಾರ್ವಜನಿಕ ಶಿಕ್ಷಣ ಇಲಾಖೆ ಮಧುಗಿರಿ ಶೈಕ್ಷಣಿಕ ಜಿಲ್ಲೆ ಮತ್ತು ಇತರ ಅಧಿಕಾರಿ ಮತ್ತು ನೌಕರರ ಮೇಲಿನ ಆರೋಪಗಳು–ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳ ನೇಮಿಸುವ ಬಗ್ಗೆ.

ಓದಲಾಗಿದೆ :

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿ2(5) ದೂರು 04/2008–09, ದಿನಾಂಕ 09–09–2008, 29/09/2009 ಮತ್ತು 07/02/2011.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 50 ಡಿಜಿಪಿ 2009, ದಿನಾಂಕ 05–04–2010
3. ಕಾರಣ ಕೇಳುವ ನೋಟೀಸು ಸಂಖ್ಯೆ: ಇಡಿ 50 ಡಿಜಿಪಿ 2009, ದಿನಾಂಕ 19–04–2010
4. ಆರೋಪಿತ ಅಧಿಕಾರಿ ನೌಕರರ ಇವರ ಪ್ರತಿ ರಕ್ಷಣಾ ಹೇಳಿಕೆಗಳು ದಿನಾಂಕ 26–04–2010, 06–05–2010, 28–04–2010, 29–04–2010 ಮತ್ತು 06–07–2010.
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ2(5)ದೂರು 04/2008–09, ದಿನಾಂಕ 07–02–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಸಂಖ್ಯೆ (1)ರಲ್ಲಿ ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಶಿಕ್ಷಕರಿಗೆ ಆಗುತ್ತಿರುವ ಅನ್ಯಾಯ ಕುರಿತಂತೆ ಶ್ರೀ ವಿ. ಸದಾಶಿವಮೂರ್ತಿ, ನಿವೃತ್ತ ಉಪ ನಿರ್ದೇಶಕರು ಮತ್ತು ಇತರ ಅಧಿಕಾರಿ ಮತ್ತು ನೌಕರರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಅಧಿಕಾರಿ ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ಅನುಬಂಧ 1 ರಿಂದ 4ನ್ನು ತಯಾರಿಸಿ ಸಲ್ಲಿಸಲಾಗಿತ್ತು. ಈ ಪೈಕಿ ಹಿಂದಿನ ಉಪ ನಿರ್ದೇಶಕರಾಗಿದ್ದ ಶ್ರೀ ಸದಾಶಿವಮೂರ್ತಿ ಇವರು ದಿನಾಂಕ 31–12–2007 ರಂದು ವಯೋನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 1958ರ ನಿಯಮ–214ರಡಿ ಮಂಜೂರಾತಿ

ನೀಡಲಾಗಿದೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಆರೋಪಿತ ಅಧಿಕಾರಿಗೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳ ನಿಯಮ–11 ಮತ್ತು 13 ರನ್ವಯ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿದೆ. ಉಲ್ಲೇಖ (4)ರಲ್ಲಿ ಒಟ್ಟು 6 ಅಧಿಕಾರಿ ನೌಕರರು ತಮ್ಮ ತಮ್ಮ ಪ್ರತಿರಕ್ಷಣಾ ಹೇಳಿಕೆಯನ್ನು ಸಲ್ಲಿಸಿದ್ದಾರೆ. ಶ್ರೀ ಪಿ. ಸದಾಶಿವಮೂರ್ತಿ, ನಿವೃತ್ತ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಸಲ್ಲಿಸಿದ ಪ್ರತಿರಕ್ಷಣಾ ಹೇಳಿಕೆಯನ್ನು ಉಲ್ಲೇಖ(5) ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ಈ ಹೇಳಿಕೆಗಳನ್ನು ನಿಯಮಗಳನುಸಾರ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು ಈ ಅರೋಪಗಳಿಗೆ ಸಂಬಂಧಿಸಿದಂತೆ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಕೂಲಂಕಷವಾಗಿ ವಿಚಾರಣೆ ಮಾಡುವುದು ಸೂಕ್ತವೆಂದು ನಿರ್ಣಯಿಸಿದ್ದು, ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿಗಳು 1957ರ ನಿಯಮ–13 ರಡಿ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಕ ಮಾಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 50 ಡಿಜಿಪಿ 2009, ಬೆಂಗಳೂರು, ದಿನಾಂಕ : 16–06–2011

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಶ್ರೀ ವಿ. ಸದಾಶಿವಮೂರ್ತಿ, ನಿವೃತ್ತ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಶೈಕ್ಷಣಿಕ ಜಿಲ್ಲೆ ಮತ್ತು ಶ್ರೀ ಕೆ. ಶ್ರೀರಂಗಯ್ಯ, ಶ್ರೀ ನರಸಿಂಹಮೂರ್ತಿ ಮತ್ತು ಶ್ರೀ ಬೋರೇಗೌಡ ಪತ್ರಾಂಕಿತ ವ್ಯವಸ್ಥಾಪಕರು, ಶ್ರೀ ಟಿ. ಆರ್. ರಾಮರಾವ್ ಮತ್ತು ಶ್ರೀ ಎಂ. ಸಿ. ಈಶ್ವರಯ್ಯ, ಪ್ರಥಮದರ್ಜೆ ಸಹಾಯಕರು ಹಾಗೂ ಶ್ರೀ ಎನ್. ಸತೀಶ್, ಅಧೀಕ್ಷಕರು ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ–11(2)ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಶ್ರೀ ಎ. ಎಲ್. ಪೂಜಾರ್, ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು, ಜೆ.ಐ.ಸಿ.–501, ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು–560047 ಇವರನ್ನು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ನಿಯಮ–11(5)(ಸಿ)ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಶೈಕ್ಷಣಿಕ ಜಿಲ್ಲೆ, ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಿ ಆದೇಶಿಸಿದೆ.

ವಿಚಾರಣೆ ನಡೆಸಲು ಸ್ಥಳಾವಕಾಶವನ್ನು ನೀಡಲು ಹಾಗೂ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸೇವೆಯನ್ನು ವಿಚಾರಣಾಧಿಕಾರಿಗೆ ಒದಗಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಿದೆ ಹಾಗೂ ವಿಚಾರಣಾಧಿಕಾರಿಗಳು ವಿಚಾರಣಾ ವರದಿ ಸಲ್ಲಿಸಿದ ನಂತರ ಅವರಿಗೆ ರೂ. 8,000/–ಗಳ ಸಂಭಾವನೆಯನ್ನು ಮತ್ತು ರೂ. 1,500/–ಗಳ ಸಾರಿಗೆ ಭತ್ಯೆಯನ್ನು ಮಂಜೂರು ಮಾಡಲು ಸೂಚಿಸಿದೆ.

ವಿಚಾರಣಾಧಿಕಾರಿಗಳು ಆರೋಪದ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 2 ತಿಂಗಳೊಳಗಾಗಿ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1562 ಶಿಕ್ಷಣ ಇಲಾಖೆ (ಆಡಳಿತ)

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ವಿ. ಸದಾಶಿವಮೂರ್ತಿ, ನಿವೃತ್ತ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮಧುಗಿರಿ ಶೈಕ್ಷಣಿಕ ಜಿಲ್ಲೆ ಇವರ ಮೇಲಿನ ಆರೋಪಗಳಿಗೆ ಶಿಸ್ತು ಕ್ರಮ ಇಲಾಖಾ ವಿಚಾರಣೆಗೆ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳ ನೇಮಿಸುವ ಬಗ್ಗೆ.

ಓದಲಾಗಿದೆ :
1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿ3(7) ಪ್ರಾ.ಶಾ.ಶಿ.ವರ್ಗಾವಣೆ/ಕೆ.ಎ.ಟಿ.–2/2008–09, ದಿನಾಂಕ 26–03–2009.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 47 ಡಿಜಿಡಿ 2009, ದಿನಾಂಕ 12–05–2009
3. ಕಾರಣ ಕೇಳುವ ನೋಟೀಸು ಸಂಖ್ಯೆ: ಇಡಿ 20 ಡಿಜಿಪಿ 2010, ದಿನಾಂಕ 19–04–2010

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಸಂಖ್ಯೆ (1)ರಲ್ಲಿ ಮಧುಗಿರಿ ಶೈಕ್ಷಣಿಕ ಜಿಲ್ಲೆಯ ಹಿಂದಿನ ಉಪ ನಿರ್ದೇಶಕರಾಗಿದ್ದ ಶ್ರೀ ವಿ. ಸದಾಶಿವಮೂರ್ತಿ, ಇವರು ಶಿಕ್ಷಕರ ವರ್ಗಾವಣೆ ನಿಯಂತ್ರಣ ನಿಯಮಗಳು 2007ರ ನಿಯಮ–8 ಉಪ ನಿಯಮ–12ನ್ನು ಉಲ್ಲಂಘಿಸಿ, ಗಂಗಾವತಿ ತಾಲ್ಲೂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಹ ಶಿಕ್ಷಕರನ್ನು ಶಿರಾ ತಾಲ್ಲೂಕಿನ ಶಾಲೆಗೆ ವರ್ಗಾಯಿಸಿ, ದಿನಾಂಕ 23–10–2007 ರಂದು ಸ್ಥಳ ನಿಯುಕ್ತಿ ಆದೇಶ ಹೊರಡಿಸಿರುವುದು ನಿಯಮಬಾಹಿರವಾಗಿದ್ದು, ಇದರಿಂದ ಸರ್ಕಾರ ಹಾಗೂ ಆಯುಕ್ತಾಲಯವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಾರೆಂದು ವರದಿ ಮಾಡುತ್ತಾ ಸದರಿ ಅಧಿಕಾರಿಯು ದಿನಾಂಕ 31–12–2007 ರಂದು ವಯೋನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣೆ ಪಟ್ಟಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಶ್ರೀ ವಿ. ಸದಾಶಿವಮೂರ್ತಿ, ನಿವೃತ್ತ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಶೈಕ್ಷಣಿಕ ಜಿಲ್ಲೆ, ಇವರ ಮೇಲಿನ ಆರೋಪಗಳ ಬಗ್ಗೆ ಶಿಸ್ತು ಕ್ರಮ ಜರುಗಿಸಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 1958ರ ನಿಯಮ–214ರಡಿ ಮಂಜೂರಾತಿ ನೀಡಲಾಗಿದೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಆರೋಪಿತ ಅಧಿಕಾರಿಗೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳ ನಿಯಮ–11ರನ್ವಯ ಕಾರಣ ಕೇಳುವ ನೋಟೀಸನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ ಜಾರಿಗೊಳಿಸಲಾಗಿದೆ. ಈ ಕಾರಣ ಕೇಳುವ ನೋಟೀಸಿಗೆ ಅಧಿಕಾರಿಯು ಈವರೆಗೆ ತಮ್ಮ ಪ್ರತಿರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ ಆರೋಪಿತ ಅಧಿಕಾರಿಯು ನಿಗಧಿಪಡಿಸಿದ ಅವಧಿಯೊಳಗೆ ಹಾಗೂ ಈವರೆಗೆ ತಮ್ಮ ಪ್ರತಿರಕ್ಷಣಾ ಹೇಳಿಕೆ ಸಲ್ಲಿಸದೆ ಇರುವ ಕಾರಣ ಈ ವಿಷಯದಲ್ಲಿ ಅವರ ಹೇಳಿಕೆ ಏನು ಇರುವುದಿಲ್ಲವೆಂದು ಭಾವಿಸಿ, ಸದರಿಯವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಸತ್ಯಾಸತ್ಯತೆಯನ್ನು

ತಿಳಿದುಕೊಳ್ಳಲು ಕೂಲಂಕಷವಾಗಿ ವಿಚಾರಣೆ ಮಾಡುವುದು ಸೂಕ್ತವೆಂದು ನಿರ್ಣಯಿಸಿದ್ದು, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ–214 ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮ 214 ಮತ್ತು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿಗಳು 1957ರ ನಿಯಮ–11 ರಡಿ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಕ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 20 ಡಿಜಿಪಿ 2010, ಬೆಂಗಳೂರು, ದಿನಾಂಕ : 18–06–2011

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಶ್ರೀ ವಿ. ಸದಾಶಿವಮೂರ್ತಿ, ನಿವೃತ್ತ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಶೈಕ್ಷಣಿಕ ಜಿಲ್ಲೆ ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ–214 ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮ 214 ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ–11(2) ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಶ್ರೀ ಎ. ಎಲ್. ಪೂಜಾರ್, ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು, ಜೆ.ಐ.ಸಿ.–501, ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು–560047. ಇವರನ್ನು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ನಿಯಮ–11(5)(ಸಿ) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಶೈಕ್ಷಣಿಕ ಜಿಲ್ಲೆ, ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಿ ಆದೇಶಿಸಿದೆ.

ವಿಚಾರಣೆ ನಡೆಸಲು ಸ್ಥಳಾವಕಾಶವನ್ನು ನೀಡಲು ಹಾಗೂ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸೇವೆಯನ್ನು ವಿಚಾರಣಾಧಿಕಾರಿಗೆ ಒದಗಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಿದೆ.

ವಿಚಾರಣಾಧಿಕಾರಿಗಳು ವಿಚಾರಣಾ ವರದಿ ಸಲ್ಲಿಸಿದ ನಂತರ ಅವರಿಗೆ ರೂ. 8,000/– ಗಳ ಸಂಭಾವನೆಯನ್ನು ಮತ್ತು ರೂ. 1,500/– ಗಳ ಸಾರಿಗೆ ಭತ್ಯೆಯನ್ನು ಮಂಜೂರು ಮಾಡಲು ಸೂಚಿಸಿದೆ.

ವಿಚಾರಣಾಧಿಕಾರಿಗಳು ಆರೋಪದ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 2 ತಿಂಗಳೊಳಗಾಗಿ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಆಡಳಿತ)

ಪಿ.ಆರ್. 1563

ವಸತಿ ಸಚಿವಾಲಯ

ವಿಷಯ : "ನನ್ನ ಮನೆ–ನನ್ನ ಸ್ವತ್ತು" ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ವಇ 76 ಹೆಚ್‌ಎಎಮ್ 2010, ದಿನಾಂಕ : 13–4–2010.

ಪ್ರಸ್ತಾವನೆ :

2011–12ರ ಆಯವ್ಯಯದಲ್ಲಿ ಸರ್ಕಾರವು "ನನ್ನ ಮನೆ–ನನ್ನ ಸ್ವತ್ತು" ಎಂಬ ನೂತನ ಯೋಜನೆಯನ್ನು ಪ್ರಕಟಿಸಿದ್ದು, ರಾಜ್ಯದಲ್ಲಿ ಆಶ್ರಯ ಯೋಜನೆ ಸೇರಿದಂತೆ ಮತ್ತಿತರ ಯೋಜನೆಗಳಡಿಯಲ್ಲಿ ಮನೆಗಳ ನಿರ್ಮಾಣಕ್ಕೆ ಫಲಾನುಭವಿಗಳು ಪಡೆದಂತಹ ಸಾಲವನ್ನು ಮರುಪಾವತಿಸಲು ಮುಂದೆ ಬಂದರೆ ಅವರ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲು ಹಾಗೂ ಅವರ ನಿವೇಶನ/ಮನೆಯನ್ನು ಅಡಮಾನದಿಂದ ಮುಕ್ತಿಗೊಳಿಸಲು ಪ್ರಸ್ತಾಪಿಸಲಾಗಿದೆ. ಇದರಿಂದ ಫಲಾನುಭವಿಗಳು ತಮ್ಮ ಮನೆಯನ್ನು ವಿಸ್ತರಿಸಿಕೊಳ್ಳಲು ಬ್ಯಾಂಕ್ ಅಥವಾ ಇನ್ನಿತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸಹಾಯವಾಗುವುದು. ಇತ್ತೀಚೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ನಿರ್ಮಿಸಲ್ಪಟ್ಟ ಆಶ್ರಯ ಮನೆಗಳ ನಿರ್ಮಾಣಕ್ಕಾಗಿ ನೀಡಿದ ಸಾಲದ ಮೇಲಿನ 31ನೇ ಮಾರ್ಚ್ 2010ರವರೆಗಿನ ಅಸಲಿನ ಕಂತುಗಳನ್ನು 31ನೇ ಡಿಸೆಂಬರ್ 2010ರೊಳಗೆ ಮರುಪಾವತಿ ಮಾಡುವ ಫಲಾನುಭವಿಗಳಿಗೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿ ಸರ್ಕಾರವು ಆದೇಶ ಹೊರಡಿಸಿತ್ತು. ಈಗ ಸರ್ಕಾರವು ಆಶ್ರಯ ಯೋಜನೆಯಲ್ಲದೇ ಸರ್ಕಾರದ ಇತರ ಎಲ್ಲಾ ಯೋಜನೆಗಳಡಿಯಲ್ಲಿಯೂ ನಿರ್ಮಿಸಿದ ಮನೆಗಳ ಸಾಲ ಮರುಪಾವತಿ ಮಾಡುವ ಫಲಾನುಭವಿಗಳಿಗೆ ಪೂರ್ತಿ ಬಡ್ಡಿ ಮನ್ನಾ ಮಾಡಲು ಪ್ರಸ್ತಾಪಿಸಿದೆ. ಮೇಲೆ ತಿಳಿಸಿದ ಈ ಯೋಜನೆಗಳಡಿ ವಸತಿ ಸೌಕರ್ಯ ಪಡೆದ ಫಲಾನುಭವಿಗಳ ಮನವೊಲಿಸಿ ಸಾಲ ವಸೂಲಾತಿ ಪ್ರಕ್ರಿಯೆಯನ್ನು ಗ್ರಾಮ ಪಂಚಾಯ್ತಿಗಳ ಮೂಲಕ/ಸ್ಥಳೀಯ ಸಂಸ್ಥೆಗಳ ಮೂಲಕ/ಸರ್ಕಾರೇತರ ಸಂಸ್ಥೆಗಳ ಮೂಲಕ/ಸ್ವ ಸಹಾಯ ಗುಂಪುಗಳ ಮೂಲಕ ಅಥವಾ ಇತರೆ ವಸೂಲಾತಿಗಾಗಿ ನೇಮಕ ಮಾಡಿಕೊಂಡ ಸಂಘ–ಸಂಸ್ಥೆಗಳ ಮೂಲಕ ನಿರ್ವಹಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ, ಈ ಕೆಳಕಾಣಿಸಿದಂತೆ ಆದೇಶವನ್ನು ಪ್ರಸ್ತಾಪಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 20 ಹೆಚ್‌ಎಎಚ್ 2011, ಬೆಂಗಳೂರು, ದಿನಾಂಕ : 20–6–2011.

ರಾಜ್ಯದಲ್ಲಿ " ನನ್ನ ಮನೆ–ನನ್ನ ಸ್ವತ್ತು" ಯೋಜನೆಯನ್ನು ತಕ್ಷಣದಿಂದ ಜಾರಿಗೆ ತರಲು ಈ ಕೆಳಗಿನಂತೆ ಆದೇಶಗಳನ್ನು ಹೊರಡಿಸಲಾಗಿದೆ.

(ಅ) ಆಶ್ರಯ, ಜನತಾ ಮನೆಗಳು, ಭಾಗ್ಯ ಮಂದಿರ, ನೆರಳಿನ ಭಾಗ್ಯ, ಗ್ರಾಮೀಣ ಆಶ್ರಯ, ನಗರ ಆಶ್ರಯ, ಗ್ರಾಮೀಣ ಅಂಬೇಡ್ಕರ್, ನಗರ ಅಂಬೇಡ್ಕರ್, ಪಿ.ಎಂ.ಜಿ.ಡ್.ವೈ., ಮತ್ತು ಇಂದಿರಾ ಆವಾಸ್ ಯೋಜನೆ, ಬೀಡಿ ಕಾರ್ಮಿಕರು, ಮೀನುಗಾರರು, ನೇಕಾರರು ಮತ್ತು ಹಮಾಲರ ವಸತಿ ಯೋಜನೆ ಇತ್ಯಾದಿ ವಸತಿ ಯೋಜನೆಗಳಡಿಯಲ್ಲಿ ಸಾಲ ಪಡೆದು ಮನೆಗಳನ್ನು ನಿರ್ಮಿಸಿಕೊಂಡ ಗ್ರಾಮೀಣ ಪ್ರದೇಶದ ಸಾಮಾನ್ಯ ವರ್ಗದ ಫಲಾನುಭವಿಗಳು ತಮ್ಮ ಸಾಲವನ್ನು ಸಂಪೂರ್ಣವಾಗಿ ಪ್ರಸಕ್ತ ಆರ್ಥಿಕ ಸಾಲಿನ ಅಂತ್ಯದೊಳಗಾಗಿ ಅಂದರೆ ದಿನಾಂಕ : 31–3–2012ರೊಳಗಾಗಿ ಮರುಪಾವತಿಸಿದರೆ ಅಂತಹವರ ಬಡ್ಡಿಯನ್ನು ಮನ್ನಾ ಮಾಡಿ ಅವರ ನಿವೇಶನ/ಮನೆಯನ್ನು ಅಡಮಾನದಿಂದ ಮುಕ್ತಗೊಳಿಸುವುದು.

(ಆ) ನಗರ ಆಶ್ರಯ ಯೋಜನೆಯಡಿಯಲ್ಲಿ ಸಾಲ ಪಡೆದು ಮನೆಗಳನ್ನು ನಿರ್ಮಿಸಿಕೊಂಡ ನಗರ ಪ್ರದೇಶದ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳು ತಮ್ಮ ಸಾಲವನ್ನು ಸಂಪೂರ್ಣವಾಗಿ ಪ್ರಸಕ್ತ ಆರ್ಥಿಕ ಸಾಲಿನ ಅಂತ್ಯದೊಳಗಾಗಿ ಅಂದರೆ ದಿನಾಂಕ : 31–3–2012 ರೊಳಗಾಗಿ ಮರುಪಾವತಿಸಿದರೆ ಅಂತಹವರ ಬಡ್ಡಿಯನ್ನು ಮನ್ನಾ ಮಾಡಿ ಅವರ ನಿವೇಶನ/ಮನೆಯನ್ನು ಅಡಮಾನದಿಂದ ಮುಕ್ತಗೊಳಿಸುವುದು.

(ಇ) ವಿಶೇಷ ಗುಂಪು ಯೋಜನೆಯಡಿಯಲ್ಲಿ ಸಾಲ ಪಡೆದು ಮನೆಗಳನ್ನು ನಿರ್ಮಿಸಿಕೊಂಡ ನಗರ ಹಾಗೂ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳು ತಮ್ಮ ಸಾಲವನ್ನು ಸಂಪೂರ್ಣವಾಗಿ ಪ್ರಸಕ್ತ ಆರ್ಥಿಕ ಸಾಲಿನ ಅಂತ್ಯದೊಳಗಾಗಿ ಅಂದರೆ

ದಿನಾಂಕ : 31–3–2012ರೊಳಗಾಗಿ ಮರುಪಾವತಿಸಿದರೆ ಅಂತಹವರ ಬಡ್ಡಿಯನ್ನು ಮನ್ನಾ ಮಾಡಿ ಅವರ ನಿವೇಶನ/ಮನೆಯನ್ನು ಅಡಮಾನದಿಂದ ಮುಕ್ತಗೊಳಿಸುವುದು.

(ಈ) ಆಶ್ರಯ ಮತ್ತಿತರ ವಸತಿ ಯೋಜನೆಗಳಡಿಯಲ್ಲಿ ಸಾಲದ ಬದಲಾಗಿ ಸಹಾಯಧನ ಪಡೆದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಿಕೊಂಡ ಪರಿಶಿಷ್ಟ ಜಾತಿ/ ಪಂಗಡದ ಫಲಾನುಭವಿಗಳು ತಮ್ಮ ಆಸ್ತಿಯನ್ನು ಅಡಮಾನದಿಂದ ಮುಕ್ತಗೊಳಿಸಲು ಕೋರಿದಲ್ಲಿ, ಪ್ರತಿ ಫಲಾನುಭವಿಯಿಂದ ನಾಮಮಾತ್ರಕ್ಕೆ ಘಟಕ ವೆಚ್ಚದ ಶೇಕಡ 3 ರಷ್ಟು ಶುಲ್ಕವನ್ನು ಮಾತ್ರ ಕಟ್ಟಿಸಿಕೊಂಡು ಅವರ ನಿವೇಶನ/ಮನೆಯನ್ನು ಅಡಮಾನದಿಂದ ಮುಕ್ತಗೊಳಿಸುವುದು.

(ಉ) ನಿವೇಶನ ಮತ್ತು ಮನೆ ಎರಡನ್ನು ಸರ್ಕಾರದ ನೆರವಿನಿಂದ ಪಡೆದುಕೊಂಡ ಫಲಾನುಭವಿಯು ಅಡಮಾನದ ಅವಧಿಗೆ ಮುನ್ನ ಅಡಮಾನದಿಂದ ಮುಕ್ತನಾಗಬಯಸಿದಲ್ಲಿ ಫಲಾನುಭವಿಯು ಮೇಲೆ ವಿವರಿಸಿದಂತೆ ಸಾಲ ತೀರಿಸುವುದಲ್ಲದೇ, ನಿವೇಶನಕ್ಕಾಗಿ ಗ್ರಾಮೀಣ ಪ್ರದೇಶವಾದರೆ 3000 ರೂ.ಗಳನ್ನು, ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಾದರೆ 20,000 ರೂ.ಗಳು, ಮಹಾನಗರ ವ್ಯಾಪ್ತಿಯಲ್ಲಾದರೆ 15,000 ರೂ.ಗಳು, ನಗರಸಭೆ ವ್ಯಾಪ್ತಿಯಲ್ಲಾದರೆ 10,000 ರೂ.ಗಳು, ಪುರಸಭೆ ವ್ಯಾಪ್ತಿಯಲ್ಲಾದರೆ 5000 ರೂ.ಗಳು, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಾದರೆ 3,000 ರೂ.ಗಳನ್ನು ನೀಡಿದಲ್ಲಿ ಮನೆಯೊಂದಿಗೆ ನಿವೇಶನವನ್ನು ಸಹ ಅಡಮಾನದಿಂದ ಮುಕ್ತಗೊಳಿಸುವುದು.

(ಊ) ಸಾಲ ವಸೂಲಾತಿ ಪ್ರಕ್ರಿಯೆಯನ್ನು ಗ್ರಾಮ ಪಂಚಾಯಿತಿಗಳು/ಸ್ಥಳೀಯ ಸಂಸ್ಥೆಗಳು ಮಾತ್ರವಲ್ಲದೇ ಸರ್ಕಾರೇತರ ಸಂಸ್ಥೆಗಳು/ಸಂಘ–ಸಂಸ್ಥೆಗಳು/ಸ್ವ ಸಹಾಯ ಸಂಘಗಳು/ಯುವಕ ಸಂಘಗಳೂ ಸಹ ಜರುಗಿಸಬಹುದಾಗಿದ್ದು, ಅವು ವಸೂಲಿ ಮಾಡುವ ಹಣಕ್ಕೆ ಶೇ.3 ರಷ್ಟು ಪ್ರೋತ್ಸಾಹ ಧನವನ್ನು ನೀಡಲು ಮತ್ತು ಈ ಸಂಘ–ಸಂಸ್ಥೆಗಳು ಫಲಾನುಭವಿಗಳಿಗೆ ಬ್ಯಾಂಕ್‌ನಿಂದ ಸಾಲದ ನೆರವನ್ನು ದೊರಕಿಸಿಕೊಡಲು ನೆರವಾದಲ್ಲಿ ಅವರಿಗೆ ವಸೂಲಾತಿಯ ಶೇ. 5ರಷ್ಟು ಪ್ರೋತ್ಸಾಹ ಧನವನ್ನು ನೀಡುವುದು. ಇಂತಹ ಸಂಸ್ಥೆಗಳನ್ನು ಜಿಲ್ಲಾವಾರು ಆಯ್ಕೆ ಮಾಡಿ ನೇಮಕ ಮಾಡಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಕ್ರಮ ಕೈಗೊಳ್ಳತಕ್ಕದ್ದು. ಆದರೆ, ಫಲಾನುಭವಿಗಳಿಂದ ವಸೂಲಾಗುವ ಸಾಲದಲ್ಲಿ ಶೇಕಡ 25ರಷ್ಟು ಪ್ರೋತ್ಸಾಹಧನವನ್ನು ಗ್ರಾಮ ಪಂಚಾಯಿತಿಗಳು/ಸ್ಥಳೀಯ ಸಂಸ್ಥೆಗಳು ಉಪಯೋಗಿಸಿಕೊಳ್ಳುವ ಬಗ್ಗೆ ಈ ಹಿಂದೆ ಹೊರಡಿಸಲಾದ ಆದೇಶವನ್ನು ತಕ್ಷಣದಿಂದ ಹಿಂತೆಗೆದುಕೊಂಡು ಅದರ ಬದಲಾಗಿ ಶೇಕಡ 10ರಷ್ಟು ಪ್ರೋತ್ಸಾಹಧನವನ್ನು ನೀಡಲು ಆದೇಶ ಹೊರಡಿಸುವುದು ; ಮತ್ತು

(ಎ) ಈ ಯೋಜನೆಯು 31–3–2011ರ ಅಂತ್ಯಕ್ಕೆ ವಿವಿಧ ವಸತಿ ಯೋಜನೆಗಳಡಿ ಪೂರ್ಣಗೊಂಡ ಮನೆಗಳಿಗೆ ಮಾತ್ರ ಅನ್ವಯಿಸುತ್ತಿರುವುದರಿಂದ ಸದರಿ ಫಲಾನುಭವಿಗಳು 31–3–2012ರೊಳಗೆ ಈ ಯೋಜನೆಯ ಪ್ರಯೋಜನ ಪಡೆಯಬಹುದು. ತದನಂತರ ಈ ವಿನಾಯಿತಿಯು ಅನ್ವಯವಾಗುವುದಿಲ್ಲ ಹಾಗೂ ಈ ಅವಧಿಗೂ ಮುನ್ನ ಸಂಪೂರ್ಣ ಸಾಲದ ಮೊತ್ತವನ್ನು ಮತ್ತು ಬಡ್ಡಿ ಮೊತ್ತವನ್ನು ಪಾವತಿಸಿದ ಫಲಾನುಭವಿಗಳಿಗೆ ಬಡ್ಡಿ ಮೊತ್ತವನ್ನು ಹಿಂತಿರುಗಿಸಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್. ಹನುಮಂತಯ್ಯ

ಪಿ.ಆರ್.ನಂ. 1564 ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ.

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ.ಸಂ. 40–41ರ ರಸ್ತೆ ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಮೂಅಇ 65 ರಾರಾಹೆ 2007, ದಿನಾಂಕ : 27–7–07.
2. ಸರ್ಕಾರದ ಆದೇಶ ಸಂಖ್ಯೆ : ಮೂಅಇ 65 ರಾರಾಹೆ 2007, ದಿನಾಂಕ : 15–12–2008.
3. ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ದಿನಾಂಕ : 6–2–2010ರ ಸರ್ಕಾರಿ ಆದೇಶ.
4. ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ದಿನಾಂಕ : 10–6–2010ರ ಸರ್ಕಾರಿ ಆದೇಶ.
5. ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ದಿನಾಂಕ : 27–9–2010ರ ಸರ್ಕಾರಿ ಆದೇಶ.
6. ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ದಿನಾಂಕ : 27–9–2010ರ ಸರ್ಕಾರಿ ಆದೇಶ.
7. ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡ, ತುಮಕೂರು ಇವರ ದಿನಾಂಕ 13–5–2011. ಪತ್ರ ಸಂಖ್ಯೆ : ಕಾನಿಅ:ಲೋಬಂಜಸಾಇ : ತುವಿ: ಲೆಶಾ: ಲೆ.ಸ. 7: 5465 : ಆರ್‌ಒಬಿ ಅನುದಾನ ಬಿಡುಗಡೆ : 2011–12.

ಪ್ರಸ್ತಾವನೆ :

ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ.ಸಂ. 40–41ರ ರಸ್ತೆ ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರ ಶೇ 50:50 ವೆಚ್ಚವನ್ನು ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಹಾಗೂ ಸದರಿ ರಸ್ತೆಯ ಕಾಮಗಾರಿಗೆ ಬೇಕಾಗುವ ಭೂಸ್ವಾಧೀನ ಹಾಗೂ ನಾಗರೀಕ ಸೌಲಭ್ಯಗಳ ಸ್ಥಳಾಂತರಕ್ಕೆ ಕ್ರಮವಾಗಿ ರೂ. 342.00 ಮತ್ತು 349.10 ಲಕ್ಷಗಳನ್ನು ಮತ್ತು ಕಾಮಗಾರಿಗೆ ತಗಲುವ ಶೇ 50 ರಷ್ಟು ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ರೂ. 585.00 ಲಕ್ಷಗಳನ್ನು ಮೇಲೆ ಓದಲಾದ (1),(2), (3), (4) ಮತ್ತು (5) ರ ಸರ್ಕಾರಿ ಆದೇಶಗಳಲ್ಲಿ ರೂ. 150.00 ಲಕ್ಷಗಳನ್ನು ಮೇಲೆ ಓದಲಾದ (6) ಸರ್ಕಾರಿ ಆದೇಶದಲ್ಲಿಯೂ ಸಹ ಬಿಡುಗಡೆ ಮಾಡಲಾಗಿತ್ತು.

2. ಎಲ್.ಸಿ ಸಂಖ್ಯೆ 40–41 ರಲ್ಲಿ ರಸ್ತೆ ಮೇಲು ಸೇತುವೆಗೆ ಕೂಡು ರಸ್ತೆ ನಿರ್ಮಿಸುವ ಕಾಮಗಾರಿಯು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, ಇನ್ನಿತರ ಕಾಮಗಾರಿಗಳೂ ಸಹ ನಡೆಯುತ್ತಿದೆ. ಮೇಲೆ ಓದಲಾದ (3)ರ ಆದೇಶದಲ್ಲಿ ಬಿಡುಗಡೆ ಮಾಡಿರುವ ಮೊತ್ತ ರೂ. 3.00 ಕೋಟಿಗಳಲ್ಲಿ ದಿನಾಂಕ 31–3–2010ರ ಅಂತ್ಯಕ್ಕೆ ರೂ. 1,83,29,041/– ಲಕ್ಷಗಳನ್ನು ಮಾತ್ರ ಉಪಯೋಗಿಸಿಕೊಂಡಿದ್ದು, ಉಳಿದ ಮೊತ್ತ ರೂ. 1,16,70,959/– ಲಕ್ಷಗಳು ಲ್ಯಾಪ್ಸ್ ಆಗಿದ್ದು, ಡ್ರಾ ಮಾಡಿರುವ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ನೀಡಿರುವುದನ್ನು ಪರಿಗಣಿಸಿ ಮೇಲೆ ಓದಲಾದ (4) ರ ಆದೇಶದಲ್ಲಿ ರೂ. 2.00 ಕೋಟಿಯನ್ನು ಬಿಡುಗಡೆ ಮಾಡಲಾಗಿತ್ತು. ಒಟ್ಟಾರೆ ಈ ಯೋಜನೆಗೆ ರಾಜ್ಯ ಸರ್ಕಾರವು ರೂ. 1309.39 ಲಕ್ಷಗಳನ್ನು (ಲ್ಯಾಪ್ಸ್ ಆಗಿರುವ ಮೊತ್ತ ರೂ. 1,16,70,959/– ಗಳನ್ನು ಒಳಗೊಂಡು) ಬಿಡುಗಡೆ ಮಾಡಿದಂತಾಗಿದೆ.

3. ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಕಾಮಗಾರಿಗೆ ತಗಲುವ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಬಾಕಿ ಮೊತ್ತ ರೂ. 259.57 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಮೇಲೆ ಓದಲಾದ (7) ರ ಪತ್ರದಲ್ಲಿ ಲೋಕೋಪಯೋಗಿ ಇಲಾಖೆಯ, ಕಾರ್ಯಪಾಲಕ ಇಂಜಿನಿಯರ್‌ರವರು ಕೋರಿದ್ದಾರೆ.

4. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 34 ರಾರಾಹೆ 2009, ಬೆಂಗಳೂರು, ದಿನಾಂಕ : 7–06–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತುಮಕೂರು ನಗರದ ಉಪ್ಪಾರಹಳ್ಳಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ. ಸಂ. 40–41ರ ರಸ್ತೆ ಮೇಲು ಸೇತುವೆಯ ಕೂಡು ರಸ್ತೆ ನಿರ್ಮಾಣದ ಕಾಮಗಾರಿಗೆ ರಾಜ್ಯ ಸರ್ಕಾರದ ಪಾಲಿನ ಬಾಕಿ ಮೊತ್ತದಲ್ಲಿ ರೂ. 150.00 ಲಕ್ಷಗಳನ್ನು (ರೂಪಾಯಿ ಒಂದು ನೂರಾ ಐವತ್ತು ಲಕ್ಷಗಳು ಮಾತ್ರ) 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04–(ಯೋಜನೆ)–211 ಬಂಡವಾಳ" ಇದರ ಅಡಿಯಲ್ಲಿ ರಸ್ತೆ ಮೇಲು ಸೇತುವೆ/ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಣೆ ಮಾಡಿರುವ ರೂ. 21.39 ಕೋಟಿಗಳಿಂದ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ತುಮಕೂರು ವಿಭಾಗ, ತುಮಕೂರು ಇವರಿಗೆ ಬಿಡುಗಡೆ ಮಾಡಿದೆ.

2. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು ಸಾದಿಲ್ವಾರು ಬಿಲ್ಲಿನ ಮೂಲಕ ಸೆಳೆದು ಸಂಬಂಧಪಟ್ಟವರಿಗೆ ಖಜಾನೆ ಚೆಕ್ ಮೂಲಕ ಕೊಡತಕ್ಕದ್ದು.

3. ಈ ಆದೇಶವನ್ನು ದಿನಾಂಕ : 16–5–2008 ಸಂಖ್ಯೆ : FD 1 TFP 2008 ಸರ್ಕಾರಿ ಆದೇಶದಲ್ಲಿ ಇಲಾಖೆಯು ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಿ.ಎ. ಬಾಬುರವೀಂದ್ರನಾಥ ಪಟೇಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಪಿ.ಆರ್. ನಂ. 1565

FORESTS, ECOLOGY AND ENVIRONMENT SECRETARIAT

Sub : Verification/recognition of rights of tribals and forest dwellers on forest land and constitution of Committees at Village/Taluk/District and State Level.

Read : 1. Government of India letter No. F.No. 2-3/2004-FC, dated : 3-11-2005.
2. G.O. No. FEE 226 FGL 2005, dated : 6-3-2006.

Preamble:

Government of India in its letter No. 2-3/2004-FC, dated 3-11-2005 referred at (1) above has issued guidelines to the State Government for verification/recognition of rights of tribals and forest dwellers on forest land. Based on the guidelines from Government of India, Government has constituted committees at Village Level/Taluk Level/District Level and State Level vide G.O. dated : 6-3-2006 referred at (2) above to verify and review the claims of disputed settlement of tribal and forest dwellers on forest land prior to 24-10-1980.

Government of India has enacted the Scheduled Tribes and Other Traditional Forest Dwellers (Recognition of Forest Rights) Act, 2006 to recognize and vest the forest rights and occupation in forest land in forest dwelling, Schedule Tribes and other Traditional Forest Dwellers who have been residing in such forest for generation but whose rights could not be recorded ; to provide for a frame work for recording the forest rights so vested and the nature of evidence for such recognition and vesting in respect of forest land.

This Act provides that the Gram Sabha shall be the authority to initiate the process for determining the nature and extent of individual or community forest rights or both that may be given to the forest dwelling Scheduled Tribes and other traditional forest dwellers within the local limits of its jurisdiction under this Act by receiving claims, consolidating and verifying them and preparing a map delineating the area of each recommended claim in such manner as may be prescribed for exercise of such rights.

This Act provides for the constitution of Sub Divisional Level Committees and District Level Committees and State Level Monitory Committees.

Village Level, Taluk Level, District Level and State Level Committees and its composition as constituted vide Government Order referred at (2) above does not find any place in the Schedule Tribes and Other Traditional Forest Dwellers (Recognition of Forest Rights) Act 2006. Hence this order :

GOVERNMENT ORDER NO. FEE 226 FGL 2005, BANGALORE, DATED 15-6-2011

In the circumstances explained in the preamble above, Government Order No. FEE 226 FGL 2005, dated 6-3-2006 is withdrawn with immediate effect.

By Order and in the name of the Governor of Karnataka,
H.M. MALLIKARJUNA SWAMY
Under Secretary to Government,
Forests, Ecology and Environment Department.

P.R. No. 1566

FOREST, ECOLOGY AND ENVIRONMENT SECRETARIAT

Sub : Creation of additional posts of Environmental Officers in the Karnataka State Pollution Control Board-issue of orders –reg.

Read : 1. Letter No. ಮಾನಿಮಂ/ಆಡಳಿತ/2010–11/17, dated 11-4-2011 from Member Secretary KSPCB, Bangalore.
2. Proceedings of the 160th Board meeting dated 26-10-2005 & O.M. No. ಕರಾಮಾನಿಮಂ/ಆಡಳಿತ/2006–07/312, dated : 4-5-2006.

Preamble:

The Karnataka State Pollution Control Board in their Board meeting held on 26-10-2005 had discussed regarding establishing new Regional offices and also to create various posts in the Board, in view of the increased work load. Accordingly, the Board in their O.M. read at (2) above have issued orders creating 25 posts of Environmental Officers in addition to the existing strength of 16 Environmental Officers in the Board.

Now, the Member Secretary, Karnataka State Pollution Control Board (KSPCB) vide their letter read at (1) above have sent a proposal and reported that the Board in its meeting held on 7-1-2011 have resolved to create 16 new posts of Environmental Officers in the Technical wing of the Board in view of the establishment of new Regional offices in the State, thus increasing the sanctioned strength from 41 to 57 posts of Environmental Officers.

The matter has been examined by the Government and proposal is agreed, and hence the order.

GOVERNMENT ORDER NO. FEE 66 EPC 2011, BANGALORE, DATED 14-6-2011

In the circumstances explained in the preamble and in exercise of powers conferred under Section 12(3) (3A & B) of the Water (Prevention and Control of Pollution) Act 1974 read with amended provisions issued in Govt. Notification No. FEE 7 EPC 2010, dt. 30-9-2010, Government are pleased to accord sanction for creation of 16 additional posts of Environmental Officers in the Technical wing of the Karnataka State Pollution Control Board (KSPCB) and revising the sanctioned strength from 41 to 57 posts of Environmental Officers.

The expenditure on account of creation of additional posts shall be borne entirely by the Board out of its own funds.

By Order and in the name of the Governor of Karnataka,
B.MANOHAR
Under Secretary to Government,
(Ecology and Environment),
Forests, Ecology and Environment Department.

P.R. No. 1567

FOREST, ECOLOGY AND ENVIRONMENT SECRETARIAT

Sub : Improvement of existing approach road passing through the Reserve Forest in Bidar Taluk, Sahapur Village Km. from 0.00 to 3.50 Km.

Read : 1. Letter No. A5(4) Misc. CR.39/10-11, dated 19-4-2011 of Principal Chief Conservator of Forests, Bangalore.
2. Government of India letter No. F.No. 11-48/2002-FC, dated 14-9-2004.

Preamble:

Principal Chief Conservator of Forests, Bangalore vide his letter dated 19-4-2011 read at (1) above has submitted the proposal for permission to improvement of existing approach road width of 3.75 meter BT carriage road which is passing through the Reserve Forest in Sahapur Village in Forest Sy. No. 4,9,10,12,14,21 and 22 in Bidar Taluk, Km. from 0.00 to 3.50 Km under the Forest (Conservation) Act, 1980 and its guidelines.

This proposal has been examined as per the general approval of Government of India in its guidelines dated : 14-9-2004 under the Forest (Conservation) Act, 1980. The proposal has been examined in detail and hence the order.

GOVERNMENT ORDER NO. FEE 71 FLL 2011, BANGALORE, DATED 15-6-2011

In the circumstances explained in the preamble above and in accordance with the general approval given by Government of India in their guidelines dated : 14-9-2004 Government is pleased to accord permission under Forest (Conservation) Act 1980 for improvement of existing approach road width of 3.75 meters BT carriage road which is passing through the Reserve Forest in Sahapur Village in Forest Sy. No. 4,9,10,12,14,21 and 22 in Bidar Taluk, Km. from 0.00 to 3.50 Km subject to following conditions.

1. No tree felling should be allowed.
2. No widening of roads should be undertaken without prior permission of the Central Government under Forest (Conservation) Act, 1980.
3. No breaking of forest land is carried out.
4. The legal status of the forest land shall remain unchanged and it shall continue as forest land.
5. The lessee shall deposit the amount estimated by the concerned Divisional Forest Officer for afforestation works on both side of the road.
6. The User Agency shall ensure that there should be no damage to the available fauna and flora.
7. The Karnataka Forest Act 1963 and Rules 1969 and other relevant Acts and Rules will be applicable for any violation.
8. Action should be initiated against the Asst. Executive Engineer and Asst. Engineer who have started work without permission and violating the Forest (Conservation) Act, 1980.
9. Any damage to forest area due to such works shall be compensated by the User Agency. The extent of damage shall be assessed by the concerned Deputy Conservator of Forest.
10. The User Agency shall abide by all the conditions imposed upon by the Government of India, the Government of Karnataka and the Principal Chief Conservator of Forests (HoFF).

By Order and in the name of the Governor of Karnataka,
H.M. MALLIKARJUNA SWAMY
Under Secretary to Government,
Forests, Ecology and Environment Department.

P.R. No. 1568